
ಜನಶಕ್ತಿ
ದುಡಿವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 51
ಡಿಸೆಂಬರ್ 18, 2011
ಪುಟ 16 ರೂ. 5/-

ವಿಶ್ವಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ



ಕೃಷಿಕ-ಕೃಷಿ ನಾಶದ ನೀಲನಕ್ಷೆ



ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಯುಪಿಎ ಹಿಂದೆ ಸರಿಯಲೇಬೇಕಾಯ್ತು

ಬಳ್ಳಾರಿ : ಬಿಜೆಪಿಗಾದ ಮುಖಭಂಗ





'ಬೀದಿಗೆ ಬಂತು ಭ್ರಷ್ಟಾಚಾರ'

ಅರಬ್ ಚುನಾವಣೆ ಫಲಿತಾಂಶಗಳ ಅರ್ಥವೇನು?

ಕೋಲಾರಕ್ಕೆ ನೀರಾವರಿ ಯೋಜನೆ ಬರಲಿ-ಕೆಜಿಎಫ್ ಪುನರಾರಂಭವಾಗಲಿ

ಸಿಪಿಐ(ಎಂ) ಬಂಗಾರಪೇಟೆ ಸ್ಥಳೀಯ ಸಮ್ಮೇಳನದ ಆಗ್ರಹ

ಬಂಗಾರಪೇಟೆ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಸಮಿತಿಯ ಮೊದಲ ಸಮ್ಮೇಳನವು ದಿನಾ0ಕ 30.10.2011ರ0ದು ಬೆಮೆಲ್ ನಗರದಲ್ಲಿ ಯಶಸ್ವಿಯಾಗಿ ನಡೆದಿದೆ.

ಬೆಳಿಗ್ಗೆ 11.00 ಗ0ಟೆಗೆ ಆಲದ ಮರದ ಬಳಿಯಲ್ಲಿ ಪಕ್ಷದ ಹಿರಿಯ ಸಂಗಾತಿಯಾದ ಚೊಕ್ಕಲಿಂಗಂರವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ನಂತರ ಅಲ್ಲಿ ನೆರೆದಿದ್ದ ಸಂಗಾತಿಗಳು ಮತ್ತು ಸಾರ್ವಜನಿಕರನ್ನು ಉದ್ದೇಶಿಸಿ ಕೋಲಾರ ಜಿಲ್ಲಾ ಕಾರ್ಯದರ್ಶಿಯಾದ .ಜಿ.ಅರ್ಜುನ್‌ರವರು ಮಾತನಾಡಿದರು. ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಬಿ.ಜೆ.ಪಿ.ಯ ಸಚಿವರೆಲ್ಲ ಮುಖ್ಯ ಮ0ತ್ರಿಯೂ ಸೇರಿದ0ತೆ ಒಬ್ಬೊಬ್ಬರಾಗಿ ಜೈಲು ಸೇರುತ್ತಿದ್ದಾರೆ. ಕೆ.ಜಿ.ಎಫ್. ನ ಶಾಸಕ ಸಂಪಂಗಿಯು ಲಂಚ ಪಡೆದು ಜೈಲು ಸೇರಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಿ.ಪಿ.ಐ. (ಎಂ) ಪಕ್ಷ ಮಾತ್ರವೇ ಯಾವುದೇ ರೀತಿಯ ಭ್ರಷ್ಟಾಚಾರವಿಲ್ಲದೆ ಕಳಂಕ ರಹಿತವಾಗಿ ಜನರ ಸಮಸ್ಯೆಗಳಿಗಾಗಿ ಹೋರಾಟ ಮಾಡುತ್ತಿದೆ ಎಂದು ತಿಳಿಸಿದರು.

ನ0ತರ 11.50ಕ್ಕೆ ಎಂ.ವಿ.ನಗರದಲ್ಲಿರುವ ಒಕ್ಕಲಿಗರ ಭವನದಲ್ಲಿ ಎಂ.ಕೆ. ಪಂಥೆಯವರ ಸಭಾಂಗಣದಲ್ಲಿ ಸಮ್ಮೇಳನ ಪ್ರಾರಂಭವಾಯಿತು. ಪಕ್ಷದ ರಾಜ್ಯ ಸಮಿತಿಯ ಸದಸ್ಯರಾಗಿ, ಗಾಂಧೀನಗರ ನಾರಾಯಣಸ್ವಾಮಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಮ್ಮೇಳನವು ಮುಖ್ಯವಾಗಿ ಕೋಲಾರ ಜಿಲ್ಲೆಗೆ ಶಾಶ್ವತ ಕುಡಿಯುವ ನೀರಾವರಿ ಯೋಜನೆ ಜಾರಿಯಾಗಬೇಕು ಮತ್ತು ಚಿನ್ನದ ಗಣಿಯನ್ನು ಸರ್ಕಾರವೇ ಪುನಾರರಂಭಿಸಬೇಕೆಂದು ಘೋಷಣೆಗಳನ್ನು ಇರಿಸಿಕೊಂಡಿತ್ತು. ಅಲ್ಲಿನ ಕಾರ್ಮಿಕರ ಜೀವನ ಶೋಚನೀಯವಾಗಿದೆ. ಸಾವಿರಾರು ಜನ ಕೆಲಸಕ್ಕಾಗಿ ಬೆಂಗಳೂರಿಗೆ ನಿತ್ಯ ಪ್ರಯಾಣಿಸುತ್ತಿದ್ದಾರೆ. ಈ ಬಗ್ಗೆ ಹಲವಾರು ಹೋರಾಟಗಳನ್ನು ನಡೆಸಿದ ಫಲವಾಗಿ ಹೈಕೋರ್ಟ್ ಸರ್ಕಾರವೇ ಗಣಿಯನ್ನು ನಡೆಸಬೇಕೆಂದು ತೀರ್ಪು ನೀಡಿ 2 ವರ್ಷವಾಗಿದ್ದರೂ ಇನ್ನೂ ಪ್ರಾರಂಭಿಸಿಲ್ಲ. ಇದರ ವಿರುದ್ಧ ಜಿಲ್ಲೆಯಾದ್ಯಂತ ಸಹಿ ಸಂಗ್ರಹಣೆ ಮತ್ತು ನಿಧಿ ಸಂಗ್ರಹಣೆ ಮಾಡಲಾಗುತ್ತಿದೆ.

ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಮಾಡಬೇಕೆಂದು ಯೋಜನೆ ಮಾಡಿ ಹೋರಾಟ ರೂಪಿಸಿದ್ದೆ. ಸಿ.ಪಿ.ಐ. (ಎಂ) ಪಕ್ಷ ಇದಕ್ಕಾಗಿ ವಿವಿಧ ಹಂತಗಳಲ್ಲಿ ಹೋರಾಟಗಳು ನಡೆದಿದೆ ಮತ್ತು ಬೆಂಗಳೂರಿಗೆ ಕಾಲ್ನಡಿಗೆ ಜಾಥಾ ಮಾಡಲಾಗಿದೆ. ಇದರ ಫಲವಾಗಿ ಸರ್ಕಾರದ ಗಮನಕ್ಕೆ ಜನರ ಸಮಸ್ಯೆ ತಂದು ಸರ್ವೆ ಮಾಡಲಾಗಿದೆ. ಆದರೆ ಈಗ ಬೇರೆ ರಾಜಕೀಯ ಪಕ್ಷಗಳು ನೀರಾವರಿ ಹೋರಾಟಗಳನ್ನು ಶುರು ಮಾಡಿದ್ದಾರೆ. ಈ ಎಲ್ಲಾ ವಿಷಯಗಳನ್ನು ನಾವು ಜನರಿಗೆ ತಿಳಿಸಬೇಕಾಗಿದೆ.

ಕೋಲಾರ ಜಿಲ್ಲೆಯಲ್ಲಿ ಬಂಗಾರಪೇಟೆಯನ್ನು ಬರ ಪೀಡಿತ ತಾಲ್ಲೂಕು ಎಂದು ಸರ್ಕಾರವೇ ಘೋಷಣೆ ಮಾಡಿದೆ. ಆದರೆ ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ. ರೇಷನ್ ವ್ಯವಸ್ಥೆ ಸರಿಪಡಿಸುವ ಬದಲು ಇನ್ನಷ್ಟು ಗೊಂದಲಗೊಳಿಸುತ್ತಿದ್ದಾರೆ. ಬಡವರನ್ನು ಬಿ.ಪಿ.ಎಲ್. ವ್ಯಾಪ್ತಿಯಿಂದ ಹೊರಗಿಡಲು ಸರ್ಕಾರ ಅನೇಕ ರೀತಿಯ ಹುನ್ನಾರಗಳನ್ನು ಮಾಡುತ್ತಿದೆ. ಜನರ ಸಮಸ್ಯೆಗಳು ತೀವ್ರವಾಗಿದೆ. ಇತ್ತೀಚೆಗೆ ಕೆ.ಜಿ.ಎಫ್. ನಲ್ಲಿ ನಡೆದ ಮಲಗುಂಡಿ ಸ್ವಚ್ಛಗೊಳಿಸುವ ಕಾರ್ಮಿಕರ ದುರ್ಮರಣ ನಾಗರೀಕತೆಯನ್ನೇ ಅಣಕಿಸುವಂತಿದೆ.

ಆಡಳಿತ ಪಕ್ಷ ಬಿ.ಜೆ.ಪಿ. ಅಧಿಕಾರಕ್ಕೆ ಬಂದ 3 ವರ್ಷಗಳಲ್ಲಿ ಭ್ರಷ್ಟಾಚಾರದಲ್ಲಿ ದಾಖಲೆ ಮಾಡಿ ಸಚಿವರೆಲ್ಲ ಜೈಲು ಸೇರುತ್ತಿದ್ದಾರೆ. ಇಂತಹ ಸ0ದರ್ಭದಲ್ಲಿ ನಾವು ಇನ್ನಷ್ಟು ಕ್ರಿಯಾಶೀಲರಾಗಿ ಜನರನ್ನು ಸಂಘಟಿಸಿ ಹೋರಾಟಕ್ಕೆ ಅಣಿನೆರಸಬೇಕಾಗಿದೆ ಎಂದು ತಿಳಿಸಿದರು.

ಸಮ್ಮೇಳನದ ಉದ್ಘಾಟನೆಯ ನಂತರ ಪ್ರತಿನಿಧಿಗಳ ಅಧಿವೇಶನ ಪ್ರಾರಂಭವಾಯಿತು. ಮೊದಲಿಗೆ ಕಳೆದ ಸಮ್ಮೇಳನದಿಂದ ಇಲ್ಲಿಯವರೆಗೆ ನಮ್ಮನ್ನು ಅಗಲಿದ ಎಲ್ಲಾ ಹಿರಿಯ ಸ0ಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಚ್ಯುತರವರು ನಿರ್ಣಯ ಮಂಡಿಸಿದರು..

ನಂತರ ಸ್ಥಳೀಯ ಸಮಿತಿಯ ಕಾರ್ಯದರ್ಶಿ .ಎಲ್. ರಾಮಚಂದ್ರ ಕರಡು ವರದಿಯನ್ನು ಮಂಡಿಸಿದರು. ಪ್ರತಿನಿಧಿಗಳು ಗುಂಪು ಚರ್ಚೆ ಮಾಡಿ ವರದಿ ಮೇಲಿನ ಚರ್ಚೆಯಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಚರ್ಚೆಗೆ ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ಉತ್ತರ ನೀಡಿದರು. ಸಮ್ಮೇಳನವು ತಿದ್ದುಪಡಿಗಳೊಂದಿಗೆ ವರದಿಗೆ ಅನುಮೋದನೆ ನೀಡಿತು. ನಂತರ 15 ಜನರ ನೂತನ ಸಮಿತಿಯನ್ನು ಪ್ರತಿನಿಧಿಗಳು ಸರ್ವಾನುಮತದಿಂದ ಆಯ್ಕೆ ಮಾಡಿದರು. ಕಾರ್ಯದರ್ಶಿಯಾಗಿ ಎಲ್.ರಾಮಚಂದ್ರ ಪುನರಾಯ್ಕೆಯಾದರು.

ನಂತರ ನೂತನ ಸಮಿತಿಯನ್ನು ಉದ್ದೇಶಿಸಿ ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ .ವಿ.ಗೀತಾ ಶುಭ ಹಾರೈಸಿ ಮಾತನಾಡುತ್ತಾ, ಸಾಮೂಹಿಕ ಸಂಘಟನೆಗಳನ್ನು ಬಲಿಷ್ಟವಾಗಿ ಕಟ್ಟದೆ ಪಕ್ಷವನ್ನು ಗಟ್ಟಿಗೊಳಿಸಲು ಮತ್ತು ವಿಸ್ತರಿಸಲು ಸಾಧ್ಯವಿಲ್ಲ. ಉದ್ಯೋಗ ಖಾತ್ರಿ ಜಾರಿ ಮಾಡಲು, ಕಟ್ಟಡ ಕಾರ್ಮಿಕರನ್ನು ಮತ್ತು ಮಹಿಳೆಯರನ್ನು ಸಂಘಟಿಸಲು ಕೆಲಸ ಮಾಡಬೇಕಾಗಿದೆ ಎಂದು ತಿಳಿಸಿದರು.

ಸಮ್ಮೇಳನದ 4 ನಿರ್ಣಯಗಳು

1. ಬಿ.ಜಿ.ಎಂ.ಎಲ್. ಪುನರಾರಂಭಿಸಬೇಕು.
2. ಕುಡಿಯುವ ನೀರಿನ ಪೂರೈಕೆಯನ್ನು ಸರಿಪಡಿಸಬೇಕು
3. ಗ್ಯಾಸ್ ಸಿಲಿಂಡರ್ ನೋಂದಣಿಯನ್ನು ಆನ್ ಲೈನ್‌ನಲ್ಲಿ ಮಾಡುವುದುನ್ನು ವಿರೋಧಿಸಿ
4. ಚಿನ್ನಕೋಟೆ ಗ್ರಾಮದಲ್ಲಿ ರೈಲು ನಿಲುಗಡೆ ಮಾಡಬೇಕೆಂದು ಕೇಳಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಅಧ್ಯಕ್ಷೀಯ ಮಂಡಳಿಯಲ್ಲಿ ಹನುಮಂತ ರಾಯ, ಜ್ಯೋತಿ, ಸಿ.ಆರ್.ಮೂರ್ತಿಯವರಿದ್ದು ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಕೊನೆಯಲ್ಲಿ .ಟಿ.ಅಪ್ಪಯಣ್ಣ ವಂದನಾರ್ಪಣೆ ಮಾಡಿದರು. ○

.....ಬರಗೂರರ ಕಿರುಹೊತ್ತಿಗೆ ಬಿಡುಗಡೆ

ಪುಟ 16 ರಿಂದ

ಪ್ರಾರಂಭವಾಗಬೇಕು ಎಂದು ಹೇಳಿದರು.

ಆತ್ಮರತಿ, ಹಟ ಮತ್ತು ಅಹಂಕಾರಗಳ ಅಮಲು ಹೋರಾಟಗಾರರಿಗೆ ಬರದೇ, ಭಿನ್ನಾಭಿಪ್ರಾಯಗಳಿದ್ದಾಗಲೂ ಹೋರಾಟದ ಜೊತೆಗಿದ್ದು ಸ್ಪಷ್ಟ ನಿಲುವು ಹೊಂದಿರಬೇಕು. ರಾಜಕಾರಣಿಗಳು ಕೆಟ್ಟಿದ್ದಾರೆ, ಜನವಿರೋಧಿ ಗಳಾಗಿದ್ದಾರೆ ಎನ್ನುವ ಕಾರಣಕ್ಕಾಗಿ ಜನಸಾಮಾನ್ಯರು ರಾಜಕೀಯ ವಿರೋಧಿಗಳು, ನಿರಾಸಕ್ತರೂ ಆಗಬಾರದು. ಹೋರಾಟ ಕೇವಲ ಸರ್ಕಾರಿ ಭ್ರಷ್ಟ ವ್ಯಕ್ತಿಗಳ ವಿರೋಧಿಯಾಗಿರದೆ, ಅದನ್ನು ನಿಯಂತ್ರಿಸುತ್ತಿರುವ ಖಾಸಗಿ ವಲಯ ಮತ್ತು ಧಾರ್ಮಿಕ ವಲಯಗಳ ವಿರೋದೀ ಹೋರಾಟವೂ ಆಗಬೇಕು. ವಿದೇಶದಲ್ಲಿರುವ ಕಪ್ಪು ಹಣ ಸ್ವದೇಶಕ್ಕೆ ತರುವಂತೆ ಒತ್ತಾಯಿಸುವುದರ ಜೊತೆ ಜೊತೆಗೆ ಮಠಮಾನ್ಯಗಳಲ್ಲಿ ಕೊಳೆಯುತ್ತಿರುವ ಹಣದ ಸದ್ಬಳಕೆ ಆಗಬೇಕು. ವಿಭಜಿತ ಭ್ರಷ್ಟಾಚಾರ ವಿರೋಧಿ ನೀತಿಯ ಹೊರತಾಗಿ ಸಮಗ್ರ ಭ್ರಷ್ಟಾಚಾರ ವಿರೋಧಿ ನೀತಿಯ ಹೋರಾಟ ನಡೆಯಬೇಕು. ಚುನಾವಣಾ ಭ್ರಷ್ಟಾಚಾರವನ್ನು ವಿರೋಧಿಸಬೇಕು. ದೇಶ ಕಟ್ಟುವವ ಇದರಿಂದ ಹಾನಿಗೊಳಗಾಗಿದ್ದಾನೆ. ಅಸಹಾಯಕತೆಯ ಒಳಗೆ ಜ್ಞಾನ ತುಂಬುವ ಕೆಲಸ ಆಗಬೇಕಾಗಿದೆ. ಜನ ಚಳುವಳಿ ಬೆಳೆಯಬೇಕು. ಸಮಾಜದ ಆರೋಗ್ಯ ಜನರ ಒಳಿತನ್ನು ಕಾಪಾಡುವಲ್ಲಿ ಬದ್ಧರಾಗೋಣ ಎಂದು ಲೇಖಕ, ಚಿಂತಕ, ನಿರ್ದೇಶಕ ನಾಡೋಜ ಪ್ರೋ. ಬರಗೂರು ರಾಮಚಂದ್ರಪ್ಪನವರು ಮಾತನಾಡಿದರು.

ಸಾಹಿತಿ, ಚಿಂತಕ ಡಾ. ಜಿ. ರಾಮಕೃಷ್ಣರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗುರುಶಾಂತರವರು ಕಾರ್ಯಕ್ರಮದ ಪ್ರಸ್ತಾವನೆ ಮಾಡಿ ಎಲ್ಲರನ್ನು ಸ್ವಾಗತಿಸಿದರು. ಡಿವೈಎಫ್‌ಐನ ಬಿ. ರಾಜಶೇಖರಮೂರ್ತಿ ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಜನವಾದಿ ಮಹಿಳಾ ಸಂಘಟನೆಯ ಕೆ. ಎಸ್. ಲಕ್ಷ್ಮಿ ವಂದನಾರ್ಪಣೆ ಮಾಡಿದರು.

*

'ಮಾನವ ಹಕ್ಕು ಉಲ್ಲಂಘನೆಯ ಆರೋಪಿ ಶಂಕರ ಬಿದರಿ ನೇಮಕ ರದ್ದುಗೊಳಿಸಿ'

ಡಿಸೆಂಬರ್ 6 ರ ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ಒತ್ತಾಯ

ಪೋಲೀಸ್ ಮಹಾ ನಿರ್ದೇಶಕರಂತಹ ಅತ್ಯಂತ ಉನ್ನತ ಹುದ್ದೆಗೆ ನೇಮಕಾತಿ ಮಾಡುವಲ್ಲಿ ರಾಜ್ಯದ ಬಿಜೆಪಿ ಸರ್ಕಾರ ನೀತಿ ನಿಯಮಗಳನ್ನು ಉಲ್ಲಂಘಿಸಿರುವುದು ಗಂಭೀರವಾದ ವಿಷಯವಾಗಿದೆ. ರಾಜ್ಯದ ಒಟ್ಟು ಆಡಳಿತ ಹಿತಕ್ಕಿಂತ ಕೇವಲ ಸಂಕುಚಿತ ಹಿತಾಸಕ್ತಿ, ಸ್ವಜನ ಪಕ್ಷಪಾತವೇ ಪ್ರಧಾನ ಅಂಶಗಳಾಗಿವೆ. ಈಗ ಡಿ.ಜಿ-ಐ.ಜಿ.ಪಿ ಹುದ್ದೆಗೆ ನೇಮಕಗೊಂಡಿರುವ ಶಂಕರ ಬಿದರಿಯವರು ಸೇವಾಹಿರಿತನದ ಕೊರತೆ, ಸೇವಾವಧಿಯಲ್ಲಿ ಮಾನವ ಹಕ್ಕುಗಳ ಕಾನೂನು ಉಲ್ಲಂಘನೆಯಂತಹ ಅನರ್ಹತೆಯ ನಕಾರಾತ್ಮಕ ಅಂಶಗಳಿದ್ದರೂ ಅವರನ್ನೇ ನೇಮಿಸಿರುವುದು ಬಿಜೆಪಿ ಸರ್ಕಾರದ ದುರಾಡಳಿತಕ್ಕೆ ನಿದರ್ಶನ.

ಹಿಂದೆ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಮಲೆ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಮಹಿಳೆಯರು, ಆದಿವಾಸಿಗಳ ಮೇಲೆ ನಡೆಸಿದ ಅಮಾನುಷ ದೌರ್ಜನ್ಯಗಳ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (NHRC) ನ್ಯಾಯಮೂರ್ತಿ ಎ.ಜೆ ಸದಾಶಿವ, ನ್ಯಾ. ನರಸಿಂಹನ್ (ಸಿಬಿಐ ಮಾಜಿ ನಿರ್ದೇಶಕರು)ರವರ ವಿಚಾರಣಾ ಆಯೋಗ ಬಿದರಿಯನ್ನು ತಪ್ಪಿತಸ್ಥರೆಂದು ಗುರುತಿಸಿವೆ. ಶ್ರೀಮತಿ ನಾಗಿ ಚಿಕ್ಕ ಜವನನ್, ಅವಳ ಸಹೋದರಿಯ ಮೇಲೆ ಬಿದರಿ ಸಮ್ಮುಖದಲ್ಲೇ ಸಾಮೂಹಿಕ ಅತ್ಯಾಚಾರ ನಡೆದಿದೆಯೆಂದೂ ವಿಚಾರಣೆಯ ಹೆಸರಿನಲ್ಲಿ ಮುನಿಯಮ್ಮ ಮತ್ತು ಅವಳ ಪತಿ, ಮಗನಿಗೆ ಮೆಣಸಿನಪುಡಿ, ಕರೆಂಟ್ ನೀಡಿ ಚಿತ್ರಹಿಂಸೆ ಮಾಡಲಾಗಿದೆ ಮತ್ತು ಆಕೆಯ ಮಗನನ್ನು ಕೊಂದು ಹಾಕಿದಂತಹ ಪ್ರಕರಣಗಳಲ್ಲಿ ಬಿದರಿಯವರ ಮೇಲೆ ಆರೋಪಿಸಲಾಗಿದೆ.

ಹೀಗೆ ಸಂವಿಧಾನಾತ್ಮಕ ಸ್ಥಾನ ಹೊಂದಿರುವ ರಾಷ್ಟ್ರೀಯ ಆಯೋಗ, ವಿಚಾರಣಾ ಆಯೋಗಗಳಿಂದ ತಪ್ಪಿತಸ್ಥನೆಂದು ಹೇಳಿದ, ಕಾನೂನು ಪಾಲಿಸದವರನ್ನು ರಾಜ್ಯದ ಅತ್ಯಂತ ಉನ್ನತ ಹುದ್ದೆಗೆ ನೇಮಕ ಮಾಡಿದುದು ಅಪಾಯಕಾರಿಯಾಗಿದೆ. ಮೇಲಾಗಿ ಬಿದರಿಗಿಂತಲೂ ಸೇವಾ ಹಿರಿತನ, ಸೇವಾವಧಿಯಲ್ಲಿ ಯಾವುದೇ ಕಳಂಕವಿಲ್ಲದ ಹಿರಿಯ ಅಧಿಕಾರಿ ಎ.ಆರ್. ಇನ್‌ಫೆಂಟ್‌ರಂಥವರನ್ನು ಎಲ್ಲಾ ಅರ್ಹತೆ ಇದ್ದರೂ ಕಡೆಗಣಿಸಿರುವುದು ಬಿಜೆಪಿ ಸರ್ಕಾರದ ದುರುದ್ದೇಶವನ್ನು ತೋರಿಸುತ್ತದೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಒಳಗೊಂಡ ಹಲವಾರು ಸಚಿವರು- ಇಡೀ ಸರ್ಕಾರವೇ ಈಗಾಗಲೇ ಹಲವಾರು ಅಕ್ರಮ, ಹಗರಣಗಳಲ್ಲಿ ಮುಳುಗಿದ್ದು, ಕಾನೂನಾತ್ಮಕ ಕ್ರಮಗಳಿಗೆ ಒಳಗಾಗಿರುವಾಗ ಇನ್ನೂ ಹೊಸ ಹಗರಣ ಪ್ರಕರಣಗಳು ಕ್ರಮದ ಹಾದಿಯಲ್ಲಿರುವಾಗ ಬಿದರಿಯವರ ನೇಮಕಾತಿ ಹಲವಾರು ಪ್ರಶ್ನೆ, ಸಂಶಯಗಳನ್ನು ಹುಟ್ಟುಹಾಕುತ್ತಿದೆ. ಹಗರಣಗಳಿಂದ ಪಾರಾಗಲು ಕಿತ್ತಾಡುತ್ತಿರುವ ಬಿಜೆಪಿ ನಾಯಕರೊಳಗೆ ನಡೆದಿರುವ ಸಂದರ್ಭ ಸಾಧಕ ಒಳಒಪ್ಪಂದಗಳ ಭಾಗವೇ ಬಿದರಿ ನೇಮಕವಾಗಿದೆ. ಮತ್ತು ಜಾತಿವಾದದ, ಸಂಕುಚಿತ ಸ್ವಾರ್ಥ ರಾಜಕಾರಣವೂ ಇಲ್ಲಿದೆ.

ಹಿರಿಯ ಅಧಿಕಾರಿಗಳಾದ ಶಂಕರ್‌ಬಿದರಿಯವರ ನೇಮಕವನ್ನು ರದ್ದುಗೊಳಿಸಿ ಈ ಅನ್ಯಾಯವನ್ನು ಸರಿಪಡಿಸಿ ರಾಜ್ಯದಲ್ಲಿ ಸಂವಿಧಾನಾತ್ಮಕ ಆಡಳಿತ, ನ್ಯಾಯ ಪರಿಪಾಲನೆ ಮಾಡುವಂತೆ ಸಿಪಿಐ(ಎಂ) ಸರ್ಕಾರವನ್ನು ಆಗ್ರಹಿಸುತ್ತದೆ.

ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಉಪ ಚುನಾವಣಾ ಫಲಿತಾಂಶವು ಬಹಳ ಸಕಾರಾತ್ಮಕ ಬೆಳವಣಿಗೆ ಅಲ್ಲವಾದರೂ ಆಡಳಿತರೂಢ ಜನದ್ರೋಹಿ, ಭ್ರಷ್ಟ ಬಿಜೆಪಿಗೆ ಜನತೆ ನೀಡಿದ ಪ್ರಹಾರವಾಗಿದೆ. ಇದೇ ಹೊತ್ತಿನಲ್ಲಿ ಜನವಿರೋಧಿ, ಭ್ರಷ್ಟ ಕಾಂಗ್ರೆಸ್ ವಿರುದ್ಧವೂ ಜನತೆಯ ಆಕ್ರೋಶ ವ್ಯಕ್ತವಾಗಿದೆ. ಇಂತಹ ಸ್ಥಿತಿಯಲ್ಲಿ ಗಣಿ ಮಫಿಯಾದ ಪ್ರತಿನಿಧಿಯಾಗಿರುವ ಶ್ರೀರಾಮುಲುರವರ ಆಯ್ಕೆ ಜನತೆಗೆ ಅನ್ಯ ಮಾರ್ಗ ಕಾಣದ ಅನಿವಾರ್ಯತೆಯಲ್ಲಿ ಆಗಿದೆ.

ಜನತೆ ನೀಡಿದ ತೀರ್ಪಿನಿಂದ ಪಾಠ ಕಲಿಯಲು ದಯನೀಯವಾಗಿ ಸೋತಿರುವ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಸಿದ್ಧವೇ ಇಲ್ಲ. ಬಿಜೆಪಿಯು ರೆಡ್ಡಿಯವರಂತಹ ಗಣಿ-ಮಾಫಿಯಗಳೊಂಧಿಗೆ ಸೇರಿ ಸರ್ವ ಫಲವನ್ನೂ ಉಂಡು ಪಾತಕದಲ್ಲೇ ಮುಳುಗೇಳುತ್ತಿರುವಾಗ ಅವರೊಂದಿಗೆ ಒಳ ಒಪ್ಪಂದಗಳು ನೆರವೇರಲಿಲ್ಲ ಎಂಬ ಕಾರಣಕ್ಕೆ 'ಮೂರು ವರ್ಷದ ಅವಧಿಯಲ್ಲಿ ತಪ್ಪೆಸಗಿದ್ದೇವೆ'ಎಂದು ಮುಖ್ಯಮಂತ್ರಿ ಸದಾನಂದಗೌಡರು ಹೇಳುವುದು, ಕಪಟತನದ ನಾಚಿಕೆಗೇಡಿನ ಸಂಗತಿಯಾಗಿದೆ.

ಆಡಳಿತ ನಡೆಸಲು ಅನರ್ಹವಾಗಿರುವ ಬಿಜೆಪಿಯ ಸರ್ಕಾರ ಈಕೂಡಲೇ ರಾಜೀನಾಮೆ ನೀಡಿ ಹೊಸ ಜನಾದೇಶ ಪಡೆಯಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

*

ಬಳ್ಳಾರಿ; ಬಿಜೆಪಿಗಾದ ಮುಖಭಂಗ

ಇಲ್ಲಿ ಆಯ್ಕೆಗೆ ಅವಕಾಶಗಳು ಇದ್ದದ್ದೂ ಕಡಿಮೆಯೇ. ಸ್ಪರ್ದೆ ಇದ್ದುದು ಮೂವರೊಳಗೆ. ಎಲ್ಲರೂ ಗಣಿ ಧೂಳು ಕುಡಿದವರೇ. ಸಿಕ್ಕಷ್ಟು ಬಾಚಿದವರೇ ಮತ್ತು ಹೊಸ ಅವಕಾಶಕ್ಕಾಗಿ ಕಾದವರೇ. ಈ ಹಿನ್ನೆಲೆಯಲ್ಲಿ ಜನ ಪ್ರಜಾಸತ್ತಾತ್ಮಕವಾದ ತಮ್ಮ ಹಕ್ಕು ಚಲಾಯಿಸಿದರು .ಅನ್ಯ ಮಾರ್ಗಗಳಿಲ್ಲದೇ ನೀಡಿದ ಮತ ಒಬ್ಬರಿಗೆ ಅಧಿಕವಾಯಿತು . ಇದನ್ನೇ ಶ್ರೀರಾಮುಲು ಹೇಳಿಕೊಳ್ಳುತ್ತಿರುವುದು 'ಸ್ವಾಭಿಮಾನ'ದ ಗೆಲುವೆಂದು .

ಅದು ಹೇಗೇ ಇರಲಿ, ಜನರ ತೀರ್ಪನ್ನು ಗೌರವಿಸಬೇಕು.

ಬಳ್ಳಾರಿ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯ ಫಲಿತಾಂಶವನ್ನು ಬಿಜೆಪಿ,ಕಾಂಗ್ರೆಸ್,ರೆಡ್ಡಿ ಗುಂಪು ಈ ಮೂವರೂ ತಮ್ಮದೇ ಮೂಗಿನ ನೇರಕ್ಕೆ ವ್ಯಾಖ್ಯಾನಿಸುತ್ತಿದ್ದಾರೆ. ಬಿಜೆಪಿಗೆ ಠೇವಣಿ ಕಳೆದುಕೊಂಡ ಫಲಿತಾಂಶದಿಂದ ಏನೂ ಆಗಿಲ್ಲವಂತೆ, ಮೇಲಾಗಿ ಈಗಿನ ಮುಖ್ಯ ಮಂತ್ರಿಗಳಿಗೆ ಕಳೆದ ಮೂರು ವರ್ಷಗಳ ತಪ್ಪುಗಳ ದರ್ಶನ ಮಾಡಿಸಿ ಬಿಟ್ಟಿದೆಯಂತೆ!.(ಇದು ಯಡ್ಡಿಗೆ ಬೈಗುಳವೇ?). ಎರಡನೇ ಸ್ಥಾನದಲ್ಲಿ ಸೋತ ಕಾಂಗ್ರೆಸ್‌ಗೆ ಇದು ಪ್ರಜಾಪ್ರಭುತ್ವದ ಸೋಲಂತೆ!. ಶ್ರೀರಾಮುಲು ಗೆಲುವಿನಲ್ಲಿ ತನ್ನ ಪಾತ್ರವೂ ಮುಖ್ಯವಿದೆಯೆಂದು ಜೆಡಿಎಸ್‌ನ ಕುಮಾರಸ್ವಾಮಿ ಹೇಳುವುದಿಲ್ಲವಂತೆ!. ಹೀಗೆ ಗೆದ್ದ-ಬಿದ್ದ ಸೋಲಿನಲ್ಲೂ ಗೆಲುವು ಕಾಣುವ ಈ ಮೂವರಿಗೂ ಫಲಿತಾಂಶದಿಂದ ನಿಜ ಪಾಠ ಕಲಿಯುವ ಇಚ್ಛೆಯೇ ಇಲ್ಲ.

ಗೆಲುವಿನ ಅಹಮಿಕೆಯಲ್ಲಿದ್ದ ಬಿಜೆಪಿಗೆ ಜನರು ದಯನೀಯ ಮೂರನೇ ಸ್ಥಾನಕ್ಕೆ ತಳ್ಳಿದ್ದು ತೀವ್ರ ಮುಖಭಂಗವಾಗಿದೆ. ಇಡೀ ಸಚಿವ ಸಂಪುಟವೇ ಝಣ ಝಣ ಕಾಂಚಾಣ ಹಿಡಿದು ಕರ್ನಾಟಕವನ್ನು ಮರೆತು 'ಬಳ್ಳಾರಿ ರಿಪಬ್ಲಿಕ್' ನಲ್ಲಿ ಬೀಡು ಬಿಟ್ಟಿತ್ತು. ಸದಾನಂದಗೌಡ, ಕನಸಿನ ಕನ್ಯೆ ಹೇಮಾಮಾಲಿನಿ, ಡೀಲ್ ಸೆಟ್ ಆದ ಬಳಿಕ ಯಡ್ಯೂರಪ್ಪ ಕೊನೆಗೆ ವರ್ತೂರು ಪ್ರಕಾಶನವರೆಗೂ 'ಸ್ಟಾರ್'ಗಳು ಕೈ ಬೀಸಿ ಹೋದರು. ಗಾಲಿ ರೆಡ್ಡಿ ಕಂಪನಿಯ ಮೇಲೆ ಜನರಿಗಿರುವ ಅತೃಪ್ತಿಯನ್ನು ತಮ್ಮತ್ತ ಬಳಸಲು ಯತ್ನಿಸಿದರು. ಸರ್ವ ಪಾಪಗಳಿಗೂ ರೆಡ್ಡಿಗಳೇ ಹೊಣೆಯೆಂದರು. ಟಪಾಲು ಗಣೇಶನಂತಹ ರೆಡ್ಡಿ ವಿರೋಧಿ ಉದ್ದಿಮೆದಾರರನ್ನು ಸೆಳೆದು ಕೊಂಡರು. ಸುಮಾರು 40 ಸಾವಿರದಷ್ಟಿರುವ ಮುಸ್ಲಿಂ ಅಲ್ಪ ಸಂಖ್ಯಾತರ ಓಟುಗಳು ಕಾಂಗ್ರೆಸ್-ಶ್ರೀರಾಮುಲು ನಡುವೆ ಹಂಚಿ ಹೋದರೆ ತನಗೇ ಲಾಭವೆಂದೆಣಿಸಿದರು. ಜಾತಿಗಳ ಓಲೈಸಿದರು. ಆಡಳಿತ ಯಂತ್ರ (ಸ)ದುರುಪಯೋಗ ಪಡಿಸಿಕೊಂಡರು ಬಂಡಾಯವೆದ್ದ ತಮ್ಮ ನಾಲ್ಕು ಶಾಸಕರು,ಇಬ್ಬರು ಸಂಸದರನ್ನು ಅಮಾನತುಗೊಳಿಸಿದರು. ಇಷ್ಟಾದ ಮೇಲೂ ಜನ ಮಾತ್ರ ಕೈ ಸಡಿಲ ಬಿಟ್ಟು ಕಪಾಳ ಮೋಕ್ಷ ಮಾಡಿದರು. ಕೋಮುವಾದಿ ಬಿಜೆಪಿಯ ಜನದ್ರೋಹಿ, ಅಕ್ರಮ-ಹಗರಣಗಳ, ಭ್ರಷ್ಟ ,ದುರಾಡಳಿತದ ಕೃತ್ಯಗಳಿಗೆ ನೀಡಿದ ಪ್ರಹಾರವಿದು. ಇನ್ನು ಗೆಲುವಿನ ಆಶೆಯಿರಿಸಿಕೊಂಡಿದ್ದ ಕಾಂಗ್ರೆಸ್ ಒಳಗಿನ ಕಿತ್ತಾಟ, ವಿರೋಧ ಪಕ್ಷವಾಗಿ ಅದರ ವೈಫಲ್ಯ, ಭೂ ಹಾಗೂ ಗಣಿ ಮಾಫಿಯಾ ನಂಟು ,ಕೇಂದ್ರದ ಭ್ರಷ್ಟ ಹಗರಣಗಳು ,ಬೆಲೆಯೇರಿಕೆಯಂತಹ ಜನವಿರೋಧಿ ನೀತಿಗಳಿಗೆ ಜನ ತಿರಸ್ಕಾರ ಮಾಡಿದರು. ಇವರ 'ಚುನಾವಣಾ ಸೆಕ್ಯುಲರ್ ' ತಂತ್ರವನ್ನು ಜನ ನಂಬಲಿಲ್ಲ. ಶ್ರೀರಾಮುಲು ಅನುಕಂಪ ಗಿಟ್ಟಿಸಿಕೊಳ್ಳುವ ನಾಟಕದಲ್ಲಿ ಯಶಸ್ವಿಯಾದರು.ಅಂದ ಹಾಗೆ ರಾಮುಲು ರಾಜೀನಾಮೆ ನೀಡುವ ಮೊದಲೇ ಕ್ಷೇತ್ರದ ಮತದಾರರನ್ನು ವಿವಿಧ ಪರಿಯಲ್ಲಿ ಮನವೊಲಿಸಿಕೊಂಡು ಬಿಟ್ಟಿದ್ದರೆಂದು, ಅಡಿಕೆ, ಎಲೆ 'ದಕ್ಷಿಣೆ ತಲುಪಿಸಿದ್ದರೆಂದೂ ಬಳ್ಳಾರಿಯಲ್ಲಿ ಜನಜನಿತ ವಾರ್ತೆಯಾಗಿದೆ.! ಅದೇ ವೇಳೆಯಲ್ಲಿ ಆಡಳಿತ ಅದೆಷ್ಟೇ ಬಿಗಿಗೊಳಿಸಿತ್ತೆಂದು ಹೇಳಿಕೊಂಡರೂ ಉಳಿದ ಪಕ್ಷಗಳ ಜ(ಧ)ನ ಸೇವೆ ಮಾತ್ರ ಅಭಾಧಿತವಾಗಿ ನಡೆಯಿತು!.

ಗೆದ್ದ ರಾಮುಲು ಪ್ರಮಾಣ ವಚನಕ್ಕೆ ಮೊದಲು ರಾಜಧಾನಿಯಲ್ಲಿ ಭಾರೀ ಮೆರವಣಿಗೆ ನಡೆಸಿದ್ದು ಬಿಜೆಪಿಗೆ ಸವಾಲು ಹಾಕಿದಂತೆಯೇ. ಇದರಲ್ಲಿ ಸಸ್ಪೆಂಡ್ ಆದ ಜನ ಪ್ರತಿನಿಧಿಗಳೂ ಇದ್ದರು .ಈ ಬಳಿಕ ಆತ ಹೊಸ ಪಕ್ಷ ಕಟ್ಟುವುದಾಗಿ ಹೇಳಿಕೊಳ್ಳುತ್ತಿದ್ದಾನೆ. ಇದು ಒಂದೆಡೆಯಾದರೆ ಇನ್ನೊಂದೆಡೆ ಭೂಗತನಾಗಿದ್ದ ಕರುಣಾಕರರೆಡ್ಡಿ ದಿಢೀರನೇ ರಾಜಕೀಯ ಪರದೆ ಮೇಲೆ ಕಾಣಿಸಿಕೊಂಡು ಬಿಜೆಪಿಗೆ ಅಚಲ ನಿಷ್ಟೆ ವ್ಯಕ್ತ ಪಡಿಸಿದ್ದಾನೆ. ಇದು ರೆಡ್ಡಿಗಳ ತಂತ್ರದ ಭಾಗವೇ ಆಗಿದೆ. ರಾಮುಲು ಮೂಲಕ ಸರಕಾರಕ್ಕೆ ಬೆದರಿಕೆ ಒಡ್ಡುವುದು ,ಕ.ರೆಡ್ಡಿ ಮೂಲಕ ಸಂಧಾನ ನಡೆಸಿ ಮಂತ್ರಿಯನ್ನಾಗಿಸಿ ತಮ್ಮ ಅಕ್ರಮಗಳ ಮುಚ್ಚಿಕೊಳ್ಳುವದೂ ಒಳಗೊಂಡು ಇತರೆ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವುದು... ಹೀಗೆ ನಡೆಯುತ್ತಿದೆ ಗಣಿ ಭೂ ಮಾಫಿಯಾಗಳ ಹಾವು ಏಣಿಯಾಟ! ಇನ್ನೇನು ಬರಲಿರುವ, ಸದಾನಂದಗೌಡರು ಆಯ್ಕೆ ಬಯಸಿರುವ ವಿಧಾನ ಪರಿಷತ್ತಿನ ಚುನಾವಣೆ ವೇಳೆಗೆ ಇವು ಇನ್ನಷ್ಟು ನಿಚ್ಚಳ!!

* * *

ಪುಟ 11 ಕ್ಕೆ

ಕಾರ್ಟೂನ್ ಕಾರ್ನರ್



ಬೆಲೆ ಏರಿಕೆ, ಭ್ರಷ್ಟಾಚಾರದ ವಿರುದ್ಧ ಸಿಪಿಐ(ಎಂ) ಹಾಸನ-ಚಿಕ್ಕಮಗಳೂರು 8ನೇ ಜಿಲ್ಲಾ ಸಂಘಟನಾ ಸಮ್ಮೇಳನ ಯಶಸ್ವಿ

ಹೆಚ್.ಆರ್.ನವೀನ್‌ಕುಮಾರ್

ಒಂದೆಡೆ ಸಂಪೂರ್ಣ ಮಲೆನಾಡು, ಕಾಫಿಯ ಬೀಡು ಕೋಮುಸೌಹಾರ್ದದ ನೆಲೆಬೀಡಾದ ಬಾಬಾಬುಡನ್‌ಗಿರಿ. ಮತ್ತೊಂದೆಡೆ ಅರೆಮಲೆನಾಡಿನ ಪ್ರದೇಶ ಕಲೆಗಳ ಬೀಡು ಬೇಲೂರು-ಹಳೇಬೀಡು-ಶ್ರವಣಬೆಳಗೊಳ. ಕೃಷಿ ಪ್ರಧಾನ ಜಿಲ್ಲೆಗಳಾದ ಹಾಸನ ಮತ್ತು ಚಿಕ್ಕಮಗಳೂರಿನ ಸಿಪಿಐ(ಎಂ)ನ 8ನೇ ಜಿಲ್ಲಾಸಮ್ಮೇಳನ ನವೆಂಬರ್ 27-28 ರಂದು ಎರಡು ದಿನಗಳಕಾಲ ಹಾಸನದ 'ಶ್ರಮ' ಕಛೇರಿಯಲ್ಲಿ ನಡೆಯಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಜನರನ್ನು ಕಿತ್ತು ತಿನ್ನುವ ಬೆಲೆ ಏರಿಕೆ ಮತ್ತು ದೇಶ-ರಾಜ್ಯವನ್ನು ದಿವಾಳಿಯ ಅಂಚಿಗೆ ತಂದಿರುವ ಭ್ರಷ್ಟಾಚಾರ ದೇಶದಲ್ಲಿ ಬೃಹತ್ ಸಮಸ್ಯೆಗಳಾಗಿ ಬೆಳೆದುನಿಂತಿವೆ, ಇವುಗಳ ವಿರುದ್ಧ ಜನ ಸಂಘಟಿತ ಮತ್ತು ಸಂಘರ್ಷಾತ್ಮಕ ಐಕ್ಯ ಹೋರಾಟಗಳನ್ನು ನಡೆಸುವ ಅವಶ್ಯಕತೆಯಿದೆ ಎಂದರು. ಜಗತ್ತಿನಲ್ಲಿ ಕಮ್ಯುನಿಸ್ಟ್ ಪಕ್ಷಗಳಿಗೆ ದೀರ್ಘ ಇತಿಹಾಸವಿದ್ದು 1848 ರಲ್ಲಿ ಕಾರ್ಲ್ ಮಾರ್ಕ್ಸ್ ಬಂಡವಾಳದ ಕೃತಿಯನ್ನು ರಚಿಸುವ ಮೂಲಕ ಜಗತ್ತಿನ ಬೆಳವಣಿಗೆಯನ್ನು ಸರಿಯಾಗಿ ಗುರುತಿಸಿದ್ದರು, ಅವರ ಪ್ರಕಾರ ಜಗತ್ತಿನಲ್ಲಿ ದುಡಿಯುವ ಮತ್ತು ದುಡಿಸಿಕೊಳ್ಳುವ ಎರಡು ವರ್ಗಗಳು ಮಾತ್ರ ಇರುವುದು ಎಂದಿದ್ದಾರೆ. ಮತ್ತು ಜಗತ್ತಿನಲ್ಲಿ ಬಂಡವಾಳಶಾಹಿಗೆ ವಿರುದ್ಧವಾಗಿ ಸಮಾಜವಾದವೇ ಪರ್ಯಾಯ ಎಂದರು ಅದು ಕಾಲಕ್ರಮೇಣ ಜಗತ್ತಿನಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ನಿರಂತರ ಬಿಕ್ಕಟ್ಟು ಮತ್ತು ಸಮಾಜವಾದದ ಪರವಾದ ಒಲವು ಪದೇ ಪದೇ ಸಾಬೀತುಪಡಿಸುತ್ತಿದೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪಕ ಭ್ರಷ್ಟಾಚಾರದಿಂದಾಗಿ ಜನ ಸಾಮಾನ್ಯರು ರಾಜಕೀಯ ವ್ಯವಸ್ಥೆಯಿಂದ ಬೇಸತ್ತು ಆಕ್ರೋಶಗೊಳ್ಳುತ್ತಿದ್ದಾರೆ. ಆದರೆ ದೇಶದ ಕೆಲವು ರಾಜ್ಯಗಳಲ್ಲಿ ಹತ್ತಾರು ವರ್ಷಗಳ ಕಾಲ ಎಡರಂಗದ ನೇತೃತ್ವದಲ್ಲಿ ಸಿಪಿಐ(ಎಂ) ಅಧಿಕಾರವನ್ನು ನಡೆಸಿದ್ದರೂ ಯಾರೊಬ್ಬರ ಮೇಲೂ ಒಂದು ಸಣ್ಣ ಭ್ರಷ್ಟಾಚಾರದ ಆರೋಪಗಳಿಲ್ಲ. ಏಕೆಂದರೆ ಬಂಡವಾಳಶಾಹಿ ಪಕ್ಷಗಳು ಅಧಿಕಾರಕ್ಕೆ ಬರುವ ಮೂಲಕ ಸಮಾಜದ ಆಸ್ತಿಯನ್ನು ಲಪಟಾಯಿಸುವ ಯೋಜನೆಗಳನ್ನು ರೂಪಿಸಿದರೆ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕರ್ತರು ಸಮಾಜಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡುತ್ತಾರೆ ಎಂದರು.



ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಂದಾಗಿ ಜನರ ಬದುಕು ದಿನದಿಂದ ದಿನಕ್ಕೆ ಸಂಕಷ್ಟಕ್ಕೊಳಗಾಗುತ್ತಿದೆ. ಅದೇ ಸಂದರ್ಭದಲ್ಲಿ ವಿದೇಶಿ ಮತ್ತು ಖಾಸಗೀ ಕಂಪನಿಗಳ ಪರವಾದ ನೀತಿಗಳನ್ನು ಕೇಂದ್ರ ಸರ್ಕಾರ ನಿರಂತರವಾಗಿ ಜಾರಿಗೊಳಿಸುತ್ತಿದೆ ಎಂದು ಹೇಳಿದರು.

ಸಮಾರಂಭದ ಮುಖ್ಯ ಅಥಿತಿಗಳಾದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶ್ರೀಯಾನ್ ಮಾತನಾಡಿ ರಾಜ್ಯದ ಬಿಜೆಪಿ.ನೇತೃತ್ವದ ಸರ್ಕಾರದ ಮಂತ್ರಿಗಳು ನಡೆಸಿರುವ ಭ್ರಷ್ಟಾಚಾರಗಳನ್ನು, ನೆನೆದರೆ ನಾವುಗಳು ಕರ್ನಾಟಕದ ಪ್ರಜೆಗಳೆಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಭ್ರಷ್ಟಾಚಾರದಲ್ಲಿ ಬಿಜೆಪಿ-ಕಾಂಗ್ರೇಸ್ ಪಕ್ಷಗಳು ಪೈಪೋಟಿಯಲ್ಲಿವೆ. ಅಭಿವೃದ್ಧಿಯ ಮಂತ್ರ ಜಪಿಸುತ್ತಿದ್ದವರು ಜನತೆಯ ಅಭಿವೃದ್ಧಿಯ ಬಗ್ಗೆ ಚಿಂತಿಸದೇ ಕೇವಲ ಅವರ ವೈಯಕ್ತಿಕ, ಕೌಟಿಂಬಿಕ ಅಭಿವೃದ್ಧಿಗೆ ಗಮನ ನೀಡುತ್ತಿದ್ದಾರೆ ಇಂತಹ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಲು ವಿಫುಲ ಅವಕಾಶಗಳಿದ್ದು ಜನರ ಬದುಕನ್ನು ಹಸನುಗೊಳಿಸಲು ಪಕ್ಷ ಕಟ್ಟಬೇಕಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷರನ್ನು ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಗಳಾದ ವಿ.ಸುಕುಮಾರ್ ವಹಿಸಿದ್ದರು. ಸಮಿತಿಯ ಸದಸ್ಯರಾದ ಧರ್ಮೇಶ್ ಸ್ವಾಗತಿಸಿದರು.

27-28 ರಂದು ಎರಡು ದಿನಗಳ ಕಾಲ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಬೆಲೆಏರಿಕೆ ವಿರೋಧಿಸಿ ನಿರ್ಣಯ : ಜೀವನಾವಶ್ಯಕ ವಸ್ತುಗಳಾದ ಪೆಟ್ರೋಲ್, ಡೀಸೆಲ್, ಆಹಾರ ಸಾಮಗ್ರಿಗಳ ಬೆಲೆಗಳ ಗಗನಕ್ಕೇರುತ್ತಿದ್ದು ಜನರ ಜೀವನ ಸಂಕಷ್ಟಕ್ಕೊಳಗಾಗುತ್ತಿದ್ದು ತಕ್ಷಣ ರಾ[illegible] ಕೇಂದ್ರ ಸರ್ಕಾರಗಳು ಈ ಕೂಡಲೇ ಸೂ[illegible] ಕ್ರಮಕೈಗೊಂಡು ಬೆಲೆಏರಿಕೆಗೆ ಕಡಿವಾ[illegible] ಹಾಕಬೇಕೆಂದು ನಿರ್ಣಯಿಸಲಾಯಿತು.
2. ಹಾಸನ ನಗರದಲ್ಲಿರುವ ಮೂಲಭೂ[illegible] ಸಮಸ್ಯೆಗಳಾದ ರಸ್ತೆ ದುರಸ್ತಿ, ಹಳೆ ಬ[illegible] ನಿಲ್ದಾಣಕ್ಕೆ ಎಲ್ಲ ಬಸ್ಸುಗಳನ್ನು ಬಿಡ[illegible] ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿ[illegible]
3. ಜಿಲ್ಲೆಯಲ್ಲಿ ನಡೆಯುತ್ತಿರುವ ಜಾತಿ ದೌರ್ಜ[illegible] ಮತ್ತು ಧಮನಗಳನ್ನು ವಿರೋಧಿ[illegible] ದಲಿತರಿಗೆ ಸೂಕ್ತ ಸೌಲಭ್ಯಗಳು ಮ[illegible] ಭದ್ರತೆನ್ನು ಒದಗಿಸಲು ಒತ್ತಾಯಿಸಿ.
4. ಕಾರ್ಮಿಕರಿಗೆ ಕನಿಷ್ಟ ಕೂಲಿ ನೀಡ[illegible] ಆಗ್ರಹಿಸಿ.
5. ಜಿಲ್ಲೆಯ ಆಲೂಗೆಡ್ಡೆ ಮತ್ತು ಶುಂಠಿ ರೈತ[illegible] ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿ[illegible]
6. ಸರ್ಕಾರಿ ಶಾಲೆಗಳನ್ನು ಮುಚ್ಚುವುದರ ವಿರು[illegible]
7. ಮಂಗಳೂರು-ಬೆಂಗಳೂರು ರೈ[illegible] ಮಾರ್ಗವನ್ನು ಸಂಪೂರ್ಣಗೊಳಿಸಬೇ[illegible] ಮತ್ತು ಇನ್ನು ಹೆಚ್ಚಿನ ರೈಲುಗಳ[illegible] ಬಿಡಬೇಕು
8. ಚಿಲ್ಲರೆ ವ್ಯಾಪಾರದಲ್ಲಿ ಶೇಖಡ 51 ರ[illegible] ವಿದೇಶಿ ನೇರ ಬಂಡವಾಳ ಹೂಡಿಕೆಯ[illegible] ವಿರೋಧಿಸಿ ಸಿಪಿಐ(ಎಂ) ನ 8 ನೇ ಜಿ[illegible] ಸಮ್ಮೇಳನ ನಿರ್ಣಯಗಳನ್ನು ಕೈಗೊಂಡಿ[illegible] ಅಂತಿಮವಾಗಿ 7 ಜನರ ನೂತನ ಜಿ[illegible]

ಸಂಘಟನಾ ಸಮಿತಿಯನ್ನು ರಚಿಸಲಾಯಿತು.

1. ವಿ.ಸುಕುಮಾರ್ -ಕಾರ್ಯದರ್ಶಿ
2. ಧರ್ಮೇಶ್
3. ಜಿ.ಪಿ.ಸತ್ಯನಾರಾಯಣ
4. ಹೆಚ್.ಆರ್.ನವೀನ್ ಕುಮಾರ್
5. ಶಿವು
6. ಮಂಜು
7. ಹರೀಶ್

ಮುಸಲ್ಮಾನ ಹಕ್ಕುಗಳ ಸಮಿತಿಯಿಂದ ಚಿಕ್ಕಬಳ್ಳಾಪುರದಲ್ಲಿ ಧರಣಿ

ಚಿಕ್ಕಬಳ್ಳಾಪುರದ ಮುಸಲ್ಮಾನ ಹಕ್ಕುಗಳ ಸಮಿತಿಯು ನ್ಯಾಯಮೂರ್ತಿ ಸಾಚರ್ ಸಮಿತಿ ಮತ್ತು ನ್ಯಾಯಮೂರ್ತಿ ರಂಗನಾಥ ಮಿಶ್ರ ಸಮಿತಿಯ ಶಿಫಾರಸ್ಸುಗಳನ್ನು ತಕ್ಷಣವೇ ಜಾರಿಮಾಡಬೇಕೆಂದು ಒತ್ತಾಯಿಸಿ ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿ ಕಛೇರಿಯೆದುರು ಧರಣಿ ನಡೆಸಿದರು. ಈ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯ ಮುಸ್ಲಿಂ ಜನತೆ ಭಾಗವಹಿಸಿದ್ದರು. 100 ಮಹಿಳೆಯರೂ ಸೇರಿದಂತೆ ಸುಮಾರು ಒಂದು ಸಾವಿರ ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಜ್ಯದ ಜನಸಂಖ್ಯೆಯ ಶೇ.13 ರಷ್ಟಿರುವ ಮುಸ್ಲಿಂ ಜನತೆಯ ಬದುಕನ್ನು ಹಸನು ಮಾಡಲು ಕೇಂದ್ರದ ಯು.ಪಿ.ಎ. ಸರ್ಕಾರವಾಗಲಿ ಅಥವಾ ರಾಜ್ಯದ ಬಿಜೆಪಿ ಸರ್ಕಾರವಾಗಲಿ ಯಾವುದೇ ಪ್ರಯತ್ನ ನಡೆಸದಿರುವ ಬಗ್ಗೆ ಅವರು ಆಕ್ರೋಶ ವ್ಯಕ್ತಪಡಿಸಿದರು. ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕ ಸಿಪಿಐ(ಎಂ)ನ ಜಿ.ವಿ. ಶ್ರೀರಾಮರೆಡ್ಡಿಯವರು ಧರಣಿಯನ್ನುದ್ದೇಶಿಸಿ ಮಾತನಾಡಿ ಈ ವಿಚಾರದಲ್ಲಿ ಸಿಪಿಐ(ಎಂ) ಪಕ್ಷದ ನಿಲುವು ಮತ್ತು ಪ್ರಯತ್ನಗಳನ್ನು ವಿವರಿಸಿದರು. ಮುಸ್ಲಿಂ ಹಕ್ಕು ಸಮಿತಿಯ ಸಂಚಾಲಕರಾದ ಮೊಹಮದ್ ಅಕ್ರಂ ಮತ್ತು ಯಾಕೂಬ್‌ರವರೂ ಧರಣಿಯನ್ನುದ್ದೇಶಿಸಿ ಮಾತನಾಡಿದರು. ಪ್ರಧಾನಮಂತ್ರಿ ಹಾಗೂ ರಾಜ್ಯದ ಮುಖ್ಯಮಂತ್ರಿಗಳನ್ನುದ್ದೇಶಿಸಿದ ಮನವಿ ಪತ್ರವನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾಯಿತು. ಪ್ರಧಾನಿಯವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮುಸ್ಲಿಮರಿಗೆ 10%ರಷ್ಟು ಮೀಸಲಾತಿಯನ್ನೂ ಒಳಗೊಂಡಂತೆ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಈಗಿರುವ ಮೀಸಲಾತಿಯನ್ನು 4%ರಿಂದ 10%ಕ್ಕೇರಿಸುವಂತೆ ಮನವಿ ಮಾಡಲಾಗಿದೆ.

ಇದಕ್ಕೂ ಮೊದಲೂ ನವೆಂಬರ್ 13 ರಂದು ಈ ಎಲ್ಲ ವಿಚಾರಗಳ ಬಗ್ಗೆ ತಿಳುವಳಿಕೆ ನೀಡಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಹೆಚ್ಚಿಸುವಂತೆ ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲು ಚಿಕ್ಕಬಳ್ಳಾಪುರದಲ್ಲಿ ಸಮಾವೇಶ ನಡೆಸಲಾಗಿತ್ತು. ಈ ಸಮಾವೇಶದಲ್ಲೂ ದೊಡ್ಡ ಸಂಖ್ಯೆಯಲ್ಲಿ ಮುಸಲ್ಮಾನರು ಭಾಗವಹಿಸಿದ್ದರು. ಶ್ರೀರಾಮರೆಡ್ಡಿ ಮತ್ತು ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿಯ ಸದಸ್ಯರಾದ ಅಮಾನುಲ್ಲ ಖಾನ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಆ ಸಮಾವೇಶದ ನಿರ್ಧಾರದಂತೆ ಧರಣಿ ಕಾರ್ಯಕ್ರಮವನ್ನು ನಡೆಸಲಾಯಿತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿಕರೆ

ಫೆಬ್ರವರಿ 28–2012 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

ೇಂದ್ರ ಕಾರ್ಮಿಕ ಸಂಘಟನೆಗಳು ದೇಶದ ಾರ್ಮಿಕರ ಹಾಗೂ ಜನ ಸಾಮಾನ್ಯರ ತದೃಷ್ಟಿಯಿಂದ ದುಡಿಯುವ ಜನರ ಪ್ರಮುಖ ೇಡಿಕೆಗಳ ಈಡೇರಿಕೆಗಾಗಿ ನಿರಂತರ ೋರಾಟಗಳನ್ನು ನಡೆಸುತ್ತಾ ಬಂದಿದೆ. ಆದರೆ ರಕಾರಗಳು ಬೆಲೆ ಏರಿಕೆ ನಿಯಂತ್ರಿಸಲು ಯಾವುದೇ ಸಕಾರತ್ಮಕ ಕ್ರಮಗಳನ್ನು ಕೈಗೊಳ್ಳಲು ಾಳಜಿ ವಹಿಸುತ್ತಿಲ್ಲ. ಮತ್ತೊಂದೆಡೆ ಅಗತ್ಯ ಸ್ತುಗಳ ಬೆಲೆ ಏರಿಕೆ ಮತ್ತಷ್ಟು ತೀವ್ರಗೊಳ್ಳುವಂತೆ ೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸಿ ಾಯದ ಮೇಲೆ ಬರೆ ಎಳೆದಂತಾಗಿದೆ. ಅಲ್ಲದೆ ್ರಷ್ಟಾಚಾರದ ಪೆಡಂಭೂತ ಇಡೀ ಸಮಾಜವನ್ನೇ ಹಾಮಾರಿಯಂತೆ ಕಾಡುತ್ತಿದೆ. ಬೆಲೆ ಏರಿಕೆ ಿಯಂತ್ರಣಕ್ಕಾಗಲಿ ಅಥವಾ ಭ್ರಷ್ಟಾಚಾರದ ಿಗ್ರಹಕ್ಕಾಗಲಿ ದೃಢವಾದ ಕ್ರಮಗಳನ್ನು ೊಳ್ಳಲಾಗಿಲ್ಲ. ಲಾಭದಾಯಕವಾಗಿರುವ ೇಂದ್ರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ೇರು ಬಂಡವಾಳವನ್ನು ಮಾರಾಟ ಮಾಡುವ ಮೂಲಕ ಈ ಒಂದು ವರ್ಷದಲ್ಲೇ ೂ.40,000 ಕೋಟಿಗಳನ್ನು ಸಂಗ್ರಹಿಸಲು ುರಿ ಹೊಂದಿರುವುದು ಕಾರ್ಮಿಕರ ಹಾಗೂ ೇಶದ ಹಿತಕ್ಕೆ ಮಾರಕವಾದ ಕ್ರಮಗಳಾಗಿವೆ. ಾರ್ಮಿಕ ಕಾನೂನುಗಳನ್ನು ಜಾರಿಗೊಳಿಸದೆ ಾಮಾಜಿಕ ಭದ್ರತೆಗೆ ಧಕ್ಕೆ ಉಂಟು ಮಾಡಲಾಗಿದೆ. ವರ್ಷವಿಡೀ ನಿರಂತರವಾಗಿ ಮಾಡಬೇಕಾದ ಖಾಯಂ ಕೆಲಸಗಳನ್ನು ಗುತ್ತಿಗೆ ಪದ್ಧತಿಯುಲ್ಲಿ ನಿರ್ವಹಿಸುವ ಮೂಲಕ ಕಾರ್ಮಿಕರನ್ನು ತೀವ್ರ ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ರಕಾರಗಳು ನೇರವಾಗಿ ಗುತ್ತಿಗೆ ಪದ್ದತಿಯಲ್ಲಿ ದುಡಿಯುವ ಕಾರ್ಮಿಕರಿಗೂ ಒಳಗೊಂಡು ಾರ್ವಜನಿಕ ಕ್ಷೇತ್ರದ ಹಾಗೂ ಖಾಸಗಿ ರಂಗದ ೈಗಾರಿಕೆಗಳಲ್ಲೂ ಕನಿಷ್ಟ ವೇತನ, ಭವಿಷ್ಯನಿಧಿ, ಇಎಸ್ಐ, ಬೋನಸ್ ಮತ್ತು ಗ್ರಾಚ್ಯುಟಿ ಸೌಲಭ್ಯಗಳನ್ನು ಜಾರಿಗೊಳಿಸದೆ ಿರಾಕರಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಸಲು ೇಕಾದ ಯೋಜನೆಗಳನ್ನು ರೂಪಿಸಲಾಗುತ್ತಿಲ್ಲ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಮಾಡಿದ ಕಾನೂನು ಜಾರಿಗೊಳಿಸಲು ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸದೆ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕೇವಲ ತೋಟಾಟಿಕೆಯಾಗಿದೆ. ಕಾರ್ಮಿಕರ ಸಂಘಟನಾ ಹಕ್ಕನ್ನೇ ಮೊಟಕುಗೊಳಿಸಲು ಬಹುರಾಷ್ಟ್ರೀಯ ಕಂಪನಿಗಳು ಧಾಳಿ ನಡೆಸುತ್ತಿರುವಾಗ ಸರಕಾರಗಳು ಬಂಡವಾಳಗಾರರೊಂದಿಗೆ ಸಹಕರಿಸಿ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ನಡೆಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ದಿನಾಂಕ 7–9–2011ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶವನ್ನು ನಡೆಸಿ ಕಾರ್ಮಿಕರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದ ಮೇಲೆ ಒತ್ತಡ ಹೇರಲು ದಿನಾಂಕ 8–11–2011ರಂದು ದೇಶವ್ಯಾಪಿಯಾಗಿ ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ/ಸತ್ಯಾಗ್ರಹ ನಡೆಸಿದ ನಂತರವೂ ಕೇಂದ್ರ ಸರಕಾರ ದುಡಿಯುವ ಜನರ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ. ಈ ಹಿನ್ನೆಲೆಯಲ್ಲಿ ನವೆಂಬರ್ 25 ರಂದು ಪುನಃ ಸಭೆ ನಡೆಸಿದ ಕೇಂದ್ರ ಕಾರ್ಮಿಕ ಸಂಘಟನೆಗಳು 2012ರ ಫೆಬ್ರವರಿ 28 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. 5 ಪ್ರಮುಖ ಬೇಡಿಕೆಗಳಾದ 1) ಬೆಲೆ ಏರಿಕೆ ನಿಯಂತ್ರಣ 2) ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್ 3) ಕಾರ್ಮಿಕ ಕಾನೂನುಗಳ ಕಠಿಣವಾದ ಅನುಷ್ಠಾನ 4) ಸಾರ್ವತ್ರಿಕವಾಗಿ ಎಲ್ಲ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳು ಹಾಗೂ 5) ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಷೇರು ಮಾರಾಟ ಮಾಡದಿರಲು ಒತ್ತಾಯಿಸುತ್ತಾ ಬರಲಾಗಿದೆ.

ಮೇಲಿನ ಪ್ರಮುಖ ಬೇಡಿಕೆಗಳ ಜೊತೆಗೆ ಕೂಡಲೇ ಕೆಳಗಿನ ಬೇಡಿಕೆಗಳ ಕುರಿತು ತುರ್ತು ಕ್ರಮಗಳನ್ನು ವಹಿಸಲು ಸರಕಾರವನ್ನು ಒತ್ತಾಯಿಸಲು ಕರೆ ನೀಡಲಾಗಿದೆ.

1. ಖಾಯಂ ಹಾಗೂ ನಿರಂತರ ಸ್ವರೂಪದ ಕೆಲಸಗಳನ್ನು ಗುತ್ತಿಗೆ ನೀಡದಂತೆ ಹಾಗೂ ಅಲ್ಲಿಯವರೆಗೆ ಕೈಗಾರಿಕೆ/ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರಿಗೆ ನೀಡಲಾಗುವ ವೇತನ/ಸೌಲಭ್ಯಗಳ ದರದಲ್ಲಿಯೇ ಗುತ್ತಿಗೆ ಕಾರ್ಮಿಕರಿಗೂ ಸಿಗುವಂತೆ ಕ್ರಮ ವಹಿಸತಕ್ಕದ್ದು.
2. ಷೆಡ್ಯೂಲ್‌ಗಳ ವ್ಯತ್ಯಾಸವಿಲ್ಲದೆ, ಸೂಚ್ಯಂಕ ಆಧಾರಿತ ತಿಂಗಳಿಗೆ 10,000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಶಾಸನಬದ್ಧ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ಕನಿಷ್ಟ ಕೂಲಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸತಕ್ಕದ್ದು.
3. ಬೋನಸ್, ಭವಿಷ್ಯನಿಧಿ ಪಾವತಿಗೆ ಇರುವ ಎಲ್ಲಾ ಮಿತಿ ಹಾಗೂ ಅರ್ಹತೆಗಳನ್ನು ತೆಗೆದು ಹಾಕಿ ಗ್ರಾಚ್ಯುಟಿ ಮೊತ್ತವನ್ನು ಏರಿಸತಕ್ಕದ್ದು.
4. ಎಲ್ಲರಿಗೂ ನಿವೃತ್ತಿ ವೇತನ ನೀಡತಕ್ಕದ್ದು.
5. 45 ದಿನಗಳ ಒಳಗಾಗಿ ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿ ಮತ್ತು ಐಎಲ್‌ಓನ 87 ಹಾಗೂ 98ನೇ ಸಮಾವೇಶಗಳನ್ನು ಈ ಕೂಡಲೇ ದೃಢೀಕರಿಸತಕ್ಕದ್ದು.

ಇದೇ ಬೇಡಿಕೆಗಳ ಆಧಾರದಲ್ಲಿ ನವೆಂಬರ್ 8 ಂದು ದೇಶವ್ಯಾಪಿ ಹಾಗೂ ರಾಜ್ಯವ್ಯಾಪಿ ನಡೆದ ಜೈಲ್ ಭರೋ ಹೋರಾಟದ ವರದಿ ಇಲ್ಲಿದೆ

ಸಿಐಟಿಯು, ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಎಐಸಿಸಿಟಿಯು, ಎಐಯುಟಿಯುಸಿ, ಯುಟಿಯುಸಿ, ಎಲ್‌ಐಎಫ್ ಮತ್ತು ಎಸ್‌ಇಡಬ್ಲ್ಯೂ ಮೊದಲಾದ 11ಕ್ಕಿಂತ ಹೆಚ್ಚು ಕೇಂದ್ರ ಕಾರ್ಮಿಕ ಸಂಘಟನೆಗಳಲ್ಲದೆ, ಬ್ಯಾಂಕ್, ವಿಮಾ, ಔಷಧಿ ಮಾರಾಟ, ರೈಲ್ವೆ ವಿವಿಧ ಸಾರ್ವಜನಿಕ/ಖಾಸಗಿ ಉದ್ಯಮಗಳ ಕಾರ್ಮಿಕರು ನೌಕರರು ಒಂದಾಗಿ ಈ ಚಳುವಳಿಯಲ್ಲಿ ಪಾಲ್ಗೊಂಡು ಅಪೂರ್ವವಾದ ಐಕ್ಯತೆಯನ್ನು ಮೆರೆದರು.

ದೇಶದ 640 ಜಿಲ್ಲೆಗಳ ಪ್ರತಿ ಸುಮಾರು 500ಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ನವೆಂಬರ್ 8ರಂದು ಕಾರ್ಮಿಕರು ಮತ್ತು ದುಡಿಯುವ ಜನರು ಜೈಲ್ ಭರೋ, ಪಿಕೆಟಿಂಗ್, ಮತಪ್ರದರ್ಶನ, ರ್‍ಯಾಲಿ, ಬಹಿರಂಗ ಸಭೆ, ರಸ್ತೆ ತಡೆ ಹೀಗೆ ಒಂದಲ್ಲ ಒಂದು ವಿಧವಾದ ಕಾರ್ಯಕ್ರಮಗಳನ್ನು ಆಯಾ ರಾಜ್ಯದ ರಾಜಧಾನಿಗಳಲ್ಲಿ, ಪ್ರಮುಖ ನಗರಗಳು ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ನಡೆಸಿದರು.

ವಿವಿಧ ಕೈಗಾರಿಕೆಗಳಲ್ಲಿನ ಕಾರ್ಮಿಕರು, ಸಾರಿಗೆ, ಬೀಡಿ, ಕಲ್ಲಿದ್ದಲು, ಕಬ್ಬಿಣ–ಉಕ್ಕು, ತೈಲೋತ್ಪನ್ನ, ಅದಿರು ಗಣಿ, ಕಟ್ಟಡ, ಅಂಗನವಾಡಿ, ಬಿಸಿಯೂಟ, ಹಮಾಲಿ, ವಿವಿಧ ತೆರನಾದ ಗುತ್ತಿಗೆ ಕಾರ್ಮಿಕರು, ರೇಗಾ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ತೋಟ ಕಾರ್ಮಿಕರು, ಇದಲ್ಲದೆ, ಶಿಕ್ಷಕರು, ಕೇಂದ್ರ/ರಾಜ್ಯ ಸರ್ಕಾರಿ ನೌಕರರು, ಬ್ಯಾಂಕ್, ವಿಮಾ, ದೂರಸಂಪರ್ಕ ಇದಲ್ಲದೆ ಹಲವು ರಾಜ್ಯಗಳಲ್ಲಿ ಕೃಷಿ ಕೂಲಿಕಾರ್ಮಿಕರು, ಮೀನುಗಾರರು ಹೀಗೆ ಹತ್ತಾರು ಜನ ವಿಭಾಗಗಳು ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದು ವಿಶೇಷ.

ಹರಿಯಾಣ, ದೆಹಲಿ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಪಂಜಾಬ್, ಉತ್ತರ ಪ್ರದೇಶ, ಛತ್ತೀಸ್‌ಗಡ, ಹಿಮಾಚಲ ಪ್ರದೇಶ, ರಾಜಾಸ್ತಾನ್, ತ್ರಿಪುರಾ, ಮಧ್ಯಪ್ರದೇಶ, ಕರ್ನಾಟಕ ಮೊದಲಾದ ಕಡೆಗಳಲ್ಲಿ ಸಾವಿರಾರು ಕಾರ್ಯಕರ್ತರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಮಾಲ್ಡದಲ್ಲಿ ಪೋಲೀಸರು ಕಾರ್ಮಿಕರ ಮೇಲೆ ದೈಹಿಕ ಹಲ್ಲೆ ನಡೆಸಿದ ಪರಿಣಾಮವಾಗಿ 32 ಜನರು ಗಾಯಗೊಂಡಿದ್ದಾರೆ. ಇದಲ್ಲದೆ ಬರ್ದ್ವಾನ್‌ನಲ್ಲಿ ಮಹಿಳಾ ಮುಖಂಡರು ಸೇರಿದಂತೆ ಹಲವು ಸಿಐಟಿಯು ಮುಖಂಡರ ಮೇಲೆ ದೌರ್ಜನ್ಯ ನಡೆಸಿದ ವರದಿಯಾಗಿದೆ. ರಾಜಧಾನಿ ದೆಹಲಿಯಲ್ಲಿ ಸಾವಿರಾರು ಕಾರ್ಮಿಕರು ಕೇಂದ್ರ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಪ್ರತಿಭಟನೆಯನ್ನು ನಡೆಸಿ ಬಂಧನಕ್ಕೊಳಗಾಗಿದ್ದಾರೆ. ದೆಹಲಿಯಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಕಾರ್ಮಿಕರು ಸಂಸತ್ತಿನತ್ತ ಮೆರವಣಿಗೆ ನಡೆಸಲು ಮುಂದಾದಾಗ ಅವರನ್ನು ಬಂಧಿಸಲಾಯಿತು. ಆ ಬಳಿಕಾ ಜಂತರ್ ಮಂತರ್ ಬಳಿ ನಡೆದ ಸಭೆಯನ್ನುದ್ದೇಶಿಸಿ ಪ್ರಮುಖ ನಾಯಕರು ಮಾತನಾಡಿದರು.

ನವೆಂಬರ್ 8ರ ಚಳುವಳಿಯನ್ನು ಯಶಸ್ವಿಗೊಳಿಸಲು ಶ್ರಮಿಸಿದ ದೇಶದ ಕಾರ್ಮಿಕ ವರ್ಗವನ್ನು ಸಿಐಟಿಯು ಕೇಂದ್ರ ಸಮಿತಿ ಅಭಿನಂದಿಸಿದೆ. ಇದಲ್ಲದೆ ಮುಂಬರುವ ದಿನಗಳಲ್ಲಿ ನಡೆಯುವ ಅಖಿಲ ಭಾರತ ಮುಷ್ಕರದತ್ತ ಈಗಿನಿಂದಲೇ ಕಾರ್ಮಿಕರನ್ನು ಸಜ್ಜುಗೊಳಿಸಲು ಸಿಐಟಿಯು ಕರೆ ನೀಡಿದೆ.

ಮಂಗಳೂರಿನಲ್ಲಿ ನವೆಂಬರ್ 8ರಂದು ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಕಾರ್ಯಕರ್ತರು ಪ್ರಧಾನ ಅಂಚೆ ಕಛೇರಿಗೆ ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು. ಟೌನ್‌ಹಾಲ್‌ನಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಸಿಐಟಿಯು, ಬಿಎಂಎಸ್ ಹಾಗೂ ಎಐಟಿಯುಸಿಗೆ ಸೇರಿದ ನೂರಾರು ಕಾರ್ಯಕರ್ತರು ಪಾಲ್ಗೊಂಡು ಪಿಕೆಟಿಂಗ್ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಬಿ.ಮಾಧವ, ಬಿಎಂಎಸ್ ಮುಖಂಡರಾದ ವಿಶ್ವನಾಥ್ ಶೆಟ್ಟಿ, ಎಐಟಿಯುಸಿ ಮುಖಂಡರಾದ ಬಿ.ಶೇಖರ್ ಮಾತನಾಡಿದರು. ಪ್ರತಿಭಟನೆ ನೇತೃತ್ವವನ್ನು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಇದಲ್ಲದೆ ಬಿಎಂಎಸ್, ಎಐಟಿಯುಸಿಯ ಹಲವಾರು ಮುಖಂಡರು ವಹಿಸಿದ್ದರು.

ಕೇಂದ್ರ ಕಾರ್ಮಿಕ ಸಂಘಗಳು ಜಂಟಿ ಕರೆಯ ಭಾಗವಾಗಿ ಗದಗ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನವೆಂಬರ್ 8ರಂದು ಸಿಐಟಿಯು ನೇತೃತ್ವದಲ್ಲಿ ಧರಣಿ ಸತ್ಯಾಗ್ರ ನಡೆಸಿದರು. ಧರಣಿಯಲ್ಲಿ ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯಿತಿ ನೌಕರರು, ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನಾನ್ ಕ್ಲಿನಿಕ್ ವರ್ಕರ್ಸ್ ಮತ್ತು ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಆಶಾ ಕಾರ್ಯಕರ್ತೆಯರು ಮತ್ತು ಎಲ್‌ಐಸಿ ಯೂನಿಯನ್, ಎಲ್‌ಐಸಿ ಏಜೆಂಟರ ಸಂಘಗಳು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ಮೇರೆಗೆ ಶಿವಮೊಗ್ಗದಲ್ಲಿ ನವೆಂಬರ್ 8ರಂದು ನೂರಾರು ಕಾರ್ಮಿಕರು ಪ್ರತಿಭಟನೆ ನಡೆಸಿದರು. ಪ್ರಧಾನ ಅಂಚೆ ಎದುರು ನಡೆದ ಈ ಪ್ರದರ್ಶನದ ಉದ್ಘಾಟನೆಯನ್ನು ವಿಮಾ ನೌಕರರ ಸಂಘದ ಮಾಜಿ ಮುಖಂಡರಾದ ವೇದವಿಯಾಸನ್ ನೆರವೇರಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಅಂಚೆ ನೌಕರರ ಸಂಘದ ಮುಖಂಡರಾದ ಪ್ರಕಾಶ್‌ರಾವ್, ವಿಮಾ ನೌಕರರ

ಪುಟ12 ಕ್ಕೆ

ಸುಬ್ರಹ್ಮಣ್ಯದಲ್ಲಿ ನಡೆದ ಹಲ್ಲೆಗೆ ಮಂಗಳೂರಿನಲ್ಲಿ ಪ್ರತಿಭಟನೆ

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಜಾತ್ರೆಯ ದಿನಗಳಲ್ಲಿ ನಡೆಯುತ್ತಿರುವ ಮಡೆಸ್ನಾನ (ಬ್ರಾಹ್ಮಣರು ಉಂಡ ಎಂಜಲೆಲೆಯ ಮೇಲೆ ನಡೆಸುವ ಉರುಳು ಸೇವೆಯ ಹರಕೆ)ವನ್ನು ನಿಷೇಧಿಸಬೇಕೆಂದು ರಾಜ್ಯಾದ್ಯಂತ ಪ್ರಜ್ಞಾವಂತ ಜನ ಸರ್ಕಾರವನ್ನು ಕೋರುತ್ತಿರುವ ಸಂದರ್ಭದಲ್ಲಿಯೇ, ನವಂಬರ್ 30 ರಂದು ಸದ್ರಿ ವಿದ್ಯಮಾನವನ್ನು ಪರಿಶೀಲಿಸಲು ಬಂದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ಅವರ ಮೇಲೆ ಹಲ್ಲೆ ನಡೆದಿದೆ. ತಾವು ನಡೆಸಲಿರುವ ಅಧ್ಯಯನದ ಬಗ್ಗೆ ಜಾಗೃತಿ ವೇದಿಕೆಯವರು ದೇವಸ್ಥಾನದ ಆಡಳಿತ ಮಂಡಳಿಗೆ ಹಾಗೂ ಪೋಲೀಸ್ ಇಲಾಖೆಗೆ ತಿಳಿಸಿ ಅನುಮತಿ ಪಡೆದ ಮೇಲೂ ಈ ಹಲ್ಲೆ ನಡೆದಿದೆ.



ಆಡಳಿತ ಮಂಡಳಿಯ ಸಿಬ್ಬಂದಿಗಳನ್ನೂ ಒಳಗೊಂಡ ಸ್ಥಳೀಯ ಆದಿವಾಸಿ ಮಲೆಕುಡಿಯ ಜಾತಿಗೆ ಸೇರಿದ ಆರು ಮಂದಿ ಶಿವರಾಮು ಅವರನ್ನು ಸಾರ್ವಜನಿಕರ, ಮಾಧ್ಯಮದವರ ಮತ್ತು ಪೋಲೀಸರ ಸಮ್ಮುಖದಲ್ಲೇ ಅಟ್ಟಾಡಿಸಿ ಹೊಡೆದಿದ್ದಾರೆ. ಆಡಳಿತ ಮಂಡಳಿಯ ಕುಮ್ಮಕ್ಕಿನಿಂದಲೇ ಈ ಹಲ್ಲೆ ನಡೆದುದು ಮುಂದಿನ ವಿದ್ಯಮಾನಗಳಿಂದ ಸ್ಪಷ್ಟವಾಗುತ್ತದೆ.

ಹಲ್ಲೆ ವಿಷಯ ಟೀವಿಗಳ ಮೂಲಕ ಮಧ್ಯಾಹ್ನದ ವೇಳೆಗೆ ಪ್ರಸಾರವಾಗುತ್ತಿದ್ದಂತೆಯೇ ಮಂಗಳೂರಿನಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆಗಾಗಿ ಸಿದ್ಧತೆ ನಡೆದು ಸಮಾನ ಮನಸ್ಕ ಪ್ರಗತಿಪರ ಸಂಘಟನೆಗಳ ಸಂಪರ್ಕ ನಡೆದಿದೆ. ಧ್ವನಿವರ್ಧಕ ಅನುಮತಿ ದೊರೆಯುವಷ್ಟು ವೇಳೆ ಇಲ್ಲದ್ದರಿಂದ ಅದು ಇಲ್ಲದೇನೇ ಸಾಯಂಕಾಲ 5 ಗಂಟೆಗೆ ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗಿದೆ. ಅರುವತ್ತಕ್ಕೂ ಹೆಚ್ಚು ಮಂದಿ ಈ ದಿಢೀರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಸುಬ್ರಹ್ಮಣ್ಯದಲ್ಲಿ ಕೆ.ಎಸ್.ಶಿವರಾಮು ಅವರ ಮೇಲೆ ನಡೆದ ಹಲ್ಲೆಯನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು. ಹಲ್ಲೆ ನಡೆಸಿದ ಆರು ಮಂದಿ ದೇವಳದ ಸಿಬ್ಬಂದಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು; ಮಡೆಸ್ನಾನವನ್ನು ಸರ್ಕಾರ ಸಂಪೂರ್ಣವಾಗಿ ನಿಷೇಧಿಸಬೇಕು; ಬ್ರಾಹಣರಿಗೇ ಪ್ರತ್ಯೇಕ ಭೋಜನ ವ್ಯವಸ್ಥೆ ಮಾಡುವ ಮಡೆಸ್ನಾನದ ಮೂಲ ನೆಲೆಯಾದ ಪಂಕ್ತಿಭೇದವನ್ನು ಇಲ್ಲವಾಗಿಸಬೇಕು; ಮಡೆಸ್ನಾನವನ್ನು ನಡೆಸಲು ಆಡಳಿತ ಮಂಡಳಿಗೆ ನಿರ್ದೇಶನ ನೀಡಿದ ಸಚಿವ ಡಾ.ವಿ.ಎಸ್.ಆಚಾರ್ಯ ರಾಜೀನಾಮೆ ನೀಡಬೇಕು; ಹಲ್ಲೆ ಘಟನೆಗೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು; ಸಾಂವಿಧಾನಿಕವಾಗಿ ಬಗೆಹರಿಸಬೇಕಾದ ಮಡೆಸ್ನಾನ ಪದ್ಧತಿಯನ್ನು ಅಷ್ಟ ಮಂಗಳ ಪ್ರಶ್ನೆಯಿಟ್ಟು ಬಗೆಹರಿಸುವುದಾಗಿ ಹೇಳಿರುವ ಜಿಲ್ಲಾಧಿಕಾರಿಯನ್ನು ತತ್‌ಕ್ಷಣ ಅಮಾನತುಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಪ್ರತಿಭಟನೆಯಲ್ಲಿ ಸಮುದಾಯದ ವಾಸುದೇವ ಉಚ್ಚಿಲ, ವಿಚಾರವಾದಿ ಸಂಘದ ಪ್ರೊ. ನರೇಂದ್ರ ಕಾಮತ್, ಪಿಯುಸಿಎಲ್‌ನ ಸುರೇಶ್‌ಭಟ್ ಬಾಕ್ರಬೈಲ್, ಡಿವೈಎಫ್ಐನ ದಯಾನಂದ ಶೆಟ್ಟಿ, ಪ್ರಗತಿಪರ ಚಿಂತಕರ ವೇದಿಕೆಯ ಪ್ರಸನ್ನ, ಎಸ್‌ಎಫ್‌ಐನ ಜೀವನ್‌ರಾಜ್ ಕುತ್ತಾರ್, ನಿತಿನ್ ಕುತ್ತಾರ್, ದಲಿತ ಹಕ್ಕುಗಳ ಸಮಿತಿಯ ಕೃಷ್ಣಪ್ಪ ಕೊಂಚಾಡಿ, ಲಿಂಗಪ್ಪ ನಂತೂರು, ಸಿಐಟಿಯುನ ವಸಂತ ಆಚಾರಿ, ಸುಕುಮಾರ್, ಸುನಿಲ್ ಕುಮಾರ್ ಬಜಾಲ್, ವಿಮಾ ನೌಕರರ ಸಂಘದ ರಾಘವೇಂದ್ರ ರಾವ್,ಕರ್ನಾಟಕ ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಡಿಎಸ್ಸೆಸ್ (ಅಂಬೇಡ್ಕರ್‌ವಾದ)ನ ಎಸ್.ಪಿ.ಆನಂದ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

★

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ ವಿರೋಧಿಸಿ ಪ್ರತಿಭಟನೆ

ದೇಶದಲ್ಲಿ ಉದಾರೀಕರಣ ನೀತಿ ಜಾರಿಯಾದ ಬಳಿಕ ರೈತರ ಸರಣಿ ಆತ್ಮಹತ್ಯೆಗಳು ಹೆಚ್ಚಿವೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆಗೆ ಕೇಂದ್ರದ ಯುಪಿಎ ಸರಕಾರ ಅವಕಾಶ ನೀಡುತ್ತಿರುವುದು ಅಪಾಯಕಾರಿ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್ ಆತಂಕ ವ್ಯಕ್ತಪಡಿಸಿದ್ದಾರೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆಯನ್ನು ವಿರೋಧಿಸಿ ವ್ಯಾಪಾರಿಗಳ ಸಂಘಟನೆಯಾದ ಕಾನ್ಫೆಡರೇಶನ್ ಆಫ್ ಆಲ್ ಇಂಡಿಯಾ ಟ್ರೇಡರ್ಸ್ ಹಮ್ಮಿಕೊಂಡಿರುವ ಭಾರತ್ ಬಂದ್ ಕರೆಯನ್ನು ಬೆಂಬಲಿಸಿ ಸಿಪಿಎಂ ದ.ಕ.ಜಿಲ್ಲಾ ಸಮಿತಿ ವತಿಯಿಂದ ಡಿಸೆಂಬರ್ 1 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಳ್ಳಲಾದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಅವರು ಮಾತನಾಡಿದರು.



ಪ್ರತಿಭಟನೆಗೂ ಮೊದಲು ನಗರದಲ್ಲಿ ಮೆರವಣಿಗೆ ನಡೆಯಿತು. ಪಕ್ಷದ ಮುಖಂಡರಾದ ವಸಂತ ಆಚಾರಿ, ಯು.ಬಿ.ಲೋಕಯ್ಯ, ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುಕುಮಾರ್, ಪದ್ಮಾವತಿ ಶೆಟ್ಟಿ, ಸದಾಶಿವದಾಸ್, ಸುನಿಲ್ ಕುಮಾರ್ ಬಜಾಲ್ ಅಲ್ಲದೆ ಬೀದಿ ಬದಿ ವ್ಯಾಪಾರಿಗಳ ಸಂಘಟನೆಯ ಹಸನ್, ಮುಸ್ತಾಫಾ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

★

ಎಸ್‌ಎಫ್‌ಐ ನಾಯಕ ಜೀವನ್‌ರಾಜ್ ಮೇಲೆ ಪೋಲೀಸ್ ಹಲ್ಲೆ: ಡಿಸೆಂಬರ್ 8 ರಂದು ಉಳ್ಳಾಲ ಠಾಣೆಗೆ ಮುತ್ತಿಗೆ

ಎಸ್‌ಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಹಾಗೂ ಮಂಗಳೂರಿನಲ್ಲಿ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವ ಜೀವನ್‌ರಾಜ್ ಕುತ್ತಾರ್ ಇವರ ಮೇಲೆ ಡಿಸೆಂಬರ್ 4ರ ರಾತ್ರಿ ಪೋಲೀಸರು ಹಲ್ಲೆ ನಡೆಸಿದ್ದು, ರಾಜ್ಯಾದ್ಯಂತ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಸಂಘಟನೆಗಳು ಪ್ರತಿಭಟಿಸಲು ಸಿದ್ಧತೆ ನಡೆಸಿವೆ.

ಉಡುಪಿ ಸಿಪಿಎಂ ಜಿಲ್ಲಾ ಸಮ್ಮೇಳನಕ್ಕೆ ಆಗಮಿಸಿದ್ದ ಸಿಪಿಎಂ ಮಾಜಿ ಶಾಸಕರಾದ ಜೆ.ವಿ.ಶ್ರೀರಾಮರೆಡ್ಡಿಯವರನ್ನು ಡೆಸೆಂಬರ್ 4ರ ಸಾಯಂಕಾಲ ಜೀವನ್‌ರಾಜ್ ಮತ್ತು ಡಿವೈಎಫ್‌ಐನ ಮುನೀರ್ ಕಾಟಿಪಳ್ಳ ಅವರು ಬಜ್ಪೆ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ, ಅವರನ್ನು
ಕಾರೊಂದರಲ್ಲಿ ಉಡುಪಿಗೆ ಕರೆದೊಯ್ದು ಅದೇ
ಕಾರಿನಲ್ಲಿ ವಾಪಸಾಗುತ್ತಿದ್ದರು. ಮುನೀರ್‌ರನ್ನು
ಕಾಟಿಪಳ್ಳದಲ್ಲಿ ಬಿಟ್ಟು ತೊಕ್ಕೋಟುವರೆಗೆ ಅದೇ
ಕಾರಿನಲ್ಲಿ ಬಂದ ಜೀವನ್‌ರಾಜ್
ತೊಕ್ಕೋಟಿನಲ್ಲಿ ತಾನು ನಿಲ್ಲಿಸಿದ್ದ ಬೈಕ್‌ನಲ್ಲಿ
ಸಮೀಪವೇ ಇರುವ ಮನೆಗೆ ಹೊರಟಿದ್ದರು.

ಆಗಲೇ ರಾತ್ರಿಯಾಗಿತ್ತು. ರಾತ್ರಿ ರೌಂಡ್ಸ್
ನಡೆಸುತ್ತಿದ್ದ ಎಸಿಪಿ ಜಗನ್ನಾಥ್ ಅವರನ್ನು ನಿಲ್ಲಿ
ಬೈಕ್ ದಾಖಲೆಗಳಿರುವುದನ್ನು ದೃಢಪಡಿಸಿದರು.
ಪೋಲೀಸ್ ವಾಹನದಲ್ಲಿ ಅವರನ್ನು ಉಳ್ಳಾ
ಠಾಣೆಗೆ ಕಳುಹಿಸಿಕೊಟ್ಟರು. ಅಲ್ಲಿ ಪೋಲೀಸ
ಪೇದೆ ಸತೀಶ್ ಎಂಬಾತ ಜೀವನ್‌ರಾಜ್ ಅವ
ಮೊಬೈಲ್ ಕಿತ್ತು ಒದ್ದು ಹಲ್ಲೆ ನಡೆಸಿದ್ದಾನೆ. ಶರ್
ಕಳಚಿ ಒಳಕ್ಕೆ ತಳ್ಳಿದ್ದಾನೆ. ಆ ಬಳಿಕ ಠಾಣೆ
ಆಗಮಿಸಿದ ಎಸಿಪಿ ಜಗನ್ನಾಥ್ ಮತ್ತೊ
ಅವರ ಕೆನ್ನೆಗೆ ಬಾರಿಸಿದ್ದಾರೆ. ಈತ ವಿದ್ಯಾರ್ಥಿ
ನಾಯಕನೆಂದು ತಿಳಿದ ಆನಂತರ ಅವಸರದಿಂ
ಮನೆಗೆ ಕಳುಹಿಸಿ ಕೊಟ್ಟಿದ್ದಾರೆ. ಜೀವನ್‌ರಾಜ
ಖಾಸಗಿ ಆಸ್ಪತ್ರೆಗೆ ದಾಖಲಾಗಿ ಅಲ್ಲಿ ಚಿಕಿ
ಪಡೆದಿರುತ್ತಾರೆ.

ಡಿಸೆಂಬರ್ 6ರ ಬೆಳಿಗ್ಗೆ ಡಿವೈಎಫ್‌ಐ ದ.
ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪ
ಕಾರ್ಯದರ್ಶಿ ದಯಾನಂದ ಶೆಟ್ಟಿ ಹಾಗೂ
ಎಸ್‌ಎಫ್‌ಐ ಜಿಲ್ಲಾ ಸಮಿತಿ ನಾಯಕ ನಿತಿ
ಕುತ್ತಾರ್ ಪತ್ರಿಕಾಗೋಷ್ಠಿ ಕರೆದು ಇದನ
ಮಾಧ್ಯಮದವರಿಗೆ ತಿಳಿಸಿದ್ದಾರೆ. ಡಿಸೆಂಬರ್
ರಂದು ಎಸ್‌ಎಫ್‌ಐ, ಡಿವೈಎಫ್‌ಐಗ
ನೇತೃತ್ವದಲ್ಲಿ ಇತರ ಸಂಘಟನೆಗಳೂ ಸೇ
ಹಲ್ಲೆಯನ್ನು ಖಂಡಿಸಿ ಹಾಗೂ ಇಬ್ಬ
ಪೋಲೀಸರನ್ನು ಅಮಾನತುಗೊಳಿಸುವ
ಆಗ್ರಹಿಸಿ ಉಳ್ಳಾಲ ಪೋಲೀಸ್ ಠಾಣೆಗೆ ಮುತ್ತಿ
ಹಾಕುವುದಾಗಿ ಘೋಷಿಸಲಾಗಿ
ಪೋಲೀಸರಿಂದ ಹಲ್ಲೆ ಕುರಿತು ದೂ
ದಾಖಲಿಸಲಾಗಿದ್ದು, ಇಬ್ಬರೂ ಪೋಲೀಸರನ್ನು
ಅಮಾನತುಗೊಳಿಸುವಂತೆ ಜಿಲ್ಲೆಯ ಹಿರಿ
ಪೋಲೀಸ್ ಅಧಿಕಾರಿಗಳನ್ನು ಕೋರಲಾಗಿ



ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ

ಯುಪಿಎ–2 ಸರಕಾರ ಹಿಂದೆ ಸರಿಯಲೇಬೇಕಾಯಿತು

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಡಿಸೆಂಬರ್ 8, 2011 ರ ಸಂಪಾದಕೀಯ)

ಕೊನೆಗೂ ಸಂಸದೀಯ ಪ್ರಜಾಪ್ರಭುತ್ವದ ಚೇತನದ ಕೈಮೇಲಾಗಿದೆ. ಬಹು–ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ನೀಡುವ ಕೇಂದ್ರ ಸಂಪುಟದ ನಿರ್ಣಯವನ್ನು ವಸ್ತುತಃ ಹಿಂತೆಗೆದುಕೊಳ್ಳಲಾಗಿದೆ ಎಂದು ಯುಪಿಎ–2 ಸರಕಾರ ಎಲ್ಲ ಸಂಸದೀಯ ಗುಂಪುಗಳ ಮುಖಂಡರಿಗೆ ತಿಳಿಸುವುದರೊಂದಿಗೆ ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೆ ಬಂದಿದ್ದ ಹತ್ತು ದಿನಗಳ ಭಂಗ ನಿವಾರಣೆಯಾಗಿದೆ. ಸಂಸತ್ತು ಅಧಿವೇಶನದಲ್ಲಿರುವಾಗಲೇ ಕೇಂದ್ರ ಸಂಪುಟ ಕೈಗೊಂಡಿದ್ದ ಏಕಪಕ್ಷೀಯ ನಿರ್ಣಯದಿಂದಾಗಿಯೇ ಅಧಿವೇಶನಕ್ಕೆ ಈ ಭಂಗ ಬಂದಿತ್ತು. ಕಳೆದ ವಾರ ನಾವು ಈ ಅಂಕಣದಲ್ಲಿ ಗಮನಿಸಿದಂತೆ, ಕೇಂದ್ರ ಸಂಪುಟಕ್ಕೆ ಕಾರ್ಯಾಂಗದ ನಿರ್ಣಯ ಕೈಗೊಳ್ಳುವ ಅಧಿಕಾರ ಇಲ್ಲವೆಂದಲ್ಲ, ಆದರೆ ಇಂತಹ ಮಹತ್ವದ ನಿರ್ಣಯಗಳನ್ನು ಸಂಸತ್ತಿನ ಮಂಜೂರಾತಿಯಿಂದಲೇ ಕೈಗೊಳ್ಳಬೇಕಾಗಿದೆ ಎಂಬ ವಿವೇಕ ಇರಬೇಕಾಗುತ್ತದೆ. ಸರಕಾರ ಅಂತಿಮವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಬಿಂಬಿಸಿದ್ದ ಪ್ರತಿಪಕ್ಷಗಳ ಒತ್ತಡಕ್ಕೆ ತಲೆ ಬಾಗಿದೆ. ಸಾರ್ವಜನಿಕ ಅಭಿಪ್ರಾಯದಿಂದಾಗಿ ಕಾಂಗ್ರೆಸಿನ ಕೆಲವು ಯುಪಿಎ ಮಿತ್ರಪಕ್ಷಗಳೂ ಕೂಡ ಸರಕಾರದ ಈ ಪ್ರಯತ್ನವನ್ನು ವಿರೋಧಿಸಬೇಕಾಗಿ ಬಂತು. ಏನೇ ಆಗಲಿ, ಇಂತಹ ಯಾವುದೇ ನಿರ್ಣಯವನ್ನು ಸಂಸತ್ತು ಅಧಿವೇಶನದಲ್ಲಿರುವಾಗ ಅದರ ಮಂಜೂರಾತಿಯಿಲ್ಲದೆ ಕೈಗೊಳ್ಳಬಾರದು ಎಂಬುದು ಸಂಸದೀಯ ಪ್ರಜಾಪ್ರಭುತ್ವದ ಜೀವಾಳ.


ಇದು ನಮ್ಮ ಸಂವಿಧಾನಿಕ ವಿಧಿ–ವಿಧಾನಗಳ ಜೀವಾಳ ಕೂಡ. ಏಕೆಂದರೆ, ಇದರ ಪ್ರಕಾರ ಭಾರತದ ಸರ್ವೋಚ್ಚ ಸಾರ್ವಭೌಮತೆ 'ನಾವು, ಜನತೆ'ಯಲ್ಲಿ ನೆಲೆ ನಿಂತಿದೆ. ಈ ಸಾರ್ವಭೌಮತೆಯನ್ನು ಜನತೆ ಸಂಸತ್ತಿನಲ್ಲಿ ಮತ್ತು ವಿಧಾನ ಸಭೆಗಳಲ್ಲಿ ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಚಲಾಯಿಸುತ್ತಾರೆ. ಕಾರ್ಯಾಂಗ(ಸರಕಾರ) ಸಂಸತ್ತಿಗೆ ಉತ್ತರದಾಯಿಯಾಗಿದೆ, ಸಂಸತ್ತು ಜನತೆಗೆ ಉತ್ತರದಾಯಿಯಾಗಿದೆ. ಕಾರ್ಯಾಂಗ ಜನತೆಯ ಬದುಕಿನ ಮೇಲೆ, ನಮ್ಮ ಆರ್ಥಿಕದ ಚೇತರಿಕೆಯ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುವ ಯಾವುದೇ ನಿರ್ಣಯವನ್ನು ಶಾಸಕಾಂಗಕ್ಕೆ ಇರುವ ತನ್ನ ಜವಾಬುದಾರಿಕೆಯನ್ನು ಬದಿಗೊತ್ತಿ ಕೈಗೊಳ್ಳಬಾರದು. ಇದು ನಮ್ಮ ರೂಢಿಯಾಗಬೇಕು. ಇದನ್ನು ಉಲ್ಲಂಘಿಸಿದಾಗಲೆಲ್ಲ ಈ ರೀತಿ ಬದಿಗೊತ್ತುವುದಕ್ಕೆ ಅವಕಾಶವಿಲ್ಲ ಎಂಬುದನ್ನು ನೆನಪಿಸಲು ಸಂಸತ್ತು ಎಚ್ಚರದಿಂದಿರಬೇಕು.

ನಿದರ್ಶನವಾಗಬೇಕು

ಸಂಸತ್ತು ನಿರ್ವಹಿಸಿದ್ದು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ನೀಡುವ ಈ ಸಂಪುಟ ನಿರ್ಣಯದ ಮೇಲೆ ಇಂತಹ ಎಚ್ಚರಿಕೆಯನ್ನೇ. ಪ್ರಥಮತಃ, ಸಂಸದೀಯ ಕಲಾಪಗಳನ್ನು ಅಸ್ತವ್ಯಸ್ತಗೊಳಿಸಿದ್ದು ಸರಕಾರದ ಇಂತಹ ನಿರ್ಣಯವೇ. ಆದರೆ ಸರಕಾರ ಇದಕ್ಕೆ ಪ್ರತಿಪಕ್ಷಗಳನ್ನು ಹೊಣೆಯಾಗಿಸ ಹೊರಟಿತು, ತಾವು ಸಂಸತ್ತಿನ ಎರಡೂ ಸದನಗಳಲ್ಲಿ ಈ ಬಗ್ಗೆ ಚರ್ಚೆಗೆ ತಯಾರಿದ್ದೆವು ಎಂದಿತು. ಆದರೆ ಸಂಪುಟದ ನಿರ್ಣಯ ಸಿಂಧುವಾಗಿರುವ ವರೆಗೆ ಇಂತಹ ಚರ್ಚೆಗೆ ಅರ್ಥವಿರಲಿಲ್ಲ. ಈ ಪ್ರಸ್ತುತ ಅನುಭವ ಇನ್ನು ಮುಂದೆ ಎಲ್ಲ ಸರಕಾರಗಳಿಗೂ

ಪ್ರಶ್ನೆಯ ಮೇಲೆ ಸಂಸತ್ತಿನಲ್ಲಿ ಚರ್ಚೆಗೆ ಅನುಮತಿ ಕೊಡಲಿಕ್ಕಿಲ್ಲ. ಆದರೆ ದೇಶದ ಆರ್ಥಿಕದ ಮೇಲೆ ಮತ್ತು ಜನತೆಯ ಬದುಕಿನ ಮೇಲೆ ಅದರ ಗಂಭೀರ ಪರಿಣಾಮಗಳು ಮತ್ತು ಪ್ರಭಾವವನ್ನು ತಿಳಿಯಲು ಇಂತಹ ಚರ್ಚೆ ಅಗತ್ಯ.

ಕಳೆದ ಚಳಿಗಾಲದ ಅಧಿವೇಶನ ಇಡಿಯಾಗಿ 2ಜಿ ತರಂಗಾಂತರ ಹಗರಣದ ತನಿಖೆಗೆ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಲು ನಿರಾಕರಿಸುವ ಸರಕಾರದ ಹಟಮಾರಿತನದಿಂದಾಗಿ ವ್ಯರ್ಥವಾಯಿತು.



ಒಂದು ನಿದರ್ಶನವಾಗಬೇಕು, ಜನತೆಯ ಬದುಕಿನ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರುವ ಎಲ್ಲ ಮಹತ್ವದ ನಿರ್ಣಯಗಳನ್ನು ಸಂಸತ್ತಿನ ಮಂಜೂರಾತಿಯಿಲ್ಲದೆ ಕೈಗೊಳ್ಳಬಾರದು ಎಂಬುದಕ್ಕೆ ನಿದರ್ಶನವಾಗಬೇಕು. ಅಲ್ಲದೆ, ಇಷ್ಟೊಂದು ಮಹತ್ವದ್ದಲ್ಲದ ನಿರ್ಣಯವನ್ನು ಕೂಡ ಸಂಸತ್ತು ಅಧಿವೇಶನದಲ್ಲಿರುವಾಗ ಕೈಗೊಳ್ಳಬಾರದು.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯನ್ನು ಏಕೆ ವಿರೋಧಿಸಬೇಕು ಎಂಬ ಬಗ್ಗೆ ಈಗಾಗಲೇ ಹಿಂದಿನ ಸಂಚಿಕೆಗಳಲ್ಲಿ ಹಲವು ಬಾರಿ ಚರ್ಚಿಸಿದ್ದೇವೆ. ಇವೆಲ್ಲವುಗಳನ್ನು, ಈ ಬಗ್ಗೆ ಯಾವುದೇ ನಿರ್ಣಯವನ್ನು ಕೈಗೊಳ್ಳುವ ಮೊದಲು ಸರಕಾರ ಗಂಭೀರವಾಗಿ ಪರಿಶೀಲಿಸಬೇಕಾಗುತ್ತದೆ. ಸರಕಾರದ ನಿರ್ಧಾರ ಈಗ ಲಾಗೂ ಆಗುವುದಿಲ್ಲವಾದ್ದರಿಂದ, ಈ

ಕೊನೆಗೂ ಸರಕಾರ ಜೆಪಿಸಿಯನ್ನು ರಚಿಸಬೇಕಾಗಿ ಬಂತು. ಈ ಬಾರಿಯಂತೆ ಆಗ ವಿವೇಕದ ಕೈಮೇಲಾಗಿದ್ದರೆ ಆ ಚಳಿಗಾಲದ ಅಧಿವೇಶನ ವ್ಯರ್ಥವಾಗುತ್ತಿರಲಿಲ್ಲ. ಈ ಬಾರಿ ಎಫ್‌ಡಿಐ ಕುರಿತ ಸಂಪುಟ ನಿರ್ಣಯವನ್ನು ಅಮಾನತಿನಲ್ಲಿಡುವ ಸರಕಾರದ ನಿರ್ಣಯ ಈ ಚಳಿಗಾಲದ ಅಧಿವೇಶನದ ಉಳಿದ ಮೂರು ವಾರಗಳ ಸಂಸದೀಯ ವ್ಯವಹಾರವಾದರೂ ನಡೆಯಲು ಅವಕಾಶ ಮಾಡಿಕೊಡಬೇಕು.

ಹೋರಾಟ ಮುಗಿದಿಲ್ಲ

ಸರಕಾರ ಈ ನಿರ್ಣಯವನ್ನು ಅಮಾನತಿನಲ್ಲಿಡಬೇಕಾಗಿದೆಯಷ್ಟೇ ಅಲ್ಲ, ಈ ವಿಷಯದಲ್ಲಿ ಮುಂದಿನ ಯಾವುದೇ ನಿರ್ಣಯವನ್ನು ಈ ವಿಷಯ ವಿಷಯದ ಫಲಾಫಲಗಳಲ್ಲಿ ಭಾಗೀದಾರರಾಗಿರುವ ಎಲ್ಲರೊಂದಿಗೆ ಸಮಾಲೋಚನೆ ನಡೆಸಿ ಬರುವ ಒಮ್ಮತದ ಆಧಾರದಲ್ಲಿಯೇ ಕೈಗೊಳ್ಳಲಾಗುವುದು ಎಂದು ಸಂಸತ್ತಿನ ಎರಡೂ ಸದನಗಳಲ್ಲಿ ನೀಡಿದ ಒಂದು ಹೇಳಿಕೆಯಲ್ಲಿ ಘೋಷಿಸಲಾಗಿದೆ. ಇಂತಹ ಒಂದು ಒಮ್ಮತ ಸಂಸತ್ತಿನಲ್ಲಿರುವ ಎಲ್ಲ ರಾಜಕೀಯ ಪಕ್ಷಗಳು ಮತ್ತು ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆಗಳ ನಂತರ ಬರಬೇಕು ಎಂದು ಸರ್ವಪಕ್ಷ ಸಭೆಯಲ್ಲಿ ಸಿಪಿಐ(ಎಂ) ಆಗ್ರಹಿಸಿತು. ಈ ವಿಷಯದ ಫಲಾಫಲಗಳಲ್ಲಿ ಭಾಗೀದಾರರಾಗಿರುವವರು ಎಂಬ ಸರಕಾರದ ನಿರೂಪಣೆಯಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವವರಲ್ಲದೆ ಎಲ್ಲ ರಾಜಕೀಯ ಪಕ್ಷಗಳು ಮತ್ತು ರಾಜ್ಯ ಸರಕಾರಗಳೂ ಸೇರಿರುತ್ತವೆ ಎಂದು ಸದನದಲ್ಲಿ ಸರಕಾರ ಸ್ಪಷ್ಟೀಕರಣ ನೀಡಬೇಕಾಯಿತು.

ಇದರರ್ಥ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ಕೊಡಬಾರದೆಂಬ ಹೋರಾಟ ಮುಗಿದಿದೆ ಎಂದು ಖಂಡಿತಾ ಅಲ್ಲ. ಈ ಹಿಂದೆ ನಾವು ವಾದಿಸಿರುವಂತೆ, ಇಂತಹ ಒಂದು ನಿರ್ಣಯ ನಮ್ಮ ಆರ್ಥಿಕ ಮತ್ತು ಜನತೆಯ ಜೀವನೋಪಾಯದ ಮೇಲೆ ವಿನಾಶಕಾರಿ ಪರಿಣಾಮ ಬೀರುವುದಲ್ಲದೆ, ತಮ್ಮ ಗರಿಷ್ಠ ಲಾಭಕ್ಕಾಗಿ ಮೇಯಲು ಇಲ್ಲಿ ಹಚ್ಚ ಹಸಿರು ಹುಲ್ಲಗಾವಲು ಸಿಗುತ್ತದೆ ಎಂದು ಕಾಣುತ್ತಿರುವ ಸಾಮ್ರಾಜ್ಯಶಾಹಿ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಬಲವಾದ ಒತ್ತಡದ ಪ್ರಶ್ನೆಯೂ ಇಲ್ಲಿದೆ. ವಾಸ್ತವವಾಗಿ, ಇತ್ತೀಚೆಗೆ ಪ್ರಧಾನ ಮಂತ್ರಿಗಳು ಬಾಲಿಯಲ್ಲಿ ಅಮೆರಿಕನ್ ಅಧ್ಯಕ್ಷ ಒಬಾಮರನ್ನು ಭೇಟಿಯಾದಾಗ ಅವರಿಗೆ ಈ ಬಗ್ಗೆ ಆಶ್ವಾಸನೆಯನ್ನೂ ಕೊಟ್ಟಿದ್ದಿರಬೇಕು ಎಂಬ ಬಲವಾದ ಸಂದೇಹವೂ ಇದೆ. ಸದ್ಯದ ಜಾಗತಿಕ ದುಪ್ಪಟ್ಟು ಹಿಂಜರಿತದ ಬಿಕ್ಕಟ್ಟಿನ ಸನ್ನಿವೇಶದಲ್ಲಿಯಂತೂ ಇಂತಹ ಒತ್ತಡಗಳು ಇನ್ನೂ ಬಲವಾಗಿರುತ್ತವೆ. ಆದರೆ ಈ ರೀತಿ ವಿದೇಶಿ ಬಂಡವಾಳಕ್ಕೆ ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿ ಕೊಳ್ಳಲು ಇಂತಹ ಅವಕಾಶಗಳನ್ನು ತೆರೆದುಕೊಡುವುದೆಂದರೆ ಅದು ಭಾರತೀಯ ಜನತೆಯ ಹಿತಗಳಿಗೆ ಗಂಭೀರ ಕುತ್ತು ತಂದಿಡುತ್ತದೆ.

ಸದ್ಯಕ್ಕೆ ಇದನ್ನು ತಡೆಯಲಾಗಿದೆ. ಈ ಸಂಸತ್ ಅಧಿವೇಶನ ಮುಗಿದ ಕೂಡಲೇ, ಅಥವ ನಂತರವಾದರೂ ಸರಕಾರ ತನ್ನ ಈ ಕ್ರಮವನ್ನು ಮುಂದೊಯ್ಯದಂತೆ ಮಾಡಲು ಜನತೆಯ ಹೋರಾಟಗಳ ಮೂಲಕ ಬಲವಾದ ಒತ್ತಡಗಳನ್ನು ಕಟ್ಟಬೇಕಾಗಿದೆ. ಸಂಸತ್ತಿನ ಪೂರ್ವಾನುಮತಿ ಇಲ್ಲದೆ ಇಂತಹ ಒಂದು ನಿರ್ಣಯವನ್ನು ಕೈಗೊಳ್ಳಲು ಎಂದೂ ಬಿಡಬಾರದು.

ಕಾರ್ಮಿಕರ ಮಕ್ಕಳು

ತೊಡಲಿಲ್ಲ ಅಂಗಿ ಕುಂಡೆ ಪ್ರದರ್ಶಿಸುವ ಚಿಡ್ಡಿ
ಉಣವಿರದೆ ದೇಹವೂ ಸೊರಸೊರಗಿ ಕಡ್ಡಿ
ಇದು ನಮ್ಮ ಕಾರ್ಮಿಕರ ಹಸುಳೆಯರ ಪಾಡು
ಭಾರತದ ವೈಭವವ ನೋಡು

- ವಿಡಂಬಾರಿ

ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ

ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಯಶಸ್ಸಿನ ಬಗ್ಗೆ ಬಿಜೆಪಿ ಸರ್ಕಾರ ಭಾರಿ ಬೊಬ್ಬೆ ಹೊಡೆಯುತ್ತಿದೆ. ಅಲ್ಲಿ ನಿಜಕ್ಕೂ ಏನು ನಡೆದಿದೆ ಓದಿ.



ಬಂಡವಾಳಗಾರರು-ಭೂಮಾಲೀಕರ ದುಷ್ಟ ಕೂಟದ ಸಭೆಯಲ್ಲಿ ರೈತರ ಹತ್ಯೆಗೆ ನೀಲಿ ನಕ್ಷೆ

ಹರ್ಷ ಪಿ.ಬಿ

ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಸಭಾಂಗಣದಲ್ಲಿ ಬಿತ್ತರವಾಗುತ್ತಿದ್ದ 'ತೇರ ಏರಿ ಅಂಬರದಾಗೆ ನೇಸರ ನಗುತವನೆ' ಎಂಬ ಪರಸಂಗದ ಗೆಡ್ಡೆತಿಮ್ಮನ ಹಾಡು ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಅಂತರ್ಯ ಮತ್ತು ಒಳಆಶಯಗಳನ್ನು ಬೆತ್ತಲೆಗೊಳಿಸುವಂತಿತ್ತು. ಕುವೆಂಪುರವರ 'ಉಳುವಾ ಯೋಗಿಯ ನೋಡಲ್ಲಿ/ ನೇಗಿಲ ಕುಲದೊಳಗಡಗಿದೆ ಧರ್ಮ/ ನೇಗಿಲ ಮೇಲೆ ನಿಂತಿದೆ ಧರ್ಮ/' ಎಂಬುದೇ ನಮ್ಮ ಧ್ಯೇಯ ಎಂದು ವೆಬ್‌ಸೈಟ್‌ನಲ್ಲಿ ನಗುಮೊಗವನೊತ್ತ ಮುಖ್ಯ ಮಂತ್ರಿ ಸದಾನಂದಗೌಡರ ಮಾತುಗಳು ಬೂಟಾಟಿಕೆಯವು ಎಂಬುದನ್ನು ಬಯಲಿಗೆಳೆಯುವಂತಿತ್ತು.

ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ವಾಸ್ತವವಾಗಿ ಬಂಡವಾಳಗಾರರು ಮತ್ತು ಭೂಮಾಲೀಕರ ಸಭೆಯಾಗಿತ್ತು. ಬಂಡವಾಳಗಾರರು ಮತ್ತು ಭೂಮಾಲೀಕರ ನಾಯಕತ್ವದ ಬಿಜೆಪಿ ಸರ್ಕಾರದ ಮಂತ್ರ ಮಹೋದಯರೆಲ್ಲರೂ ಇಡೀ ಆಡಳಿತ ಯಂತ್ರಾಂಗದ ಎಲ್ಲ ಪ್ರಮುಖ ಅಧಿಕಾರಿ ವರ್ಗವನ್ನು ಅಲ್ಲಿಗೆ ತಂದಿರಿಸಿಕೊಂಡು ಬಂಡವಾಳ ಹೂಡಿಕೆಗೆ ಅವಶ್ಯವಾದ ಎಲ್ಲವನ್ನೂ ಪೂರೈಸಲು ಸದಾಸಿದ್ಧ ಎಂದು ಕೈಕಟ್ಟಿ ನಿಂತಿದ್ದರು. ಇದರಲ್ಲಿ ಪ್ರಮುಖವಾಗಿ ಭೂಮಿ ಸ್ವಾಧೀನಪಡಿಸಿಕೊಡುವ ಭರವಸೆ ನೀಡಲು ಕೆಐಎಡಿಬಿ, ಸರ್ಕಾರಿ ಇಲಾಖೆಗಳ ಸೌಲತ್ತು ಮತ್ತು ಸೌಲಭ್ಯಗಳನ್ನು ಒದಗಿಸಲು ಕೈಗಾರಿಕೆ & ವಾಣಿಜ್ಯ ಇಲಾಖೆ, ಕೃಷಿ, ತೋಟಗಾರಿಕೆ, ಮೀನು ಸಾಕಾಣಿಕೆ, ಪಶು ಸಂಗೋಪನೆ, ರೇಷ್ಮೆ, ಇತ್ಯಾದಿ ಇಲಾಖೆಗಳ ಅಧಿಕಾರಿಗಳು ಅಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮ ಮತ್ತು ಯೋಜನೆಯ್ನನ್ನು ಅನುಷ್ಠಾನಕ್ಕೆ ತರಲು ಮಹೀಂದ್ರಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಮತ್ತು ಖಾಸಗೀಕರಣ ಕೆಲಸಗಳಲ್ಲಿ ಪ್ರಸಿದ್ಧಿ ಪಡೆದಿರುವ ಇನ್ನೊಂದು ಬಹುರಾಷ್ಟ್ರೀಯ ಕಂಪನಿ 'ಪ್ರೈಸ್‌ವಾಟರ್ ಕೂಪರ್‌ಹೌಸ್' ಕಂಪನಿಗಳನ್ನು ಸರ್ಕಾರ ನೇಮಿಸಿಕೊಂಡಿದೆ.

ಸಮೃದ್ಧ ಕರ್ನಾಟಕದ ಲೂಟಿ ಮಾಡ ಬನ್ನಿರೋ. . . .

'ಸಮೃದ್ಧ ಕರ್ನಾಟಕ' ಎಂಬ ಸಮಾವೇಶದ ಘೋಷಣೆಗೆ ತಕ್ಕಂತೆ ಪ್ರಮುಖ ಇಲಾಖೆಗಳ ಹಿರಿಯ ಅಧಿಕಾರಿಗಳು ಕೃಷಿ ಬಂಡವಾಳ ಹೂಡಲು ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲ ಮತ್ತು ಮೂಲಸೌಕರ್ಯಗಳ ಕುರಿತು ಎರಡು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಮಾಹಿತಿ ವಿವರಿಸಿದರು. ಮತ್ತೊಂದೆಡೆ ತೆರೆಮರೆಯಲ್ಲಿ ಕೈಗಾರಿಕಾ ಬಂಡವಾಳಗಾರರ ಜೊತೆ ಮಂತ್ರಿಗಳು ಅಧಿಕಾರಿಗಳು ಸಭೆ ನಡೆಸುತ್ತಾ ಒಡಂಬಡಿಕೆ ಮಾಡಿಕೊಳ್ಳುವ ಕಸರತ್ತು ಸಾಗಿತ್ತು. ಪಂಚೆದಾರಿಗಳಾಗಿ ಬಂದಿದ್ದ ಕೆಲವು ಸಂಘಪರಿವಾರ ಮತ್ತು ಬಿಜೆಪಿಯ ಕಾರ್ಯಕರ್ತರು ಲೂಟಿಕೋರರ ಉಸ್ತುವಾರಿ ವಹಿಸಲು ಬಂದಿದ್ದವರಂತೆ ಎರಡೂ ದಿನಗಳ ಕಾಲ ಅಲ್ಲಿಯೇ ಠಿಕಾಣಿ ಹೂಡಿದ್ದರು.

ಕರ್ನಾಟಕ ಉದ್ಯೋಗ ಮಿತ್ರ ಎಂಬ ಸರ್ಕಾರದ ಅಂಗ ಸಂಸ್ಥೆಯನ್ನು ಸ್ಥಾಪಿಸಿದ್ದು, ಇದು ಕೈಗಾರಿಕಾ ಘಟಕಗಳು ಬಂಡವಾಳ ಹೂಡಲು ಅತ್ಯವಶ್ಯವಾದ ಎಲ್ಲ ಪರವಾನಗಿ, ತೆರಿಗೆ ವಿನಾಯಿತಿ, ಸಹಾಯಧನ ಸೌಲಭ್ಯ, ಭೂಮಿ, ನೀರು, ವಿದ್ಯುತ್, ಇತ್ಯಾದಿ ಸೌಲಭ್ಯಗಳನ್ನು ಒದಗಿಸುತ್ತಿದೆ. ಕರ್ನಾಟಕ ಉದ್ಯೋಗ ಮಿತ್ರ ಎಂದು ಹೆಸರು ಹೊಂದಿದ್ದರೂ, ಇದು ಬಂಡವಾಳಿಗರ ಮಿತ್ರ ಮತ್ತು ರೈತರ ಶತ್ರು ಎನ್ನುವುದು ಸೂಕ್ತ. ಅದೇ ರೀತಿ ಕೃಷಿಯಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಮತ್ತು ಕೈಗಾರಿಕೆಗಳಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ಕೃಷಿ ಬಂಡವಾಳ ಅಭಿವೃದ್ಧಿ ನಿಗಮವನ್ನು



ಸ್ಥಾಪಿಸಲಾಗುತ್ತಿದೆ.

ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬಂಡವಾಳ ಹೂಡಲು ಸಹಿ ಮಾಡಿದ ಒಡಂಬಡಿಕೆ ಮೊತ್ತ

ಕ್ರ. ಸಂ.	ವಿವರ	ಒಡಂಬಡಿಕೆ ಮೊತ್ತ
1	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೃಷಿ ಕೈಗಾರಿಕಾ ಕಂಪನಿಗಳಿಗೆ ನೀಡಲು ಒಪ್ಪಿರುವ ಸಾಲದ ಮೊತ್ತ	ರೂ. 40,000 ಕೋಟಿ
2	ಬ್ಯಾಂಕ್ ಆಫ್ ಇಂಡಿಯಾ ಕೃಷಿ ಕೈಗಾರಿಕಾ ಕಂಪನಿಗಳಿಗೆ ನೀಡಲು ಒಪ್ಪಿರುವ ಸಾಲದ ಮೊತ್ತ	ರೂ. 10,000 ಕೋಟಿ
3.	42 ಖಾಸಗಿ ಕಂಪನಿಗಳು ಹೂಡಲು ಒಪ್ಪಿರುವ ಕೃಷಿ ಬಂಡವಾಳ	ರೂ. 60,531 ಕೋಟಿ

ರೇಗಾ ಯೋಜನೆ ರದ್ದುಪಡಿಸಬೇಕೆಂದ ಬಂಡವಾಳಿಗರು-ಭೂಮಾಲೀಕರ ಕೂಟ:

ಬಿಜೆಪಿ ಸರ್ಕಾರದ ಮಂತ್ರಿಗಳೇ ಹಲವು ಮಾಡಲು ಆಮೂಲಕ ತಾವು ಸಹ ಖಾಸಗಿ ಕಂಪನಿಗಳಂತೆ ಷೇರು/ಪಾಲು ಹೊಂದಿ ಲಾಭ ಗಳಿಸಲು ಸರ್ಕಾರ ತಕ್ಷಣ ಯೋಜನೆ ರೂಪಿಸಬೇಕು." ಇದಕ್ಕೆ ಉತ್ತರಿಸಿದ ಕೃಷಿ ಸಚಿವ ಉಮೇಶ್ ಕತ್ತಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸುತ್ತಿದೆ, ರಾಜ್ಯ ಸರ್ಕಾರವಲ್ಲ ಎಂದರು. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಖಾಸಗಿ ಬಂಡವಾಳ ಹರಿದು ಬರುವಂತೆ ಮಾಡಲು ದೇಶೀಯ ಮತ್ತು ಅಂತರಾಷ್ಟ್ರೀಯ ಬಂಡವಾಳ ಹೂಡಿಕೆದಾರರನ್ನು ಕರೆತರುವ ಪ್ರಯತ್ನ ಸಾಗಿದೆ ಎಂದರು!.

ಅಲ್ಲದೆ ಕೆಲವು ಭೂಮಾಲೀಕರು ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ತಾವು ತಮ್ಮಲ್ಲಿರುವ ಭೂಮಿಯನ್ನು ಕೃಷಿ ಬಂಡವಾಳ ಹೂಡಿಕೆಗೆ ನೀಡಲು ಸಿದ್ಧವಿರುವುದಾಗಿಯೂ, ಹೂಡಿಕೆದಾರರ ಕಂಪನಿಗಳು ಬಂದಲ್ಲಿ ತಮಗೆ ತಿಳಿಸಬೇಕೆಂದು ಕೋರಿದ್ದಾರಂತೆ.

ಸರ್ಕಾರ ಮತ್ತು ಖಾಸಗಿ ಕಂಪನಿಗಳ ನಡುವೆ ಒಡಂಬಡಿಕೆ:

ಸರ್ಕಾರವು 3 ರೀತಿಯ ಖಾಸಗಿ ಕಂಪನಿಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ.

1) ಸಂಪನ್ಮೂಲ ಒದಗಿಸುವ ಸಂಸ್ಥೆಗಳು: ಇವರ ಪಾತ್ರವೆಂದರೆ ಕೃಷಿಯಲ್ಲಿ ಬಂಡವಾಳ ಹೂಡುವ ಕೃಷಿ-ಆಧಾರಿತ ಕೈಗಾರಿಕೆಗಳಿಗೆ ಮತ್ತು ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ ತಂತ್ರಜ್ಞಾನ, ಯಂತ್ರೋಪಕರಣಗಳ ಸರಬರಾಜು, ಮಾರುಕಟ್ಟೆ ಸಂಪರ್ಕ, ಇತ್ಯಾದಿ ಒದಗಿಸುವುದು.

2) ಕೃಷಿ ಬಂಡವಾಳ ಹೂಡಿಕೆದಾರರು: ಇವರು ದೇಶೀಯ & ಅಂತರಾಷ್ಟ್ರೀಯ ಹೂಡಿಕೆದಾರರಾಗಿದ್ದು, ಇವಠ ಪಾತ್ರವೆಂದರೆ ಕೃಷಿಯಲ್ಲಿ ಬೃಹತ್ ಮಟ್ಟದ ಬಂಡವಾಳ ಹೂಡಿ ತಂತ್ರಜ್ಞಾನ-ಆಧಾರಿತ ಕೃಷಿ ಚಟುವಟಿಕೆಗಳಲ್ಲಿ ತೊಡಗುವುದು.

3) ಸಂಶೋಧನೆ ಮತ್ತು ಕೌಶಲ್ಯ ಪಾಲುದಾರರು: ಇವರ ಪಾತ್ರವೇನೆಂದರೆ ಬಂಡವಾಳ ಹೂಡಿಕೆದಾರರಿಗೆ, ಶಿಕ್ಷಣ ಸಂಸ್ಥೆಗಳಿಗೆ, ರೈತ ಸಂಘಗಳಿಗೆ ಅತ್ಯವಶ್ಯ ಶಿಕ್ಷಣ, ಸಂಶೋಧನೆ, ಜ್ಞಾನ ಪೂರೈಕೆಗಳನ್ನು ನಿರಂತರವಾಗಿ ಬಲಿಷ್ಟ ಸಂಪನ್ಮೂಲ ನೆಲೆ ಸ್ಥಾಪಿಸಿ ಒದಗಿಸುವುದು.

4) ಉತ್ಪನ್ನ ಮಾರುಕಟ್ಟೆ ಸೌಲಭ್ಯ ಒದಗಿಸುವವರು: ಇವರ ಪಾತ್ರ ಕೃಷಿ-ಆಧಾರಿತ

ಸರ್ಕಾರದ ನಡೆಗೆ ಪ್ರತಿರೋಧ



ತಕ್ಷಣಕ್ಕೆ ಖಾಸಗಿ ಕಂಪನಿಗಳಿಗೆ ಸರ್ಕಾರ ನೀಡಲು ಹೊರಟಿರುವ ಸೌಲಭ್ಯ

ಕ್ರ. ಸಂ.	ಜಿಲ್ಲೆ	ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಖಾಸಗಿಯವರಿಗೆ ನೀಡಲಾಗುವ ಸರ್ಕಾರಿ ಸೌಲಭ್ಯ
1	ಚಿಕ್ಕಮಂಗಳೂರು ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಉಳ್ಳವರ್ತಿ	1800 ಎಕರೆ ಕುರಿ ಸಾಕಣೆ ಕೇಂದ್ರ
2	ಗಂಗಾವತಿ ತಾಲ್ಲೂಕು	ಕೋಳಿ ಸಾಕಣೆ ಮತ್ತು ತರಬೇತಿ ಕೇಂದ್ರ
3	ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಮುಳಬಾಗಿಲು ಗ್ರಾಮ ಫ್ಲೋರಿಕಲ್ಚರ್ ಪಾರ್ಕ್ ಯೋಜನಾ ವೆಚ್ಚ:	500 ಎಕರೆ ರೂ. 95 ಕೋಟಿ
4	ಕಸಿ ಮಾಡುವ ಆಧುನಿಕ ಕೇಂದ್ರ 7.5 ಎಕರೆ,	ರೂ. 33 ಕೋಟಿ
5	ರಾಜ್ಯದಾದ್ಯಂತ ಬೃಹತ್ ಮಟ್ಟದಲ್ಲಿ ಪರಿಸರ-ನಿಯಂತ್ರಿತ ತರಕಾರಿ ಬೆಳೆ ಮತ್ತು ಹೂವು	710 ಎಕರೆ, ರೂ. 799 ಕೋಟಿ



ಕೈಗಾರಿಕೆ/ವಲಯಗಳ ಉತ್ಪನ್ನಗಳನ್ನು ಖರೀದಿಸುವುದು. ಇವುಗಳಿಗೆ ಮಾರುಕಟ್ಟೆ ಒದಗಿಸುವುದು.

ಇದೇ ಸೌಲಭ್ಯಗಳನ್ನು ರೈತರಿಗೆ ಒದಗಿಸಿ ಅವರ ಸಂಕಷ್ಟ ಪರಿಹರಿಸಲು ಮುಂದಾಗದ ಸರ್ಕಾರ ಬಂಡವಾಳಗಾರರಿಗೆ ವ್ಯವಸ್ಥಿತ ಯೋಜನೆ ರೂಪಿಸಿ ಸೌಲಭ್ಯ ನೀಡಲು ಹೊರಟಿರುವುದು ಬಿಜೆಪಿ ಸರ್ಕಾರದ ನಿಯಂತ್ರಣ ಬಂಡವಾಳಿಗರು-ಭೂಮಾಲೀಕರ ಬಳಿಯಿರುವುದನ್ನು ತೋರಿಸುತ್ತದೆ.

ಈ ಒಡಂಬಡಿಕೆ ಪತ್ರ ಮತ್ತು ಸಮಗ್ರ ಕೃಷಿ ಬಂಡವಾಳ ಅಭಿವೃದ್ಧಿ ನೀತಿ 2011 ನ್ನು ಗಮನಿಸಿದಾಗ ತಿಳಿಯುವುದೇನೆಂದರೆ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ, ಡೈರಿ, ಪಶುಸಂಗೋಪನೆ, ಆಹಾರ ಸಂಸ್ಕರಣೆ, ಇತ್ಯಾದಿ ಸಂಭಂದಿತ ಕ್ಷೇತ್ರಗಳ ಪ್ರತಿ ಚಟುವಟಿಕೆಗಳಲ್ಲಿ ಖಾಸಗಿ ಕಂಪನಿಗಳನ್ನು ಭಾಗಿಯಾಗಿಸಿಕೊಂಡು ಸರ್ಕಾರ ತಾನು ರೈತರಿಗೆ ಇದುವರೆಗೂ ಅಷ್ಟೋಇಷ್ಟೋ ನೀಡುತ್ತಿರುವ ಎಲ್ಲ ಸೌಲಭ್ಯಗಳಿಂದ ಹಿಂದೆ ಸರಿಯುವ ನೀತಿ ರೂಪಿಸಿದೆ. ಉದಾಹರಣೆಗೆ: ಬೀಜ ವಿತರಣೆ, ಬೀಜ ಪರೀಕ್ಷೆ, ಮಣ್ಣು ಪರೀಕ್ಷೆ, ಬೆಳೆ ಬೆಳೆಯುವುದು, ರಫ್ತು-ಆಧಾರಿತ ಬೆಳೆಗೆ ವಿಶೇಷ ಸೌಲಭ್ಯ, ಕೋಳಿ ಸಾಕಣೆ, ಪಶು ಆಹಾರ, ಹುಲ್ಲು ಅಭಿವೃದ್ಧಿ, ತೋಟ ನಿರ್ವಹಣೆ, ಜೇನುಕೃಷಿ, ಕೃಷಿ ಸಂಶೋಧನೆ & ಅಭಿವೃದ್ಧಿ, ಶೀತಲೀಕರಣ ಘಟಕ, ತಂತ್ರಜ್ಞಾನಗಳ ಅಳವಡಿಕೆ, ಇತ್ಯಾದಿ.... ಇಂತಹ ಸಾವಿರಾರು ಚಟುವಟಿಕೆಗಳಲ್ಲಿ ಖಾಸಗಿ ಹೂಡಿಕೆಗೆ ಅವಕಾಶ ನೀಡುವುದು ಆಮೂಲಕ ಸರ್ಕಾರ ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯುವುದು. ಆದರೆ ಈ ಚಟುವಟಿಕೆಗಳಲ್ಲಿ ಬಂಡವಾಳ ಹೂಡಲು ಬರುವ ಖಾಸಗಿ ಕಂಪನಿಗಳಿಗೆ ಇದೇ ಸರ್ಕಾರ ಎಲ್ಲ ಮಾರುಕಟ್ಟೆ ಸೌಲಭ್ಯ ಒದಗಿಸುವ, ಮೂಲಭೂತ ಸೌಕರ್ಯ ಒದಗಿಸುವ, ಸಹಾಯಧನ, ಭೂಮಿ, ತೆರಿಗೆ ವಿನಾಯಿತಿ ನೀಡುವ ಹಗಲು ದರೋಡೆಯನ್ನೇ ಸರ್ಕಾರದ ನೀತಿಯನ್ನಾಗಿ ಅಳವಡಿಸಿಕೊಂಡಿದೆ.

ಕೃಷಿ ಭೂಮಿಯನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರಿಸುವ ನೀಲಿನಕ್ಷೆ - ಕೃಷಿ ಕಾರಿಡಾರ್:

ರಾಜ್ಯದಲ್ಲಿ ಕೃಷಿ ಬಂಡವಾಳಗಾರರು ಕೈಗಾರಿಕೆ ಸ್ಥಾಪಿಸಲು ರಾಜ್ಯದ ಆಯಕಟ್ಟಿನ ಪ್ರದೇಶಗಳಲ್ಲಿ' ಕೃಷಿ-ತೋಟಗಾರಿಕೆ-ಪಶುಸಂಗೋಪನೆ-ಮೀನುಗಾರಿಕೆ-ಆಹಾರ ಸಂಸ್ಕರಣೆ ಎಂಬ ಹೆಸರಿನ ಕಾರಿಡಾರ್ ಸ್ಥಾಪಿಸುವ, ಯೋಜನೆ ಸರ್ಕಾರದ್ದು. ಈ ಕಾರಿಡಾರ್ ಅಥವಾ ಜಾಡನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ರೈಲು ಮಾರ್ಗ ಹಾದುಹೋಗುವ ಜಾಡಿನ ಉದ್ದಕ್ಕೂ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುತ್ತದೆ. ಈ ಕಾರಿಡಾರ್‌ನಲ್ಲಿ ಜಾಡಿನುದ್ದಕ್ಕೂ ಕೃಷಿ ಬಂಡವಾಳ ಹೂಡಿಕೆ ವಲಯಗಳು (ಎಬಿಐಆರ್), ಕೃಷಿ ಬಂಡವಾಳ ಹೂಡಿಕೆ ಪ್ರದೇಶಗಳು, ಜ್ಞಾನ ಕೋಶ, ವಿಶೇಷ ತೋಟಗಾರಿಕೆ ಪ್ರವಾಸೋದ್ಯಮ ವಲಯಗಳು, ಬೃಹತ್ ಮಟ್ಟದಲ್ಲಿ ಪರಿಸರ-ನಿಯಂತ್ರಿತ ಬೇಸಾಯ, ಆಹಾರ ಸಂಸ್ಕರಣ ಘಟಕಗಳು, ಫುಡ್ ಪಾರ್ಕ್‌ಗಳು, ಮತ್ತು ಆಹಾರ ವಿಶೇಷ ಆರ್ಥಿಕ ವಲಯಗಳು ಇರುತ್ತವೆ. ಇದಕ್ಕಾಗಿ ರೈತರಿಂದ ಸಾವಿರಾರು ಎಕರೆ ಜಮೀನು ಸ್ವಾಧೀನಪಡಿಸಿಕೊಂಡು ಬಂಡವಾಳಗಾರರಿಗೆ ಒಪ್ಪಿಸುವ ಹಂಚಿಕೆ ಸರ್ಕಾರದ್ದು. ಕೃಷಿ ಕಾರಿಡಾರ್ ಸ್ಥಾಪಿಸುವ ಮುನ್ನ ರೈತ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸದೆ ಏಕಾಏಕಿ ರೈತರ ಜೀವ ನೆಲೆಗಳ ಮೇಲೆ ಸರ್ಕಾರ ಧಾಳಿ ನಡೆಸುತ್ತಿರುವುದು ಆಘಾತಕಾರಿಯಷ್ಟೆ.

ರಾಜ್ಯದಲ್ಲಿ ಸದ್ಯಕ್ಕೆ 3 ಕೃಷಿ ವ್ಯಾಪಾರ ಬಂಡವಾಳ ಹೂಡಿಕೆ ಪ್ರದೇಶಗಳನ್ನು (ಎಬಿಐಆರ್) ಸ್ಥಾಪಿಸಲು ಸರ್ಕಾರ ಹೊರಟಿದೆ. ಪ್ರತಿ ಪ್ರದೇಶದಲ್ಲಿ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಎಲ್ಲ ರೀತಿಯ ಮೂಲಭೂತ ಸೌಕರ್ಯ, ತಂತ್ರಜ್ಞಾನ, ಸಂಸ್ಕರಣೆ, ಆಧುನಿಕ ಸಲಕರಣೆಗಳು, ಸಂಶೋಧನೆ, ಇತ್ಯಾದಿ ಘಟಕಗಳು ಇರುತ್ತವೆ ಎನ್ನಲಾಗಿದೆ.

ಕ್ರ. ಸಂ.	ಎಬಿಐಆರ್ ಸ್ಥಾಪನೆಯಾಗುವ ಜಿಲ್ಲೆ	ಅಗತ್ಯವಿರುವ ಭೂಮಿ (ಎಕರೆ)	ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ನಿರೀಕ್ಷಿಸಿರುವ ಬಂಡವಾಳ (ರೂ.)
1	ಬೆಳಗಾಂ	10,000	9,979/- ಕೋಟಿಗಳು
2	ಹಾವೇರಿ ಮತ್ತು ಗದಗ	5,215	5,206/- ಕೋಟಿಗಳು
3	ಮೈಸೂರು	10,000	ಮಾಹಿತಿ ಲಭ್ಯವಿಲ್ಲ


ಕೃಷಿಯ ಬಿಕ್ಕಟ್ಟನ್ನು ನಿವಾರಿಸುವ ಹಾದಿ ಯಾವುದಯ್ಯ?

ರಾಜ್ಯದ ಜನತೆಗೆ ಉದ್ಯೋಗ ಒದಗಿಸಿ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತೊಡಗಬೇಕಾದರೆ ಕೈಗಾರಿಕೆಗಳು ಅವಶ್ಯ. 'ಅದರಲ್ಲೂ ನಮ್ಮ ದೇಶದ ಆರ್ಥಿಕತೆಯಲ್ಲಿ ಕೃಷಿಯೇ ಪ್ರಧಾನವಾಗಿರುವುದರಿಂದ ಹೆಚ್ಚೆಚ್ಚು ಕೃಷಿ-ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಿ ಆಮೂಲಕ ನಮ್ಮ ರೈತರ ಬದುಕನ್ನು ಹಸನು ಮಾಡುವುದು ಅವಶ್ಯವೇ. ಇದಕ್ಕಾಗಿ ಕೃಷಿ ಭೂಮಿಯ ಫಲವತ್ತತೆ ಹೆಚ್ಚಿಸುವುದು, ಅಧಿಕ ಇಳುವರಿ ನೀಡುವ ಗುಣಮಟ್ಟದ ಬೀಜ ಒದಗಿಸುವುದು, ರೈತರು ಬೆಳೆದ ಬೆಲೆಗೆ ಉತ್ತಮ ಮಾರುಕಟ್ಟೆ ಸಂಪರ್ಕ ಒದಗಿಸಿ ಉತ್ತಮ ಬೆಲೆ ನೀಡುವುದು, ಸಾಲ ಸೌಲಭ್ಯ ಒದಗಿಸುವುದು, ಪಶು ಸಂಗೋಪನೆ ಅಭಿವೃದ್ಧಿ, ಇತ್ಯಾದಿ ಇವೆಲ್ಲವೂ ಸರ್ಕಾರದ ಆದ್ಯತೆಯಾಗಬೇಕು. ಆದರೆ ಸರ್ಕಾರ ಇವೆಲ್ಲವನ್ನೂ ಸಂಪೂರ್ಣವಾಗಿ ಮರೆತು ರೈತರ ಮತ್ತು ಕೃಷಿಯ ಒಳಿತಿಗಾಗಿ ತಾನು ಖಾಸಗಿ ಕಂಪನಿಗಳನ್ನು ಕರೆತರುತ್ತಿರುವುದಾಗಿ ಢೋಂಗಿ ಬಿಡುತ್ತಿದೆ. ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಖಾಸಗಿ ಕಂಪನಿಗಳಿಗೆ ವಹಿಸುವ, ಗುತ್ತಿಗೆ ಕೃಷಿ ನಡೆಸಿ ರೈತರನ್ನು ಕೂಲಿಕಾರರನ್ನಾಗಿಸುವ, ಸರ್ಕಾರದ ಬೊಕ್ಕಸವನ್ನು ಖಾಸಗಿಯವರಿಗೆ ಮನಸೋಇಚ್ಛೆ ಹಂಚುವ ಮೂಲಕ ಜನದ್ರೋಹಿ ಕೆಲಸಗಳನ್ನು ಬಿಜೆಪಿ ಸರ್ಕಾರ ತೀವ್ರಗೊಳಿಸುತ್ತಿದೆ. ಸರ್ಕಾರದ ಇಂತಹ ನಡೆಗಳು ಗ್ರಾಮೀಣ ಪ್ರದೇಶದಲ್ಲಿ ಈಗಾಗಲೇ ಲೇವಾದೇವಿಗಾರರು ಮತ್ತು ಭೂಮಾಲೀಕರ ಹಿಡಿತದಲ್ಲಿರುವ ರೈತರು ಮತ್ತು ಕೂಲಿಕಾರರನ್ನು ಖಾಸಗಿ ಬಂಡವಾಳಗಾರ ಕಂಪನಿಗಳ ಹಿಡಿತಕ್ಕೂ ಸಿಲುಕಿಸಿ ಮತ್ತಷ್ಟು ಮಸಣದ ಹಾದಿಯೆಡೆಗೆ ತಳ್ಳುತ್ತವಷ್ಟೆ.

ಕೃಷಿ ಬಂಡವಾಳ ಕಂಪನಿಗಳಿಗೆ ಸರ್ಕಾರ ನೀಡಲು ಹವಣಿಸುತ್ತಿರುವ ರೈತ-ವಿರೋಧಿ ಸೌಲಭ್ಯಗಳು:

ಸಮಗ್ರ ಕೃಷಿ ಬಂಡವಾಳ ಅಭಿವೃದ್ಧಿ ನೀತಿ 2011ರಲ್ಲಿ ಸರ್ಕಾರ ಖಾಸಗಿ ಕಂಪನಿಗಳಿಗೆ ನೀಡಲು ಉದ್ದೇಶಿಸಿರುವ.ಕೆಲವು ಪ್ರಮುಖ ಸೌಲಭ್ಯಗಳು ಇಂತಿವೆ.


- ಗುತ್ತಿಗೆ ಕೃಷಿ ಪದ್ಧತಿ: ಖಾಸಗಿ ಕಂಪನಿಗಳು ರೈತರ ಭೂಮಿಯನ್ನು ಗುತ್ತಿಗೆ ತೆಗೆದುಕೊಳ್ಳುವುದು.
- ಖಾಸಗಿ ಕಂಪನಿಗಳು ನಿಗಧಿಪಡಿಸುವ ಬೆಳೆ, ಬೀಜ, ಔಷಧಿಯನ್ನು ರೈತ ಪಡೆದು ಬೆಳೆಯುವುದು. ರೈತ ಬೆಳೆದ ಫಸಲನ್ನು ಕಂಪನಿ ನಿಗಧಿಪಡಿಸುವ ಬೆಲೆಗೆ ಕಂಪನಿಗೆ ಮಾರುವುದು. ಹೀಗೆ ರೈತರು ತಮ್ಮ ಭೂಮಿಯಲ್ಲಿಯೇ ಕೂಲಿಕಾರರಂತೆ ದುಡಿಯುವಂತೆ ಮಾಡುವುದು.
- ಎಪಿಎಂಸಿ ಕಾಯಿದೆಗೆ ತಿದ್ದುಪಡಿ ತಂದು ಸರಕು ವ್ಯಾಪಾರಕ್ಕೆ ಯಾವುದೇ ಶುಲ್ಕ ವಿಧಿಸುವಂತಿಲ್ಲ.
- ನೇರ ಖರೀದಿಗೆ ನೀಡಬೇಕಾದ ಠೇವಣಿಯನ್ನು ಪ್ರಸ್ತುತ ರೂ. 50 ಲಕ್ಷದಿಂದ ರೂ. 5ಲಕ್ಷಕ್ಕೆ ಇಳಿಸುವುದು.
- ವಲಯ ನಿರ್ಬಂಧಗಳನ್ನು ರದ್ದುಗೊಳಿಸಿ ಖಾಸಗಿ ಕಂಪನಿಗಳು ಎಲ್ಲೆಂದರಲ್ಲಿ ಮಾರುಕಟ್ಟೆ ತೆರೆಯಲು ಅವಕಾಶ ನೀಡುವುದು.
- ಖಾಸಗಿ ಕಂಪನಿಗಳಿಗೆ ಕೈಗಾರಿಕೆಗಾಗಿ ಸರ್ಕಾರ ಸ್ವಾಧೀನಪಡಿಸಿ ಹಂಚಿಕೆ ಮಾಡುವ ಭೂಮಿಯಲ್ಲಿ ಕಂಪನಿಗಳು ಬೆಳೆ ಬೆಳೆಯಲು ಅವಕಾಶ.
- ಸರ್ಕಾರಿ ಸ್ವಾಮ್ಯದ ಕೃಷಿ ಭೂಮಿ, ಫಾರ್ಮ್‌ಗಳನ್ನು ದೀರ್ಘ ಕಾಲೀನ ಗುತ್ತಿಗೆ ಆಧಾರದಲ್ಲಿ ಖಾಸಗಿ ಕಂಪನಿಗಳಿಗೆ ವಿನಾಯಿತಿ ದರದಲ್ಲಿ ನೀಡುವುದು.
- ಕೃಷಿ-ಆಧಾರಿತ ಕೈಗಾರಿಕೆಗಳಿಗೆ ಕೈಗಾರಿಕಾ ನೀತಿ 2009-14 ರನ್ವಯ ತೆರಿಗೆ ವಿನಾಯಿತಿ, ಸಹಾಯಧನ, ಭೂಮಿ, ಇತ್ಯಾದಿ ಒದಗಿಸುವುದು.
- ಭೂ ಸ್ವಾಧೀನ ಪಡಿಸಿಕೊಳ್ಳಲು ಅಡಚಣೆಯಾಗಿರುವ ಭೂ ಸುಧಾರಣೆ ಕಾಯಿದೆಗೆ ಸೂಕ್ತ ತಿದ್ದುಪಡಿ ತರುವುದು.


ಡಿಸೆಂಬರ್ 1 ರ ಪ್ರತಿಭಟನೆ, ಮಾದಾವರ, ಬೆಂಗಳೂರು

ಕೃಷಿಯಲ್ಲಿ ಖಾಸಗಿ ಬಂಡವಾಳ ಹೂಡಿಕೆಯಿಂದ ಹಾಗೂ ವಿದೇಶಿ ಬಂಡವಾಳ ಹೂಡಿಕೆಯಿಂದ ಏನೇನೆಲ್ಲ ಲಾಭವಿದೆಯೆಂದು ಸರ್ಕಾರ ಬಗೆಬಗೆಯ ವಾದ ಮಂಡಿಸುತ್ತಿದೆ. ಸರ್ಕಾರದ ವಾದ ಎಷ್ಟು ಪೊಳ್ಳು ಮತ್ತು ಎಷ್ಟು ಅಪಾಯಕಾರಿ ಎಂದು ವಿವರಿಸಿದ್ದಾರೆ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಜಿ.ಸಿ. ಬಯ್ಯರೆಡ್ಡಿ.

"ಪಾಳೇಗಾರಿ ಭೂ ಮಾಲಿಕರನ್ನು ಬಂಡವಾಳಶಾಹಿ ಭೂ ಮಾಲೀಕರನ್ನಾಗಿ ಮಾಡುವ- ರೈತ ಕೃಷಿ ನಾಶ ಮಾಡಿ ಕಂಪನಿ ಕೃಷಿ ವ್ಯಾಪಕಗೊಳಿಸುವ ನೀಲನಕ್ಷೆಯನ್ನು ಕಿತ್ತೆಸೆಯೋಣ"

ಜಿ.ಸಿ. ಬಯ್ಯಾರೆಡ್ಡಿ




ಜನಶಕ್ತಿ: ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಬೆಂಗಳೂರಿನಲ್ಲಿ ನಡೆದಿದೆ. 1.10 ಲಕ್ಷ ಕೋಟಿಗಿಂತಲೂ ಅಧಿಕ ಬಂಡವಾಳ ಹರಿದು ಬಂದಿದೆ...... ಇದರಿಂದ ಕೃಷಿ ಅಭಿವೃದ್ಧಿಯಾಗುತ್ತದೆ. ರೈತನ ಅಭಿವೃದ್ಧಿಯಾಗುತ್ತದೆ....ಹೀಗಾಗಿ ಸಮಾವೇಶ ಯಶಸ್ವಿಯಾಗಿದೆ ಅಂತ ರಾಜ್ಯ ಬಿಜೆಪಿ ಸಕಾರ ತನ್ನ ಬೆನ್ನು ತಾನೆ ತಟ್ಟಿಕೊಳ್ಳುತ್ತಿದೆ. ಈ ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ನಿಜಕ್ಕೂ ನಡೆದದ್ದು ಯಾಕೆ ? ಏನಿದರ ಹಿನ್ನೆಲೆ ?

ಬಯ್ಯಾರೆಡ್ಡಿ: ಕೃಷಿ ಕ್ಷೇತ್ರದಲ್ಲಿ ಗಂಭೀರ ಬಿಕ್ಕಟ್ಟು ಇದೆ. ಅದರ ಪರಿಣಾಮವಾಗಿ 2.65 ಲಕ್ಷ ಜನ ರೈತರು ದೇಶದಲ್ಲಿ ಕಳೆದ 16 ವರ್ಷಗಳಲ್ಲಿ ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. ರೈತರ ಆತ್ಮಹತ್ಯೆಯ ವಿಷಯದಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯ ಮೂರನೇ ಸ್ಥಾನದಲ್ಲಿದೆ. ಕೃಷಿ ಬಿಕ್ಕಟ್ಟಿನಿಂದಾಗಿ ದೊಡ್ಡ ಪ್ರಮಾಣದಲ್ಲಿ ಗ್ರಾಮಾಂತರದಿಂದ ಕೃಷಿ ಕೂಲಿಕಾರರ, ಬಡ ರೈತರ ವಲಸೆ ನಡೆಯುತ್ತಿದೆ.

ಬಿಕ್ಕಟ್ಟಿನ ಪರಿಹಾರದ ನಿಟ್ಟಿನಲ್ಲಿ ಪ್ರಾಂತ ರೈತ ಸಂಘ, ಎಡಪಕ್ಷಗಳು ಮುಂತಾದ ಎಡ ಶಕ್ತಿಗಳು ಒಂದು ಬಗೆಯ ಪರ್ಯಾಯ ಧೋರಣೆಯನ್ನು ಪ್ರತಿಪಾದಿಸುತ್ತಿವೆ. ಬಡವರಿಗೆ ಭೂಮಿ ಹಂಚುವ ಭೂ ಸುಧಾರಣೆ, ನೀರಾವರಿ ಸೌಕರ್ಯ, ಉತ್ತಮ ಬೀಜ, ಸಾಲ, ಬೆಳೆದ ಬೆಳೆಗೆ ಉತ್ತಮ ಬೆಲೆ, ಬೆಲೆ ವೈಫಲ್ಯದ ಸಂದರ್ಭದಲ್ಲಿ ವಿಮೆ ಸೌಕರ್ಯ ಮುಂತಾದವುಗಳು ಸಮಸ್ಯೆಗೆ ನಿಜವಾದ ಪರ್ಯಾಯ.

ಎಡ ಪರ್ಯಾಯ, ತನ್ನ ವರ್ಗದ ಹಿತಕ್ಕಾಗಿ ಸಂಪೂರ್ಣ ವಿರೋಧವಿರುವುದರಿಂದ ಅದನ್ನು ಅನುಸರಿಸಲು ಸಾಧ್ಯವಿಲ್ಲ. ಆದರೆ ಅದೇ ಸಮಯದಲ್ಲಿ ಬಿಕ್ಕಟ್ಟಿನ ಪರಿಹಾರಕ್ಕಾಗಿ ಹಾಗೂ ಕೃಷಿ ಅಭಿವೃದ್ಧಿಗೆ ತಾನು ಪ್ರಯತ್ನ ಮಾಡುತ್ತಿದ್ದೇನೆಂದು ಜನರಿಗೆ ತೋರಿಸಬೇಕಿದೆ ಮತ್ತು ಈ ತನ್ನ ವರ್ಗ ಹಿತವನ್ನು ವಿಶೇಷವಾಗಿ ಜಾಗತಿಕ ಬಂಡವಾಳಗಾರರನ್ನು ಓಲೈಸುವ ಕೆಲಸವನ್ನು ಮಾಡಲು ಬಿಜೆಪಿ ಸರ್ಕಾರ ಈ ಕ್ರಮಕ್ಕೆ ಕೈ ಹಾಕಿದೆ. ಬಹುರಾಷ್ಟ್ರೀಯ ಕಂಪನಿಗಳನ್ನು ಮತ್ತು ಜಾಗತಿಕ ಬಂಡವಾಳವನ್ನು ಓಲೈಸುವ ವಿಷಯದಲ್ಲಿ ಕಾಂಗ್ರೆಗಿಂತ ತಾನು ಮುಂದೆ ಎಂಬುದನ್ನು ಸಾಬೀತು ಮಾಡಲು ಹೊರಟಿದೆ. ಹೀಗಾಗಿ ಉತ್ಪಾದನೆ ಹಾಗೂ ಉತ್ಪಾದಕತೆಯ ಹೆಸರಿನಲ್ಲಿ ವಿಶ್ವ ಕೃಷಿ ಹೂಡಿಕೆಗಳ ಸಮಾವೇಶವನ್ನು ಸಂಘಟಿಸಿದೆ. ಇನ್ನು ಬಂದಿದೆ ಎಂದು ಹೇಳಲಾಗುತ್ತಿರುವ ಬಂಡವಾಳದಲ್ಲಿ ಸಾರ್ವಜನಿಕರ ಉಳಿತಾಯವಾಗಿರುವ ಬ್ಯಾಂಕ್‌ಗಳ ಹಣ ಸುಮಾರು 50% ಇನ್ನು ಉಳಿದ 50% ಬಂಡವಾಳದಲ್ಲಿ ವಾಸ್ತವವಾಗಿ ಹೂಡಿಕೆಯಾಗುವುದು ಎಷ್ಟು ಎಂಬುದು ಮುಖ್ಯ ಪ್ರಶ್ನೆ. ಏಕೆಂದರೆ ಜಿಐಎಂ ಗಳಿಂದ 3-4 ಲಕ್ಷಕೋಟಿ ರೂಗಳ ಬಂಡವಾಳ ಬಂತು ಎಂದು ಸರ್ಕಾರಗಳು ಹೇಳಿದಾಗ ವಾಸ್ತವವಾಗಿ ಇದರಲ್ಲಿ ಶೇ.30-40 ರಷ್ಟು ಮಾತ್ರ ಜಾರಿಯಾಗಿದೆ ಎನ್ನುವ ಸತ್ಯಗಳು ನಮ್ಮ ಕಣ್ಣ ಮುಂದಿದೆ. ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸ ಬೇಕಾದರೆ ಬಂಡವಾಳ ಬೇಕಾಗುತ್ತದೆ. ಅಂದರೆ ಬಜೆಟ್‌ನಿಂದ ಅಗತ್ಯ ಪ್ರಮಾಣದ ಬಂಡವಾಳವನ್ನು ಸರ್ಕಾರ ಕೃಷಿಯ ಮೇಲೆ ಹೂಡಬೇಕಾಗುತ್ತದೆ. ಇದಕ್ಕೆ ಸಿದ್ಧವಿಲ್ಲದ ಸರ್ಕಾರ ಖಾಸಗಿ ಬಂಡವಾಳವನ್ನು ಕೃಷಿ ಕ್ಷೇತ್ರಕ್ಕೆ ತರಬೇಕೆಂದು ಹೊರಟಿದೆ. ಕೃಷಿ ಕ್ಷೇತ್ರಕ್ಕೆ ಖಾಸಗಿ ಬಂಡವಾಳವು ದೊಡ್ಡ ಪ್ರಮಾಣದ ಸರ್ಕಾರಿ ಹೂಡಿಕೆಯ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಬಂದರೆ ಹೆಚ್ಚಿನ ತೊಂದರೆಯಿಲ್ಲ. ಸರ್ಕಾರಿ ಹೂಡಿಕೆಯನ್ನು ಸಂಪೂರ್ಣ ನಿಲ್ಲಿಸಿ ಖಾಸಗಿ ಬಂಡವಾಳದ ಮೇಲೆ ಅವಲಂಬಿಸುವುದು ಕೃಷಿ ಕ್ಷೇತ್ರವನ್ನು ನಾಶ ಮಾಡುತ್ತದೆ.

ಕೇಂದ್ರದಲ್ಲಿ ಆಡಳಿತ ಪಕ್ಷ ಹಾಗೂ ರಾಜ್ಯದಲ್ಲಿ ಪ್ರಧಾನ ಪ್ರತಿ ಪಕ್ಷವಾಗಿರುವ ಕಾಂಗ್ರೆ, ಅದರ ನಾಯಕ ವೀರಪ್ಪ ಮೊಯ್ಲಿಯವರು 2ನೇ ಹಸಿರು ಕ್ರಾಂತಿ ಅಗತ್ಯ ಎಂದಿದ್ದಾರೆ. ಒಂದನೆ ಹಸಿರು ಕ್ರಾಂತಿಯ ಸಮಯದಲ್ಲಿ ಸಹ ಆಹಾರ ಧಾನ್ಯಗಳ ಉತ್ಪಾದನೆ ನೀರಾವರಿ ಯೋಜನೆ, ವಿದ್ಯುತ್, ಮಾರುಕಟ್ಟೆ, ತಂತ್ರಗ್ನಾನ ಇತ್ಯಾದಿಗಳ ಸಲುವಾಗಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿತು.



ಹಸಿರು ಕ್ರಾಂತಿಯು ಕೃಷಿ ಉತ್ಪಾದನೆಯನ್ನು ಒಂದು ಹಂತದಲ್ಲಿ ಹೆಚ್ಚಿಸಿತಾದರೂ ಭೂಸುಧಾರಣೆ ಕಾನೂನುಗಳ ಜಾರಿಯಾಗದೇ, ಬಡವರ ಕೈಯಲ್ಲಿ ಭೂಮಿ ಇಲ್ಲದ ಕಾರಣದಿಂದ ನಮ್ಮ ಗ್ರಾಮೀಣ ಬಡತನ ಮತ್ತು ಅಸಮಾನತೆ ಮತ್ತಷ್ಟು ಹೆಚ್ಚಾಯಿತು. ಕೃಷಿ ಕ್ರಾಂತಿಯ ಲಾಭವನ್ನು ಕೆಲವೇ ಹಣವಂತರು, ಶ್ರೀಮಂತ ರೈತರು ಪಡೆದುಕೊಂಡರು. ಅದು ನಮ್ಮ ಸಮಾಜದ ಆಳುವ ವರ್ಗದ ಹಿತಾಸಕ್ತಿಯನ್ನು ಕಾಪಾಡಿ ಅವರಿಗೆ ಅಪಾರವಾದ ಲಾಭವನ್ನು ತಂದು ಕೊಟ್ಟಿತು. ಈಗ ಬಿಜೆಪಿ ರಾಜ್ಯ ಸರ್ಕಾರವು ಸಹ ಇಂತಹದೇ ಕೆಲಸದ ಮೂಲಕ ರಾಜ್ಯದ ಶೇ.10-15ರಷ್ಟು ಶ್ರೀಮಂತ ಭೂಮಾಲಿಕರೂ ಬಂಡವಾಳಶಾಹಿ ಭೂಮಾಲಿಕರಿಗೆ ಲಾಭವಾಗುವ ಈ ಕೆಲಸಕ್ಕೆ ಕೈ ಹಾಕಿದೆ.

ಜನಶಕ್ತಿ: ಈ ವಿಶ್ವ ಕೃಷಿ ಹೂಡಿಕೆದಾರರ ಸಮಾವೇಶ ಫಲಿತಾಂಶ ನಮ್ಮ ಕೃಷಿಯ ಮೇಲೆ, ಕೃಷಿ ಅವಲಂಬಿತ ಜನರ ಬದುಕಿನ ಮೇಲೆ ಏನು ಪರಿಣಾಮ ಬೀರಲಿದೆ ?

ಬಯ್ಯಾರೆಡ್ಡಿ: ಪಾಳೇಯಗಾರಿ ಭೂಮಾಲಿಕರನ್ನು ಬಂಡವಾಳಶಾಹಿ ಕೃಷಿಕರನ್ನಾಗಿ ಬೆಳೆಸಿ ಅವರನ್ನು ಬಹುರಾಷ್ಟ್ರೀಯ ಕಂಪನಿಗಳ ಜೊತೆ ಪಾಲುದಾರರನ್ನಾಗಿ ಮಾಡಿ ಕೃಷಿ ಉತ್ಪಾದನೆ, ಉತ್ಪಾದಕತೆ ಹೆಚ್ಚಿಸುವ ಮೂಲಕ ನಮ್ಮ ಕೃಷಿ ರಂಗದ ಗಂಭೀರ ಬಿಕ್ಕಟ್ಟು ಹೋಗಲಾಡಿಸುತ್ತೇವೆ ಎನ್ನುವ ಈ ನೀತಿಗಳು ತೀವ್ರಗೊಂಡಿರುವ ಬಿಕ್ಕಟ್ಟನ್ನು ಇನ್ನಷ್ಟು ಹೆಚ್ಚಿಸುತ್ತವೆ. ಖಾಸಗಿ ಬಂಡವಾಳಕ್ಕೆ ಸೂಪರ್ ಪ್ರಾಫಿಟ್ ಅಂದರೆ ವಿಪರೀತ ಲಾಭವನ್ನು ಗ್ಯಾರಂಟಿ ಮಾಡಿ ಅಂತರ ರಾಷ್ಟ್ರೀಯ ಮಾರುಕಟ್ಟೆಯ ಅಗತ್ಯವನ್ನು ಗುರಿಯಾಗಿಸಿಕೊಂಡು ದೇಶದ ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಪೂರಕವಾಗಿ ಮತ್ತೊಂದು ಹಸಿರು ಕ್ರಾಂತಿಯನ್ನು ನಡೆಸಿದರೆ ಒದಷ್ಟರ ಮಟ್ಟಿಗೆ ಉತ್ಪಾದನೆ ಹೆಚ್ಚಬಹುದು. ಆದರೆ ಈ ನೀತಿಗಳ ಒಟ್ಟು ಪರಿಣಾಮ ಏನಾಗುತ್ತದೆ ಎಂಬ ಎಚ್ಚರ ಇರಬೇಕು. ಕೃಷಿಯಲ್ಲಿ ವಿಶ್ವ ಬಂಡವಾಳ ಹೂಡಿಕೆ ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಈ ಎರಡೂ ಕೂಡ ಒಂದೇ. ಒಂದೇ ನೀಲನಕ್ಷೆಯ ಎರಡು ಅಂಶಗಳು. ಇದರ ಜೊತೆಗೆ ನಮ್ಮ ಕೃಷಿ ಹಾಗೂ ಕೃಷಿಕರ ಹಿತಾಸಕ್ತಿ ಮಾರಕವಾದ ಗುತ್ತಿಗೆ ಕೃಷಿಯನ್ನು ವ್ಯಾಪಕಗೊಳಿಸುವ ಹುನ್ನಾರವೂ ಈ ನೀತಿಗಳ ಹಿಂದಿದೆ. ಒಟ್ಟಾರೆ ರೈತಾಪಿ ಕೃಷಿಯನ್ನು ನಾಶಮಾಡಿ, ಕಂಪನಿ ಕೃಷಿಯನ್ನು ಜಾರಿಗೆ ತರಲಾಗುತ್ತಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಬಡತನ, ನಿರುದ್ಯೋಗ, ವ್ಯಾಪಕ ವಲಸೆ ಉಂಟಾಗುತ್ತದೆ. ಬಿಜೆಪಿ ರಾಜ್ಯ ಸರ್ಕಾರ, ತನ್ನ 2020ರ ದಸ್ತಾವೇಜಿನಲ್ಲಿ ಹೇಳಿಕೊಂಡಂತೆ ಗ್ರಾಮೀಣ ಪ್ರದೇಶದ ಶೇ 40 ರಷ್ಟು ಜನಸಂಖ್ಯೆಯನ್ನು ಕೃಷಿ ಅವಲಂಬನೆಯಿಂದ ಹೊರಗೆ ತರಲಾಗುತ್ತದಂತೆ. ಆದರೆ ಸಮಸ್ಯೆ ಎಂದರೆ ಇವರಿಗೆ ಬದಲಿ ಬದುಕಿನ ವ್ಯವಸ್ಥೆ ಇಲ್ಲದೆ ಬೀದಿಪಾಲು ಮಾಡಲಾಗುತ್ತಿದೆ. ಅದರಿಂದಲೇ ನಾವು ಗಂಭೀರವಾಗಿ ವಿರೋಧಿಸುತ್ತಿದ್ದೇವೆ.

ಜನಶಕ್ತಿ: ರೈತ ಮತ್ತು ಗ್ರಾಹಕರ ನಡುವೆ ಇರುವ 5-6 ಜನ ಮಧ್ಯವರ್ತಿಗಳನ್ನು ತಪ್ಪಿಸಿ ತೋಟದಿಂದ ನೇರ ಗ್ರಾಹಕರಿಗೆ ಉತ್ಪನ್ನ ತಲುಪಿಸುತ್ತೇವೆ. ಇದರಿಂದ ರೈತರಿಗೆ ಹೆಚ್ಚಿನ ಬೆಲೆ ದೊರೆಯುತ್ತದೆ. ಗ್ರಾಹಕರಿಗೆ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳು ದೊರೆಯುತ್ತವೆ ಎಂಬ ವಾದಗಳನ್ನು ಖಾಸಗಿ ಬಂಡವಾಳಿಗರು ಬಹುರಾಷ್ಟ್ರೀಯ ಕಂಪನಿಗಳು ಇಡುತ್ತಿವೆ. ಈ ಬಗೆಗೆ ಏನು ಹೇಳುತ್ತೀರಿ ?


ಬಯ್ಯಾರೆಡ್ಡಿ: ಕೃಷಿಕ್ಷೇತ್ರದಲ್ಲಿ ಗುತ್ತಿ ಕೃಷಿಯನ್ನು ತರುವ ಒಂದು ವಾದವಿದೆ. ಇದರಲ್ಲಿ ಎರಡು ಮೂರು ಆತಂಕಕಾರಿಯಾ ಪ್ರಶ್ನೆಗಳಿವೆ. ಕೃಷಿಯಲ್ಲಿ ವಿದೇಶಿ ಹೂಡಿ ಬರುವುದರಿಂದ ಕೃಷಿ ಉತ್ಪಾದ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಹೋಗುತ್ತದೆ ಉತ್ಪಾದನೆಯ ಆದ್ಯತೆ-ವಿಧಾನ, ಗು ಎಲ್ಲದರಲ್ಲಿಯೂ ಬದಲಾವಣೆ ಬರುತ್ತದೆ. ನ ದೇಶದ ಜನರ ಹಿತಾಸಕ್ತಿ, ಅಗತ್ಯಗಳ ಕಡೆಗಣಿಸಲ್ಪಡುತ್ತವೆ. ಏಕೆಂದರೆ ಎಲ್ಲವ ವಿದೇಶಿ ಮಾರುಕಟ್ಟೆಯ ಅಗತ್ಯಗಳ ಹೊಂದಿಕೊಂಡಂತೆ ಯೋಜಿಸಲಾಗುತ್ತ ಹೀಗಾಗಿ ಕೃಷಿ ಅವಲಂಬಿತರ ಸಮಸ್ಯೆಗ ಉಲ್ಬಣವಾಗುತ್ತವೆ.

ಮತ್ತೊಂದು ಗಂಭೀರ ಸಮಸ್ಯೆ ಎಂದ ಇದು. ರಾಜ್ಯದ ಕೃಷಿ ಕ್ಷೇತ್ರದಲ್ಲಿ 73 ಹಿಡುವಳಿದಾರರು ಇದ್ದಾರೆ. ಇವರಲ್ಲಿ

ಪುಟ 1

(ಪುಟ 11 ರ ಬಾಕ್ಸ್‌ನಲ್ಲಿನ ಮಾಹಿತಿ ಗಮನಿ

ಹಗರಣದ ಹೆಸರಿನಲ್ಲಿ ಸಮಯ ವ್ಯರ್ಥ ಮಾಡುವುದಿಲ್ಲ... ಎಂದಿಗೂ ಹಿಂದೆ ನೋಡುವುದಿಲ್ಲ...



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಮಲ್ಲೇಶ್ವರ, ಗಾಂಧೀನಗರ, ರಾಜರಾಜೇಶ್ವರಿ ನಗರ...ಬೆಂಗಳೂರಿನ ಈ 'ಪುಣ್ಯ' ಕ್ಷೇತ್ರಗಳಲ್ಲಿ ಒಟ್ಟು 1,539 ಕೋಟಿ ರೂಪಾಯಿಗಳ ಬಿಬಿಎಂಪಿ ಕಾಮಗಾರಿಗಳಲ್ಲಿ ರಾಮ–ಕೃಷ್ಣ ಲೆಕ್ಕಾಚಾರಗಳು ನಡೆದು ಅದರಲ್ಲಿ ಸುಮಾರು 500 ಕೋಟಿ 'ಗೋವಿಂದ' ವ್ಯವಹಾರಗಳು ಸಾಂಗವಾಗಿ ಜರುಗಿರುವ ಬಗೆಗೆ ತಮಗೆ ಈಗಾಗಲೇ ಗೊತ್ತಿದೆ.

ಈ ನಡುವೆ ನಡೆದ ಮತ್ತೊಂದು ಪವಾಡವೂ ತಮಗೆ ಗೊತ್ತೆ ಇರಬೇಕು. ಏಕೆಂದರೆ ಈಗಾಗಲೇ ಈ ಪವಾಡ ಲೋಕ ವಿಖ್ಯಾತವಾಗಿದೆ.

ಈ 'ಗೋವಿಂದ' ವ್ಯಹಾರಗಳ ಬಗೆಗೆ ಅದೊಂದು ಮಾಮೂಲಿ 'ದೈವಿ' ಕಾರ್ಯ ಅಂತ ಅಂದುಕೊಂಡು ತೆಪ್ಪಗೆ ಕಣ್ಣು, ಬಾಯಿ ಮುಚ್ಚಿಕೊಂಡು ಇರಲಾರದೇ ತನಿಖೆಗೆ ಆದೇಶ ನೀಡಿದ್ದರಲ್ಲ ಆ ಬಿಬಿಎಂಪಿ ಕಮೀಷನರ್... ಆಮೇಲೆ ಏನಾಯ್ತು ನೋಡಿ ತನಿಖಾ ಠಾಣೆಗೆ ಬೆಂಕಿ ಬಿತ್ತು. ಅದೇನು ಸುಮ್ಮನೇನಾ ಕ್ಷೇತ್ರ ಮಹಾತ್ಮೆ. ಇನ್ನು ತನಿಖೆಗೆ ಆದೇಶಿದ ಸಿದ್ದಯ್ಯ ಅವರಿಗೆ ಏನು ಗತಿ ಬಂದಿದೆ ನೋಡಿ. ಅವರು ರಾತ್ರೋ ರಾತ್ರೋ ಇತ್ತಂಗಡಿ ಆಗಿದ್ದಾರೆ. ಅವರೀಗ ಈ ಪುಣ್ಯ ಕ್ಷೇತ್ರದ ಕಡೆ ತಿರುಗಿ ನೋಡುವಂತಿಲ್ಲ. ಇರಲಿ ಇನ್ನು ಮುಂದಿನದು ಇನ್ನೂ ಸ್ವಾಸಸ್ಯಕರವಾಗಿದೆ.

ಸಿದ್ದಯ್ಯನವರ ಜಾಗಕ್ಕೆ ದೈವ ಕೃಪೆಯಿಂದ ಅವತರಿಸಿರುವ ನೂತನ ಕಮಿಷನರ್ ಸನ್ಮಾನ್ಯ ಕೆ. ಶಂಕರಲಿಂಗೇಗೌಡ ಕ್ಷೇತ್ರ ಮಹಾತ್ಮೆ ಚೆನ್ನಾಗಿ ತಿಳಿದಿರುವಂತಿದೆ. ಶ್ರೀ ಕ್ಷೇತ್ರದ ಬಗೆಗೆ ಇಲ್ಲಿ ಚಟುವಟಿಕೆ, ವ್ಯವಹಾರಗಳ ಬಗೆಗೆ ಅವರಲ್ಲಿ ತುಂಬಿ ತುಳುಕುತ್ತಿರುವ ಭಕ್ತಿ ಭಾವದಲ್ಲೇ ಅದನ್ನು ನೋಡಬಹುದು. ನೂತನ ಜವಾಬ್ದಾರಿ ಸ್ವೀಕರಿಸುವಾಗ ಅವರು ಉದುರಿಸಿರುವ ನುಡಿ ಮುತ್ತುಗಳ ಮೂಲಕ ಅವರ ಶ್ರದ್ಧೆಯ ಮಟ್ಟವನ್ನು ಅಳೆಯ ಬಹುದು ಅನಿಸುತ್ತಿದೆ.

" ಹಗರಣದ ಹೆಸರಿನಲ್ಲಿ ಸಮಯ ವ್ಯರ್ಥ ಮಾಡುವುದಿಲ್ಲ..... ಎಂದಿಗೂ ಹಿಂದೆ ನೋಡುವುದಿಲ್ಲ.... ಮುಂದೆ ಆಗಬೇಕಾಗಿರುವ ಬಗೆಗೆ ಗಮನ ನೀಡುತ್ತೇನೆ..... ರಸ್ತೆ ಅಂದ ಮೇಲೆ ಗುಂಡಿಗಳು ಇದ್ದೇ ಇರುತ್ತವೆ.(ಇವರು ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು....!!!)" ಎಂದಿದ್ದಾರೆ ಶ್ರೀ ಕೆ. ಶಂಕರಲಿಂಗೇಗೌಡರು. ಕಂತೆಗೆ ತಕ್ಕ ಬೊಂತೆ. ಇನ್ನೂ ಏನೇನು ಮಹಿಮೆಗಳಿವೆಯೋ ಈ ಬಿಜೆಪಿ ದರ್ಬಾರ್ ನಲ್ಲಿ ಕಪಟ ನಾಟಕ ಸೂತ್ರಧಾರಿ ಆ ಶ್ರೀ ಕೃಷ್ಣ ಪರಮಾತ್ಮನೇ ಬಲ್ಲ.

ಆಸ್ಪತ್ರೆ ಶುಲ್ಕ ಏರಿಕೆ ಬರೆ

ರಾಜ್ಯ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಇಲ್ಲವೂ ಸುಸೂತ್ರವಾಗಿ, ಸರಾಗವಾಗಿ ನಡೆಯುತ್ತಿತ್ತು. ಹಾಲು ದರ...ಬಸ್ ಪ್ರಯಾಣ ದರ, ವಿದ್ಯುತ್ ದರ...ಶಿಕ್ಷಣ ಶುಲ್ಕಗಳು.... ಹೀಗೆ ಎಲ್ಲ ಬೆಲೆಗಳು ಕಾಲ ಕಾಲಕ್ಕೆ ಸೂಕ್ತ ಪ್ರಮಾಣದಲ್ಲಿ ಏರುತ್ತ ಜನ ಯಾವುದೇ ಆತಂಕಗಳಿಲ್ಲದೇ ಎಂದಿನಂತೆ ನೆಮ್ಮದಿಯಾಗಿ ಜೀವನ ಸಾಗಿಸುತ್ತಿದ್ದರು. ಆದರೆ ಎಲ್ಲೋ ಅಲ್ಲಿ ಇಲ್ಲಿ ಕೆಲವು ಸಣ್ಣ ಪುಟ್ಟ ಕೊರತೆಗಳು ಹಾಗೇ ಉಳಿದು ಬಿಟ್ಟಿದ್ದವು. ಅವು ಈಗೀಗ ಹೇಗೋ ಸರಿಯಾಗಿ ಸಹಜತೆಯತ್ತ ಬರಲು ರಾಜ್ಯ ಬಿಜೆಪಿ ಸರ್ಕಾರ ಕ್ರಮ ವಹಿಸಿದೆ.

ಬೆಂಗಳೂರಿನಲ್ಲಿ ವಿಕ್ಟೋರಿಯಾ.. ವಾಣಿ ವಿಲಾಸ...ಬೌರಿಂಗ್...ಲೇಡಿ ಕರ್ಜನ್ ಮುಂತಾದ 'ಧರ್ಮಾಸ್ಪತ್ರೆ'ಗಳು ಇವೆ. ಬೆಂಗಳೂರು ಮಹಾನಗರ, ಸುತ್ತ ಮುತ್ತಲ ಜಿಲ್ಲೆಗಳು, ಹಾಗೂ ಕರ್ನಾಟಕ ರಾಜ್ಯದ ಬಡ ಬಗ್ಗರಿಗೆ ಇದು ಒಂದು ಆಸರೆ ಕೇಂದ್ರವಾಗಿದ್ದರೂ ಇಲ್ಲಿನ ವಿವಿಧ ಸೌಲಭ್ಯ ಸೇವೆಗಳಿಗೆ ಸಾಕಷ್ಟು ಉತ್ತಮ ಶುಲ್ಕವನ್ನು ವಿಧಿಸಿ ಖಾಸಗಿ ಆಸ್ಪತ್ರೆಗಳ ಜೊತೆಗೆ ಪೈಪೋಟಿಯನ್ನು ನಡೆಸಲು ಪ್ರಯತ್ನಸಲಾಗುತ್ತಿತ್ತು. ಖಾಸಗಿ ನರ್ಸಿಂಗ್ ಹೋಮ್‌ಗಳೊಂದಿಗೆ ಈ ಸಂಸ್ಥೆಗಳು ಸ್ಪರ್ಧಿಸಲು ಪೂರಕವಾಗುವಂತೆ ರಾಜ್ಯ ಬಿಜೆಪಿ ಈಗ ಈ ಸಂಸ್ಥೆಗಳಿಗೆ ಅನುವು ಮಾಡಿಕೊಟ್ಟಿದೆ. ಅಂದರೆ ಈ ಸರಕಾರಿ ಆಸ್ಪತ್ರೆಗಳ ಶುಲ್ಕಗಳನ್ನು ಈಗ ಇನ್ನಷ್ಟು ಉತ್ತಮಪಡಿಸಲಾಗಿದೆ.


ನಿಮಗೆ ಅನುಮಾನವಿದ್ದರೆ ಈ ಪಟ್ಟಿಯನ್ನು ನೋಡಿ

ಸೇವೆ	ಹಳೆಯ ದರ	ಹೊಸದರ
ಊಟ	10.00	50.00
ಡಾರ್ಮೆಂಟರಿ	55.00	100.00
ವಾರ್ಡ್(2 ಬೆಡ್)	150.00	250.00
ವಿಶೇಷ ವಾರ್ಡ್	250.00	500.00
ಐ.ಸಿ.ಯು.	1,250.00	1,500.00

ಕಂಪನಿ ಕೃಷಿ ಹಾಗೂ ಮಾರುಕಟ್ಟೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದಾಗಿ ವಿವಿಧ ದೇಶಗಳಲ್ಲಾಗಿರುವ ಅನುಭವಗಳು

ಈ ದೈತ್ಯಗಾತ್ರದ ಸರಣಿ ಸೂಪರ್ ಮಾರ್ಕೆಟ್‌ಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ ಎಂಬ ತರ್ಕವೂ ವಿಯಟ್ನಾಮಿನ ಅನುಭವದಲ್ಲಿ ಸುಳ್ಳಾಗಿದೆ. ಒಂದು ನಿರ್ದಿಷ್ಟ ಪ್ರಮಾಣದ ಮಾರಾಟವನ್ನು ನಿರ್ವಹಿಸುವಲ್ಲಿ ಬೀದಿ ಮಾರಾಟದಲ್ಲಿ 18 ಉದ್ಯೋಗಾವಕಾಶಗಳು ನಿರ್ಮಾಣವಾದರೆ, ಸಾಂಪ್ರದಾಯಿಕ ಚಿಲ್ಲರೆ ವ್ಯಾಪಾರದಲ್ಲಿ 10, ಅಂಗಡಿಗಳಲ್ಲಿ 8 ಉದ್ಯೋಗಾವಕಾಶಗಳು ಉಂಟಾಗುತ್ತವೆ, ಆದರೆ ಅಷ್ಟು ಕೆಲಸ ಮಾಡಲು ಸೂಪರ್ ಮಾರ್ಕೆಟಿನಲ್ಲಿ ನಾಲ್ಕೇ ಮಂದಿ ಸಾಕು. ನಾಲ್ಕು ಟನ್ ಟೊಮೆಟೋ ಮಾರಾಟದಲ್ಲಿ ಈ ಸೂಪರ್ ಮಾರ್ಕೆಟ್‌ಗಳು ಸರಾಸರಿ ಸುಮಾರು 5 ಮಂದಿಗೆ ಕೆಲಸ ಕೊಟ್ಟರೆ, ಸಾಂಪ್ರದಾಯಿಕ ಮಾರಾಟದಲ್ಲಿ 11–12 ಮಂದಿಗೆ ಕೆಲಸ ಸಿಗುತ್ತದೆ. ಇದು ಎಲ್ಲೆಡೆ ಆಗಿರುವ ಅನುಭವ.

ಉತ್ಪಾದಕನಿಗೆ ಈ ಚಿಲ್ಲರೆ ವ್ಯಾಪಾರ ವಲಯದ ದೈತ್ಯಕಂಪನಿಗಳಿಂದ ಉತ್ತಮ ಬೆಲೆ ಸಿಗುತ್ತದೆ ಎಂಬುದು ಕೂಡ ಒಂದು [illegible]. ಘಾನಾದ ಒಬ್ಬ ಕೋಕೋ ರೈತನ ಉತ್ಪನ್ನಕ್ಕೆ ಅದರಿಂದ ತಯಾರಿಸುವ ಮಿಲ್ಕ್ ಚಾಕೊಲೇಟ್‌ನ ಬೆಲೆಯ 3.9% ಮಾತ್ರ ಸಿಗುತ್ತದೆ, ಆದರೆ ಅದರ ಚಿಲ್ಲರೆ ಮಾರಾಟದ ಲಾಭದ ಪ್ರಮಾಣ 34ಶೇ. ಒಬ್ಬ ಬಾಳೆಹಣ್ಣು ಉತ್ಪಾದಕ ಅದರಿಂದ ತಯಾರಿಸುವ ಆಹಾರ ಪದಾರ್ಥದ ಬೆಲೆಯಲ್ಲಿ 5ಶೇ, ಮಾತ್ರ ಪಡೆಯುತ್ತಾನೆ, 34 ಶೇ.ದಷ್ಟು ಸೂಪರ್ ಮಾರ್ಕೆಟ್ ಮಾಲಕನಿಗೆ ಲಾಭವಾಗಿ ಹೋಗುತ್ತದೆ. ಅದೇ ರೀತಿ ಒಂದು ಜತೆ ಜೀನ್ಸ್‌ಗೆ ಗ್ರಾಹಕ ತೆರುವ ಬೆಲೆಯಲ್ಲಿ ಮಾರಾಟ ಕಂಪನಿಯ ಲಾಭದ ಪಾಲು 54ಶೇ., ಅದನ್ನು ತಯಾರಿಸುವ ಕಾರ್ಮಿಕನಿಗೆ ಸಿಗುವುದು ಕೇವಲ 12ಶೇ. ಮಾತ್ರ



ಮತ್ತೇ ಆಪರೇಷನ್‌ಗಳು !

ಪುಟ 3 ರಿಂದ

ಮತ್ತೇ ಆಪರೇಷನ್‌ಗಳು !

ಇದೀಗ ರಾಜ್ಯದಲ್ಲಿ ಮತ್ತೇ ಆಪರೇಷನ್ ನ ಭೀತಿ ಎಲ್ಲಾ ಪಕ್ಷಗಳಲ್ಲೂ ಕಾಡುತ್ತಿದೆ.ಬಳ್ಳಾರಿ ಉಪ ಚುನಾವಣೆಯಲ್ಲಿ ರಾಮುಲು ಗೆಲುವು ಇದಕ್ಕೆ ಇನ್ನಷ್ಟು ಚಾಲನೆ ನೀಡಿದೆ. ಶ್ರೀರಾಮುಲು ಸ್ಥಾಪಿಸ ಬಯಸಿರುವ ಪಕ್ಷ ಅಹಿಂದ ,ದಲಿತ ವಿಭಾಗಗಳನ್ನು ಆದಾರವಾಗಿಸಿಕೊಳ್ಳುವ ಸಂಭವವೇ ಅಧಿಕವಾಗಿದೆ.ಬಿಜೆಪಿಗೆ ಸವಾಲು ಹಾಕಿರುವ ಹಿನ್ನೆಲೆಯಲ್ಲಿ ಅಲ್ಲಿಂದಲೇ ಸುಮಾರು 16 + ಶಾಸಕರನ್ನು ಸೆಳೆಯುವ ಲೆಕ್ಕಾಚಾರವಿದೆಯಂತೆ. ಹೀಗಾದಲ್ಲಿ ಬಹುಮತ ಕಳೆದು ಕೊಂಡು ಸರ್ಕಾರ ಪತನವಾಗುವುದು ಖಚಿತವಿರುವುದರಿಂದ ಬಿಜೆಪಿ ಯು ಇತರೆ ಪಕ್ಷಗಳತ್ತ ಗಾಳ ಹಾಕಿದೆ. ಸರ್ಕಾರವನ್ನು ಉರುಳಿಸುವ ಟಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿರುವ ಜೆಡಿ ಎಸ್ ನಿಂದಲೇ ಶಾಸಕರನ್ನು ಸೆಳೆಯಲು ಬಿಜೆಪಿ ಹೊರಟಿದ್ದು ಈಗಾಗಲೇ 8 +1 ಶಾಸಕರಿಗೆ ಸಂಪರ್ಕಿಸಲಾಗಿದೆ. ಹೀಗಾಗಿಯೇ ಕುಮಾರಸ್ವಾಮಿ ರೆಸಾರ್ಟ್‌ನಲ್ಲಿ ತಮ್ಮವರೊಂದಿಗೆ ಸಂತೈಕೆ ಮುಗಿಸಿದ್ದಾರೆ. ಏನು ಇನ್ನಷ್ಟು [illegible] ಪಡೆಯುವುದು ನಿಶ್ಚಿತ. ಅಂದರೆ ವಿಧಾನ ಸಭಾ ಕಲಾಪಗಳು ವ್ಯರ್ಥ. ಇದನ್ನೇ ರಾಜಕಾರಣವೆಂದೇ ಪಾಲಿಸುವ ವಿರೋಧ ಪಕ್ಷಗಳು,ಹೇಗೋ ಅಧಿಕಾರದಲ್ಲಿ ಉಳಿದುಕೊಂಡು ಹಗರಣಗಳನ್ನು ಮುಚ್ಚಿಕೊಳ್ಳಲು,ಹೊಸ ಲೂಟಿಗೆ ಅವಕಾಶ ಪಡೆಯಲು ಹವಣಿಸುವ ಆಡಳಿತ ಪಕ್ಷವಿರುವಾಗ ಇನ್ನೇನು ಆದೀತು?

ಜನಶಕ್ತಿ

ನೆರೆ ಹೊರೆ

ಊತ್ತುಪುರಂ ದೇವಾಲಯಕ್ಕೆ ದಲಿತರ ಪ್ರವೇಶ

ತಮಿಳುನಾಡಿನಲ್ಲಿ ಅಸ್ಪೃಶ್ಯತೆ ವಿರುದ್ಧದ ಹೋರಾಟ ಮುಂದುವರಿದಿದೆ. ಮತ್ತೊಂದು ಮಹೋನ್ನತ ಯಶಸ್ಸು ದೊರೆತಿದೆ. ಮಧುರೈನ ಉತ್ತಪುರಂ ಗ್ರಾಮದಲ್ಲಿ ಈ ಹೋರಾಟ ನಡೆದಿದೆ. ಗ್ರಾಮದ ಮುತ್ತಾಲಮ್ಮ ದೇವಸ್ಥಾನದಲ್ಲಿ 22 ವರ್ಷಗಳ ಕಾಲ ದಲಿತರಿಗೆ ಹಾಕಲಾದ ನಿರ್ಬಂಧವನ್ನು ತೊಡೆದು ಹಾಕಲಾಗಿದೆ.

ಸಿಪಿಎಂ ಮತ್ತು ಅಸ್ಪೃಶ್ಯತಾ ನಿರ್ಮೂಲನಾ ಸಂಘ 2007ರಲ್ಲಿ ರಾಜ್ಯವ್ಯಾಪಿ ಸರ್ವೆ ಕಾರ್ಯ ನಡೆಸಿತ್ತು. ಈ ಸರ್ವೇಯಲ್ಲಿ ವ್ಯಾಪಕವಾಗಿ ಅಸ್ಪೃಶ್ಯತೆ, ಕಂದಾಚಾರಗಳು ಜಾರಿಯಲ್ಲಿವೆ ಎಂಬ ಅಂಶ ಬಹಿರಂಗಗೊಂಡಿತ್ತು. ಈ ಬಗ್ಗೆ ಪ್ರಬಲ ಹೋರಾಟವನ್ನು ಎರಡೂ ಸಂಘಟನೆಗಳು ರೂಪಿಸಿತ್ತು. ಇದರ ಭಾಗವಾಗಿ 2008ರ ಮೇ 6ರಂದು ಅಸ್ಪೃಶ್ಯತಾ ಗೋಡೆಯನ್ನು ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಕೆಡವಿ ಹಾಕಿದ್ದರು. ಮೇ 7ರಂದು ಕಾರಟ್ ಉತ್ತಪುರಂಗೆ ಭೇಟಿ ನೀಡಿದ್ದರು. ಅದಕ್ಕಾಗಿ ಸಾಮಾನ್ಯ ಹಾದಿಯನ್ನು ನಿರ್ಮಿಸಲಾಗಿತ್ತು. ಈ ಹೋರಾಟ ಉತ್ತಪುರಂ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಸಂಚಲನ ಉಂಟುಮಾಡಿತ್ತು.

ಅಸ್ಪೃಶ್ಯತೆಯ ಗೋಡೆಯನ್ನು ಒಡೆದು ಮಹತ್ತರ ಯಶಸ್ಸು ಗಳಿಸಲಾಗಿದ್ದರೂ ಮುಕ್ತವಾಗಿ ದಾರಿಯನ್ನು ಬಳಸಲು ದಲಿತರಿಗೆ ಅವಕಾಶ ನೀಡುತ್ತಿರಲಿಲ್ಲ. ದಾರಿಯಲ್ಲಿ ಕಲ್ಲು, ಮರಳು ಹಾಗೂ ಇತರ ಸಾಮಗ್ರಿಗಳನ್ನು ಹಾಕಿ ತಡೆಯೊಡ್ಡಲಾಗುತ್ತಿತ್ತು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದಾಗ, ದಲಿತರನ್ನೇ ವಿಚಾರಣೆಗೆ ಒಳಪಡಿಸಲಾಗುತ್ತಿತ್ತು. ಕಳೆದ ಎರಡು ವರ್ಷಗಳಿಂದ ಈ ಗ್ರಾಮದಲ್ಲಿ ನೂರಕ್ಕೂ ಹೆಚ್ಚು ಮಂದಿ ದಲಿತರನ್ನು ಬಂಧಿಸಿ ವಿಚಾರಣೆ ಮಾಡಲಾಗಿತ್ತು. ಈ ಬಗ್ಗೆ ಬೃಹತ್ ಪ್ರತಿಭಟನೆ ನಡೆಸಿದ್ದ ಸಿಪಿಎಂ ಮತ್ತು ಅಸ್ಪೃಶ್ಯತಾ ನಿರ್ಮೂಲನಾ ಸಂಘಟನೆ ನ್ಯಾಯಾಂಗ ತನಿಖೆಗೆ ಆಗ್ರಹಿಸಿತ್ತು.

ಕೇವಲ ಬಹಿರಂಗ ಹೋರಾಟವಲ್ಲದೆ, ಕಾನೂನು ಹೋರಾಟವೂ ಸಾಗಿತ್ತು. ತಮಿಳುನಾಡಿನ ಜನವಾದಿ ಮಹಿಳಾ ಸಂಘಟನೆ ರಾಜ್ಯ ಹೈಕೋರ್ಟ್‌ನಲ್ಲಿ ಕೇಸನ್ನೂ ದಾಖಲಿಸಿತ್ತು. ಇದನ್ನು ವಿಚಾರಣೆಗೆ ಎತ್ತಿಕೊಂಡ ಮಧುರೈ ಪೀಠ ಇಬ್ಬರು ನ್ಯಾಯಾಧೀಶರ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ ಪೊಲೀಸ್ ದೌರ್ಜನ್ಯದ ಬಗ್ಗೆ ಬೆಳಕು ಚೆಲ್ಲಿತು. ಸಂತ್ರಸ್ತರಿಗೆ 15 ಲಕ್ಷ ರೂಪಾಯಿ ಪರಿಹಾರ ನೀಡುವಂತೆ ಶಿಫಾರಸು ಮಾಡಿತು. ಈ ವರದಿಯನ್ವಯ ಹೈಕೋರ್ಟ್ ಸಂತ್ರಸ್ತರಿಗೆ ತಲಾ 10 ಲಕ್ಷ ರೂಪಾಯಿ ಪರಿಹಾರದ ಆದೇಶವನ್ನೂ ನೀಡಿತು. ಈ ಮಧ್ಯಂತರ ತೀರ್ಪು ಜನ ಚಳವಳಿಯ ಕಾನೂನು ಹೋರಾಟದಲ್ಲಿ ಮಹತ್ತರ ಯಶಸ್ಸಾಗಿ ದಾಖಲಾಯಿತು.

ಇದಲ್ಲದೆ, ಈ ಚಳುವಳಿ ಸತತ ಮೂರು ವರ್ಷಗಳಿಂದ ಹಲವು ಜೀವನಾವಶ್ಯಕ ವಿಷಯಗಳ ಮೇಲೆ ಹೋರಾಟಗಳನ್ನು ರೂಪಿಸುತ್ತಾ ಬಂದಿತ್ತು. ಈ ಹೋರಾಟದ ಫಲವಾಗಿ ಉತ್ತಪುರಂ ಗ್ರಾಮದಲ್ಲಿ ಸೂಕ್ತ ಬಸ್ ನಿಲ್ದಾಣ, ಅದಕ್ಕೆ ಮೇಲ್ಚಾವಣಿ, ಸಾರ್ವಜನಿಕ ದಾರಿಯ ಬಳಕೆ ಮುಂತಾದ ಬೇಡಿಕೆಗಳು ಈಡೇರಿದವು.

ಬಳಿಕ ದೇವಾಲಯ ಪ್ರವೇಶದ ಹೋರಾಟವನ್ನು ಕೈಗೆತ್ತಿಕೊಳ್ಳಲಾಯಿತು. ಟಿಎನ್‌ಯುಇಎಫ್ ಪ್ರಬಲ ಚಳವಳಿಯನ್ನು ಸಂಘಟಿಸಿತು. ಇಡೀ ಗ್ರಾಮವೇ ಕೋಟೆಯಾಗಿ ಮಾರ್ಪಟ್ಟಿತು. ಪೊಲೀಸರು ಸರ್ಪಗಾವಲು ಹಾಕಿದ್ದರು. ಪ್ರವೇಶ ಚಳವಳಿಯ ಮುಂಚೂಣಿ ವಹಿಸಿದ್ದ ಸಿಪಿಎಂ ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಅವರನ್ನು ಮಧುರೈನಲ್ಲೇ ಬಂಧಿಸಲಾಯಿತು. ಉಳಿದ ನಾಯಕರೂ ಬಂಧಿತರಾದರು. ಈ ಮಧ್ಯೆ, ಮಹಿಳಾ ಸಂಘಟನೆಯ ಮಧುರೈ ಜಿಲ್ಲಾ ಕಾರ್ಯದರ್ಶಿ ಎಸ್. ಕೆ. ಪೊನ್ನುತಾಯಿ ನಾಲ್ಕು ಗಂಟೆಗಳ ಕಾಲ ನಡೆದು ರಾತ್ರಿಯ ಕಗ್ಗತ್ತಲಿನಲ್ಲಿ ಗ್ರಾಮ ಪ್ರವೇಶಿಸಿದರು. ಇತರ ಕೆಲ ನಾಯಕರೂ ಅವರ ಜೊತೆ ಗ್ರಾಮಕ್ಕೆ ಕಾಲಿಟ್ಟರು. ಇದು ಹೋರಾಟಕ್ಕೆ ಮತ್ತಷ್ಟು ಧೈರ್ಯ ತುಂಬಿತು. ಮುಂದಿನ ಹೋರಾಟಕ್ಕೆ ಜನರೂ ಸಜ್ಜಾದರು.



ಚಳವಳಿಯ ಕಾರಣದಿಂದ ದೇವಸ್ಥಾನವನ್ನೂ ಮುಚ್ಚಲಾಗಿತ್ತು. ಹೋರಾಟದಿಂದಾಗಿ ದೇವಸ್ಥಾನಕ್ಕೆ ಪ್ರವೇಶ ನಿರಾಕರಿಸಲ್ಪಟ್ಟ ಇತರ ಹಿಂದುಳಿದ ವರ್ಗಗಳೂ ಮಾನಸಿಕವಾಗಿ ಬೆಂಬಲ ನೀಡುವ ಹಂತಕ್ಕೆ ಬಂದರು. ಪರಿಸ್ಥಿತಿಯನ್ನು ಮನಗಂಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಾತುಕತೆಯ ಮೂಲಕ ಬಗೆಹರಿಸುವಂತೆ ಮನವಿ ಮಾಡಿದರು. ಮಾತ್ರವಲ್ಲ, ಕೆಲ ಬೇಡಿಕೆಗಳಿಗೆ ಒಪ್ಪಿಸುವಲ್ಲಿ ಯಶಸ್ವಿಯಾದರು.

ಒಪ್ಪಂದದ ಪ್ರಕಾರ, ನವೆಂಬರ್ 11ರಂದು ದಲಿತರು ದೇವಾಲಯ ಪ್ರವೇಶಿಸಿ ಪೂಜೆ ಸಲ್ಲಿಸುವಂತಾಯಿತು. ಈ ಮೂಲಕ ಗ್ರಾಮದಲ್ಲಿನ ಒಡೆದ ಮನಗಳು ಒಂದಾದವು. ಶಾಂತಿ ಮತ್ತು ಸಹಬಾಳ್ವೆಯ ಭರವಸೆಯೊಂದಿಗೆ ಉತ್ತಮ ಬಾಂಧವ್ಯ ಮೂಡಿಸುವಲ್ಲಿ ದೇವಾಲಯ ಪ್ರವೇಶ ಚಳವಳಿ ಕಾರಣವಾಯಿತು.

ಈ ಬೆಳವಣಿಗೆಯನ್ನು ಸಿಪಿಐಎಂ ಮತ್ತು ಟಿಎನ್‌ಯುಇಎಫ್ ಸ್ವಾಗತಿಸಿತು. ಗ್ರಾಮದಲ್ಲಿ ದೌರ್ಜನ್ಯ ಪ್ರಕರಣಗಳು ಶಾಶ್ವತವಾಗಿ ನಿಲ್ಲಲಿ, ಇನ್ನಷ್ಟು ಗ್ರಾಮಗಳು ಉತ್ತಪುರಂ ಮಾದರಿಯನ್ನು ಅನುಸರಿಸಲಿ ಎಂದು ರಾಜ್ಯ ಸಿಪಿಎಂ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಆಶಿಸಿದರು.

ಈ ಚಳವಳಿ ತಮಿಳುನಾಡಿನಲ್ಲಿ ಅಸ್ಪೃಶ್ಯತೆ ವಿರುದ್ಧದ ಹೋರಾಟಕ್ಕೆ ಮತ್ತಷ್ಟು ವೇಗವನ್ನು ನೀಡಿತು.

ಸಿಮ್ಮಿಸಿ

ಫೆ. 28–2012 ಸಾರ್ವತ್ರಿಕ ಮುಷ್ಕರ

ಪುಟ 5 ರಿಂದ

ಸಂಘದ ಅಧ್ಯಕ್ಷರಾದ ಎಂ.ವಸಂತಕುಮಾರ್, ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್‌ನ ಮುಖಂಡರಾದ ವೈ.ಆರ್.ನಾಗರಾಜ್, ಬಸವರಾಜ್, ಗುತ್ತಿಗೆ ಕಾರ್ಮಿಕ ಸಂಘದ ಅಧ್ಯಕ್ಷರಾದ ಎಸ್.ಎ.ದೇವರಾಜ್, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಎಸ್.ಬಿ.ಶಿವಶಂಕರ್, ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಮುಖಂಡರಾದ ಸುರೇಶ್ ಮೊದಲಾದವರು ಪಾಲ್ಗೊಂಡು ಮಾತನಾಡಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೀಡಿದ ಕರೆಯಂತೆ ನವೆಂಬರ್ 8ರಂದು ಉಡುಪಿಯಲ್ಲಿ ಬೃಹತ್ ಮೆರವಣಿಗೆ ಮತ್ತು ಪ್ರಧಾನ ಅಂಚೆ ಕಚೇರಿಯ ಮುಂದೆ ಜೈಲ್ ಭರೋ ನಡೆಸಲಾಯಿತು. ಸಿಐಟಿಯು, ಎಐಟಿಯುಸಿ, ವಿಮಾ ನೌಕರರ ಸಂಘ, ಉಡುಪಿ ಜಿಲ್ಲಾ ಬ್ಯಾಂಕ್ ನೌಕರರ ಸಂಘ ಮತ್ತು ಬಿಎಸ್‌ಎನ್‌ಎಲ್ ನೌಕರರ ಸಂಘಗಳು ಜಂಟಿಯಾಗಿ ನಡೆಸಿ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡ 192 ಕಾರ್ಮಿಕರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯುನ ದೋಗುಸುವರ್ಣ, ಎಚ್.ವಿಠಲ ಪೂಜಾರಿ, ರಮೇಶ ಮೆಂಡನ್, ಎಐಟಿಯುಸಿಯ ಕೆ.ವಿ.ಭಟ್, ಸಂಜೀವ ಸೇರಿಗಾರ, ಬಿಎಸ್‌ಎನ್‌ಎಲ್ ನೌಕರರ ಸಂಘದ ಶಶಿಧರ ಗೊಲ್ಲ, ಉಡುಪಿ ಜಿಲ್ಲಾ ಬ್ಯಾಂಕ್ ನೌಕರರ ಸಂಘ ಯು.ಶಿವರಾಯ ಮತ್ತು ವಿಮಾ ನೌಕರರ ಸಂಘದ ಯು.ಗುರುದತ್ತ ಮತ್ತಿತರರು ಪಾಲ್ಗೊಂಡಿದ್ದರು. ಹುಬ್ಬಳ್ಳಿ-ಧಾರವಾಡ ಸಮಿತಿ ನೇತೃತ್ವದಲ್ಲಿ ಹುಬ್ಬಳ್ಳಿಯ ಡಾ॥ ಬಾಬಾಸಾಹೇಬ ಅಂಬೇಡ್ಕರ ವೃತ್ತದಿಂದ ಮೆರವಣಿಗೆ ನಡೆಸಿ ನಂತರ ಚನ್ನಮ್ಮ ಸರ್ಕಲ್‌ನಲ್ಲಿ ಸತ್ಯಾಗ್ರಹ ನಡೆಸಲಾಯಿತು.

ಸಿಐಟಿಯು ಅಧ್ಯಕ್ಷ ಆರ್.ಎಚ್.ಆಯಿ, ಎಚ್‌ಎಮ್‌ಎಸ್‌ನ ಎ.ಎಂ.ಡಿಕ್ರೂಸ್, ಬಿಎಂಎಸ್‌ನ ಎಂ.ಡಿ.ಸವಣೂರ, ಎಐಟಿಯುಸಿಯ ಎಂ.ಎಚ್.ಮುಲ್ಲಾ, ಐಎನ್‌ಟಿಯುಸಿಯ ಇಸೂಫ್ ಬಳ್ಳಾರಿ, ಎಐಯುಟಿಯುಸಿಯ ಕೃಷ್ಣ ದಾಸ್, ಬ್ಯಾಂಕ ನೌಕರರ ಸಂಘಟನೆಯ ಸ್ಟೀಫನ್ ಜಯಚಂದ್ರ, ವಿಮಾ ನೌಕರರ ಸಂಘಟನೆಯಿಂದ ಬಿ.ಎನ್.ಪೂಜಾರಿ, ಗ್ರಾಮೀಣ ಬ್ಯಾಂಕ ನೌಕರರ ಸಂಘಟನೆಯ ಜಿ.ಎಂ.ವೈದ್ಯ, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಸಿ.ಎಫ್.ಚಿಕ್ಕನಗೌಡರ, ಅ.ಭಾ.ಕಾಲೇಜು ಶಿಕ್ಷಕರ ಸಂಘದ ಡಾ॥ ಲಿಂಗರಾಜ ಅಂಗಡಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಸಂಚಾಲಕ ಮಹೇಶ ಪತ್ತಾರ ಮಾತನಾಡಿದರು.

ಸಿಐಟಿಯು, ಐಎನ್‌ಟಿಯುಸಿ, ಎಐಟಿಯುಸಿ, ಎಐಯುಟಿಯುಸಿ, ಬಿಎಂಎಸ್, ಎಚ್‌ಎಮ್‌ಎಸ್, ಬ್ಯಾಂಕ್, ವಿಮಾ, ಬಿಎಸ್‌ಎನ್‌ಎಲ್ ಹಾಗೂ ರಾಜ್ಯ ಸರಕಾರಿ ನೌಕರರ ಸಂಘಟನೆಗಳು ಈ ಮೆರವಣಿಗೆ, ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಇದಲ್ಲದೆ ಚಿಕ್ಕಬಳ್ಳಾಪುರ, ಮೈಸೂರು, ಹಾಸನ, ಬೆಳಗಾಂ, ಗುಲ್ಬರ್ಗಾ, ರಾಯಚೂರು, ಮಂಡ್ಯ, ಚಿತ್ರದುರ್ಗ, ಉತ್ತರಕನ್ನಡ, ಬಳ್ಳಾರಿ, ಕೊಪ್ಪಳ ಮೊದಲಾದ ಜಿಲ್ಲೆಗಳಲ್ಲಿ ಹೋರಾಟಗಳು ನಡೆದ ವರದಿಗಳು ಬಂದಿವೆ. ಬೆಂಗಳೂರು ಜಿಲ್ಲೆಯ ನೆಲಮಂಗಲ, ಪೀಣ್ಯ ಕೈಗಾರಿಕಾ ಪ್ರದೇಶ, ಹೆಬ್ಬಗೋಡಿ, ಹೊಸಕೋಟೆ, ಕೆ.ಆರ್.ಪುರ, ತುಮಕೂರು ಜಿಲ್ಲೆ, ಗುಬ್ಬಿ, ಸಿ.ಎನ್.ಹಳ್ಳಿ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ, ಕೋಲಾರ, ಹಾಸನ, ಮಂಡ್ಯ, ಬೆಳಗಾಂ, ಕೊಡಗು, ಮೈಸೂರು, ನಂಜನಗೂಡು, ಚಿತ್ರದುರ್ಗ, ಉತ್ತರಕನ್ನಡ ಜಿಲ್ಲೆಯ ಶಿರಸಿ, ಕಾರವಾರ, ಭಟ್ಕಳ, ಹೊನ್ನಾವರ, ಕುಮಟಾ, ಹಳಿಯಾಳ, ಬಳ್ಳಾರಿ, ದಾವಣಗೆರೆ ಮುಂತಾದ ಕಡೆಗಳಲ್ಲಿ ವಿವಿಧ ರಂಗದ ಕಾರ್ಮಿಕರು ಪ್ರತಿಭಟನೆಗಳನ್ನು ನಡೆಸಿ ಬಂಧನಕ್ಕೆ ಒಳಗಾಗಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ-2 ಸರಕಾರ ಹಿಂದೆ ಸರಿದರೆ ಕಾರ್ಪೊರೇಟ್ ವಲಯಕ್ಕೆ ಕಸಿವಿಸಿ !

ಕೊನೆಗೂ ಹತ್ತು ದಿನಗಳ ನಂತರವಾದರೂ ಯುಪಿಎ-2 ಸರಕಾರಕ್ಕೆ ವಿವೇಕೋದಯವಾಯಿತು. ಕಳೆದ ಬಾರಿಯಂತೆ ಸಂಸತ್ತಿನ ಚಳಿಗಾಲದ ಅಧಿವೇಶನ ಇಡಿಯಾಗಿ ಅದರ ಹಟಮಾರಿತನಕ್ಕೆ ಬಲಿಯಾಗಲಿಲ್ಲ. ಕೆಲವೇ ಗಂಟೆಗಳ ಮೊದಲು ಈ ಎಫ್‌ಡಿಐ ಗೆ ವಿರೋಧ ಸಂಕುಚಿತ ರಾಜಕೀಯದಿಂದಾಗಿ ಎಂದ ಯುಪಿಎ-2 ಹಣಕಾಸು ಮಂತ್ರಿಗಳು ಲೋಕಸಭೆಯಲ್ಲಿ ಹೇಳಿಕೆ ನೀಡುತ್ತ 'ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 51% ಎಫ್‌ಡಿಐಗೆ ಅನುಮತಿ ನೀಡುವ ನಿರ್ಣಯವನ್ನು, ಇದರ ಫಲಾಫಲಗಳಲ್ಲಿ ಭಾಗಿಯಾಗುವ ಎಲ್ಲರಲ್ಲೂ ಒಮ್ಮತ ಬೆಳೆದು ಬರುವ ವರೆಗೆ ಅಮಾನತುಗೊಳಿಸಲಾಗಿದೆ .. .. ಭಾಗೀದಾರರೆಂದರೆ ರಾಜ್ಯ ಸರಕಾರಗಳ ಮುಖ್ಯ ಮಂತ್ರಿಗಳು ಮತ್ತು ರಾಜಕೀಯ ಪಕ್ಷಗಳೂ ಸೇರಿವೆ, ಏಕೆಂದರೆ ರಾಜ್ಯ ಮುಖ್ಯ ಮಂತ್ರಿಗಳ ಪಾತ್ರವಿಲ್ಲದೆ ಇದನ್ನು ಎಂದೂ ಜಾರಿ ಗೊಳಿಸಲು ಸಾಧ್ಯವಿಲ್ಲ' ಎಂದರು. ರಾಜ್ಯ ಸಭೆಯಲ್ಲಿ ವಾಣಿಜ್ಯ ಮಂತ್ರಿಗಳು ಇಂತಹುದೇ ಹೇಳಿಕೆ ನೀಡಿದರು. ಇದರಿಂದ ಪ್ರಜಾಪ್ರಭುತ್ವವಾದಿಗಳು ತುಸು ನೆಮ್ಮದಿಯಿಂದ ಉಸಿರು ಬಿಡುವಂತಾಗಿದೆ.


ಆದರೆ ಭಾರತದ ಕಾರ್ಪೊರೇಟ್ ವಲಯಕ್ಕೆ ಇದರಿಂದ ಬಹಳ ಕಸಿವಿಸಿಯಾಗಿದೆ. ಕಳೆದ ಕೆಲವು ತಿಂಗಳಲ್ಲಿ ಯುಪಿಎ-2 ಸರಕಾರ ಜಡಗೊಂಡಿದೆ, ಅದನ್ನು ಚುರುಕುಗೊಳಿಸಬೇಕೆಂದು ಯುಪಿಎ-2 ಮಂತ್ರಿ-ಮಾಗಧರನ್ನು ಭೇಟಿಯಾಗಿ 'ಸಲಹೆ-ಸೂಚನೆ'ಗಳನ್ನು ಕೊಡುತ್ತಿದ್ದ ಈ ವಲಯದ ಭಾರೀ ಕುಳಗಳು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿಯಿಂದ ಹಿರಿ-ಹಿರಿ ಹಿಗ್ಗಿದ್ದರು; ತಮ್ಮನ್ನು ಈ ಇಪ್ಪತ್ತು ವರ್ಷಗಳಲ್ಲಿ ಕೊಬ್ಬಿಸಿದ ಆರ್ಥಿಕ ಉದಾರೀಕರಣಕ್ಕೆ ಹೊಸ ವೇಗ ಸಿಕ್ಕಿದೆ ಎಂದು ಕುಣಿದಾಡಿದ್ದರು. ಆದರೆ ಈಗ ಅವರು, ಅವರ ಮಾಧ್ಯಮ ತುತ್ತೂರಿಗಳು ಜೋಲು ಮೋರೆ ಹಾಕಿಕೊಂಡಿದ್ದಾರೆ; ಯುಪಿಎ-2 ಸರಕಾರಕ್ಕೆ, ಅದರಲ್ಲೂ ವೈಯಕ್ತಿಕವಾಗಿ 'ಇದು ಅವಸರದ ನಿರ್ಣಯವಲ್ಲ, ಬಹಳ ಯೋಚಿಸಿ ಕೈಗೊಂಡ ನಿರ್ಣಯ', ಆದ್ದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದಿದ್ದ ಪ್ರಧಾನ ಮಂತ್ರಿಗಳಿಗೆ ಇದೊಂದು ದೊಡ್ಡ ಸೋಲು ಎಂಬುದು ಅವರ ಕಸಿವಿಸಿಗೆ ಕಾರಣ. ದೇಶ ಒಂದು ಉತ್ತಮ ಅವಕಾಶ ಕಳಕೊಂಡಿದೆ ಎಂದು ಅವರು ಗೋಳಾಡುತ್ತಿದ್ದಾರೆ.

ಕಾರ್ಪೊರೇಟ್ ವಲಯದ ಕುಳಗಳ ಸಂಘಟನೆ ಫಿಕಿಯ ಮುಖ್ಯಸ್ಥರಿಗೆ ಇದು ಒಂದು 'ನಿರಾಶಾದಾಯಕ, ಪ್ರತಿಗಾಮಿ ಕ್ರಮ'ವಾಗಿ ಕಂಡರೆ, ಅವರ ಮತ್ತೊಂದು ಸಂಸ್ಥೆ ಸಿಐಐ ನ ಮಹಾ ನಿರ್ದೇಶಕರ ಪ್ರಕಾರ 'ಇದು ಹೂಡಿಕೆದಾರರ, ವಿದೇಶಿ ಹೂಡಿಕೆದಾರರ ಭಾವನೆಗಳನ್ನು ಕೂಡ ಬಲವಾಗಿ ನಕಾರಾತ್ಮಕವಾಗಿ ತಟ್ಟಲಿದೆ'. ಇನ್ನೊಂದು ದೊಡ್ಡ ಉದ್ದಿಮೆದಾರರ ಸಂಸ್ಥೆ ಅಸೋಚಾಂ ಪ್ರಕಾರ, ಇದರಿಂದ ದೇಶ ಒಂದು ಒಳ್ಳೆಯ ಅವಕಾಶವನ್ನು



ಇದೊಂದು ಸಂತಸದ ಸುದ್ದಿ. ಭಾರತದ ವ್ಯಾಪಾರಸ್ಥರು ಅಂಗಡಿಗಳನ್ನು ಮುಚ್ಚಿದ್ದಾರೆ. ದುಃಖದ ಸಂಗತಿಯೆಂದರೆ ಅವರುಬಂದೇ ಒಂದುದಿನ ಮಾತ್ರ ಮುಚ್ಚಿದ್ದಾರೆ

ಕಳಕೊಂಡಿದೆ, ಒಂದು ಜಾಗತಿಕ ಹೂಡಿಕೆಯ ಸ್ಥಳ ಎಂಬ ಅದರ ಪ್ರತಿಷ್ಠೆಗೆ ಕುಂದುಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಮುಖಂಡರೂ 'ಏನು ಮಾಡೋಣ, ಸಮ್ಮಿಶ್ರ ಸರಕಾರದಲ್ಲಿ ಇವೆಲ್ಲ ಇದ್ದದ್ದೇ' ಎಂದು ಅವರಿಗೆ ಸಮಜಾಯಿಷಿ ಕೊಡುತ್ತಿದ್ದಾರೆ. ಇವರಿಗೆಲ್ಲ,



ವೇದರಾಜ ಎನ್.ಕೆ.

ಯುಪಿಎ-2ಗೆ ಕೂಡ, ದೇಶ ಅಂದರೆ ಹಿಡಿಯಷ್ಟಿರುವ ಕಾರ್ಪೊರೇಟ್ ವಲಯ ಮಾತ್ರವೇ ತಾನೇ! ಕಾರ್ಪೊರೇಟ್ ವಲಯಕ್ಕೆ ಏನೇ ಕೊಟ್ಟರೂ ಅದು ಕೆಳಗೆ ತೊಟ್ಟಿಕ್ಕಿ 'ಆಮ್ ಆದ್ಮಿ'ಗೆ ಏನಾದರೂ ಸಿಗುತ್ತದೆ ಎಂಬುದು ಯುಪಿಎ-2 ಪ್ರಭೃತಿಗಳ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿರುವ ನವ-ಉದಾರವಾದಿ ನಂಬಿಕೆ!

★

ಭೋಪಾಲ ದುರಂತ: ಬಲಿಯಾದವರೆಷ್ಟು ಎಂದು ಇನ್ನೂ ಹೇಳಲಾರದ ಸರಕಾರ

ಡಿಸೆಂಬರ್ 3. 27 ವರ್ಷಗಳ ಹಿಂದೆ ಭೋಪಾಲದ ಯೂನಿಯನ್ ಕಾರ್ಬೈಡ್‌ನಲ್ಲಿ ಸಾವಿರಾರು ಜನಗಳನ್ನು ಬಲಿ ತೆಗೆದುಕೊಂಡ, ತೆಗೆದುಕೊಳ್ಳುತ್ತಿರುವ, ಇನ್ನೂ ಹತ್ತಾರು ಸಾವಿರ ಜನ ಜೀವಮಾನವಿಡೀ ನರಳುವಂತೆ ಮಾಡಿದ ವಿಷಾನಿಲ ಸೋರಿದ ದಿನ. 27 ವರ್ಷಗಳ ನಂತರವೂ ಈ ದುರಂತಕ್ಕೆ ಬಲಿಯಾದವರೆಷ್ಟು ಎಂಬ ಸರಿಯಾದ ಸಂಖ್ಯೆ ಅಲ್ಲಿಯ ರಾಜ್ಯ ಸರಕಾರಕ್ಕಾಗಲೀ, ಕೇಂದ್ರ ಸರಕಾರಕ್ಕಾಗಲೀ ಇದ್ದಂತಿಲ್ಲ. ಸರಿಯಾದ ಸಂಖ್ಯೆಯನ್ನು ಸುಪ್ರಿಂ ಕೋರ್ಟಿಗೆ ಕೊಡಿ ಎಂದು ಈ ದುರಂತದ 27ನೇ ವಾರ್ಷಿಕದಂದು ಆ ದುರಂತದಲ್ಲಿ ಬದುಕುಳಿದವರು ಕೇಳಿದರೆ ಅವರಿಗೆ ಸಿಕ್ಕಿದ್ದು ಲಾಟಿಏಟು. ಕೊನೆಗೆ ರೈಲ್ ರೋಕೋಗಿಳಿದಾಗಲೇ ಕಾಂಗ್ರೆಸ್ ಮುಖ್ಯಮಂತ್ರಿ ಪ್ರಧಾನ ಮಂತ್ರಿಗಳಿಗೆ ಬರೆಯುವುದಾಗಿ ಹೇಳಿದರು.

ಈ ಹಿಂದೆ ಸರಕಾರದ ಅಂಕಿ-ಅಂಶಗಳ ಪ್ರಕಾರ ಈ ದುರಂತಕ್ಕೆ ನೇರವಾಗಿ ಬಲಿಯಾದವರ ಸಂಖ್ಯೆ 3787. 2006ರಲ್ಲಿ ಸರಕಾರ ಕೊಟ್ಟ ಅಂಕಿ-ಅಂಶಗಳ ಪ್ರಕಾರ ಒಟ್ಟು 5,58,125 ಮಂದಿ ಗಾಯಗೊಂಡು, ಅವರಲ್ಲಿ 3900 ಮಂದಿ ಗಂಭೀರವಾಗಿ ಗಾಯಗೊಂಡವರು. ಇತ್ತೀಚೆಗೆ ರಾಜ್ಯ ಸರಕಾರ ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿದ ಅಫಿಡವಿಟ್ ಪ್ರಕಾರ ಸತ್ತವರ ಸಂಖ್ಯೆ 5295, ಖಾಯಂ ಅಂಗವಿಕಲರಾದವರು 4902. 35,455 ಮಂದಿಗೆ ತಾತ್ಕಾಲಿಕ ಅಂಗವಿಕಲತೆ ಹಾಗೂ 5,27,894 ಮಂದಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ. ಆದರೆ ಈ ದುರಂತದಲ್ಲಿ ಬದುಕುಳಿದವರು ಮತ್ತು ಇವರ ನಡುವೆ ಕೆಲಸ ಮಾಡುತ್ತಿರುವ ಸಂಘಟನೆಗಳ ಪ್ರಕಾರ ಕನಿಷ್ಟ 15,000 ಮಂದಿ ಸತ್ತಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಒಂದು ಅಧ್ಯಯನದ ಪ್ರಕಾರ 1985ರ ವೇಳೆಗೆ ಸತ್ತವರ ಸಂಖ್ಯೆ 2500, ನಂತರ 1985-93ರ ನಡುವೆ 9667 ಮಂದಿ ಸತ್ತರು. 1994-2001ರಲ್ಲಿ ಇದರ ಅರ್ಧದಷ್ಟು ಸತ್ತರು, 2002-09ರ ಅವಧಿಯಲ್ಲಿ ಮತ್ತೆ 7250 ಮಂದಿ ಸತ್ತಿರಬೇಕು. ಒಟ್ಟಾಗಿ ಈ ದುರಂತಕ್ಕೆ ಬಲಿಯಾದವರ ಸಂಖ್ಯೆ ಸುಮಾರು 23,000.

ಇನ್ನೊಂದು ಸಂಘಟನೆಯ ಅಂದಾಜಿನ ಪ್ರಕಾರ ಈ ದುರಂತದಲ್ಲಿ 15274 ಸಾವುಗಳು ಸಂಭವಿಸಿವೆ, ಗಾಯಗೊಂಡವರ ಸಂಖ್ಯೆ 5.73 ಲಕ್ಷ. ಇಷ್ಟು ಮಂದಿಯ ಪರಿಹಾರ ದಾವೆಗಳು

ಪುಟ 15 ಕ್ಕೆ

'ಭೂಸ್ವಾಧೀನ ಮಸೂದೆ': ಬಲಗೈಯಲ್ಲಿ ಕೊಟ್ಟು ಎಡಗೈಯಿಂದ ಕಿತ್ತುಕೊಳ್ಳುವ ಹುನ್ನಾರ

ಯುಪಿಎ-2 ಸರಕಾರ ಓಬೀರಾಯನ ಕಾಲದ, ಬ್ರಿಟಿಶರು ಶೋಷಣೆಗೆಂದೇ ತಂದ ಭೂಸ್ವಾಧೀನ ಕಾನೂನು, 1894ರ ಬದಲು ಹೊಸದೊಂದು ಕಾನೂನಿನ ಕರಡು ಮುಂದಿಟ್ಟಿದೆ. ಆದರೆ ಅದರ ನವ-ಉದಾರವಾದಿ ತೆವಲುಗಳು ಇದನ್ನು ಕೂಡ ರೈತಾಪಿ ಜನಗಳನ್ನು ವಂಚಿಸುವ ಇನ್ನೊಂದು ಉದಾಹರಣೆಯಾಗಿ ಮಾಡಿ ಬಿಟ್ಟಿವೆ. ಒಟ್ಟಾರೆಯಾಗಿ ಭೂಸ್ವಾಧೀನ ತಟ್ಟುವ 80ಶೇ. ಜನರ ಒಪ್ಪಿಗೆ ಪಡೆಯಬೇಕು, ಸಾಮಾಜಿಕ ಪರಿಣಾಮದ ಅಂದಾಜು ಮಾಡಬೇಕು, ಗ್ರಾಮ ಸಭಾ ಅಥವ ನಗರಗಳಲ್ಲಿ ಅಂತಹ ಪ್ರತಿನಿಧಿ ಸಂಸ್ಥೆಗಳೊಡನೆ ಸಮಾಲೋಚನೆ ನಡೆಸಬೇಕು, ಆಹಾರ ಭದ್ರತೆ, ಹೆಚ್ಚಿನ ಪರಿಹಾರ, ಪುನರ್ವಸತಿಯ ಬಗ್ಗೆ ಗಮನ ನೀಡಬೇಕು ಎಂದೆಲ್ಲಾ ಹೇಳಿದರೂ, ಈ ಮಸೂದೆ ಇವೆಲ್ಲ ಕ್ರಮಗಳಿಂದ ಎಷ್ಟೊಂದು ವಿನಾಯ್ತಿಗಳನ್ನು ನೀಡಿದೆಯೆಂದರೆ, ಹಲವಾರು ಭೂಸ್ವಾಧೀನ ಕ್ರಮಗಳಿಗೆ ಇವೆಲ್ಲ ಅನ್ವಯವಾಗುವುದೇ ಇಲ್ಲ, ಸರಕಾರ ಬಲಗೈಯಲ್ಲಿ ಕೊಟ್ಟು ಎಡಗೈಯಿಂದ ಅವನ್ನೆಲ್ಲ ಕಿತ್ತುಕೊಂಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಟಿಪ್ಪಣಿ ಮಾಡಿದೆ.

ಈ ಮಸೂದೆ ಮೂರು ರೀತಿಯ ವಿನಾಯ್ತಿಗಳನ್ನು ಕೊಟ್ಟು ಅಂತಹ ಭೂಸ್ವಾಧೀನಗಳಿಗೆ ಈ ಕಾನೂನು ಅನ್ವಯವಾಗುವುದಿಲ್ಲ ಎಂದಿದೆ. ಮೊದಲನೆಯದಾಗಿ, ಹದಿನಾರು ಪ್ರಮುಖ ಕಾನೂನುಗಳ ಪ್ರಕಾರ ನಡೆಯುವ ಭೂಸ್ವಾಧೀನಕ್ಕೆ ಇದು ಅನ್ವಯವಾಗುವುದಿಲ್ಲವಂತೆ, ಅಲ್ಲದೆ ಸರಕಾರ ಅಧಿಸೂಚನೆ ಕೊಟ್ಟು ಈ ಪಟ್ಟಿಗೆ ಇನ್ನಷ್ಟು ಕಾನೂನುಗಳನ್ನು ಸೇರಿಸಬಹುದಂತೆ. ಎರಡನೆಯದಾಗಿ, ತುರ್ತು ಸಂದರ್ಭಗಳಲ್ಲಿ ಈ ಮಸೂದೆಯಲ್ಲಿ ಹೇಳಿರುವ ವಿಧಾನಗಳನ್ನು ಅನುಸರಿಸದೆಯೇ ಭೂಸ್ವಾಧೀನ ಮಾಡಿಕೊಳ್ಳುವ ವಿಪರೀತ ಅಧಿಕಾರವನ್ನು ಸರಕಾರಕ್ಕೆ ಕೊಡಲಾಗಿದೆ. ಮೂರನೆಯದಾಗಿ, ಸರಕಾರಕ್ಕೆ, ಅಂದರೆ ಜಿಲ್ಲಾ ಕಲೆಕ್ಟರಿಗೆ ಸಾರ್ವಜನಿಕ ಉದ್ದೇಶಕ್ಕಾಗಿ ಮಾತ್ರವಲ್ಲ, ಖಾಸಗಿಯವರಿಗಾಗಿಯೂ ಭೂಮಿಯನ್ನು ತಾತ್ಕಾಲಿಕವಾಗಿ ಮೂರು ವರ್ಷಗಳ ವರೆಗೆ ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ನೀಡಲಾಗಿದೆ.

ಅಂದರೆ ಸುಮಾರಾಗಿ ಎಲ್ಲ ಭೂಸ್ವಾಧೀನ ಪ್ರಕ್ರಿಯೆಗಳಿಗೆ ವಿನಾಯ್ತಿ ನೀಡುವ ಈ ಮಸೂದೆ ಬಾಸ್ತವವಾಗಿ ಒಂದು ವಂಚನೆಯ ಕಸರತ್ತು ಎಂದು ಪ್ರಜಾಪ್ರಭುತ್ವವಾದಿಗಳು ಸಂದೇಹ ಪಡುತ್ತಿದ್ದಾರೆ, 1894ರ ಹಳಸಲು ಕಾನೂನಿನಂತೆಯೇ ರೈತರ ಶೋಷಣೆಯನ್ನು ಮುಂದುವರೆಸುವ ಇದು ವಾಸ್ತವವಾಗಿ ಕಾರ್ಪೊರೇಟ್ ವಲಯಕ್ಕೆ, ರಿಯಲ್ ಎಸ್ಟೇಟ್ ಕುಳಗಳಿಗೆ ಭೂಮಿಯನ್ನು ವಹಿಸಿಕೊಡುವುದನ್ನು ಸರಳಗೊಳಿಸುವ ಪ್ರಯತ್ನ ಎಂದು ಕಾಣ ಬರುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ

ಶರತ್‌ಚಂದ್ರ

ಅರಬ್ ಚುನಾವಣಾ ಫಲಿತಾಂಶಗಳ ಅರ್ಥವೇನು?

'ಅರಬ್ ವಸಂತ' ಎಂದು ಕರೆಯಲಾಗುತ್ತಿರುವ ಪ್ರಜಾಪ್ರಭುತ್ವಕ್ಕಾಗಿ ನಡೆದ ಭಾರೀ ಚಳುವಳಿಗಳ ಪರಿಣಾಮವಾಗಿ, ಚುನಾವಣೆಗಳು ನಡೆಯಲಾರಂಭಿಸಿದ್ದು ಮಂದಗಾಮಿ ಇಸ್ಲಾಮಿಕ್ ಪಕ್ಷಗಳು ಜಯ ಗಳಿಸುತ್ತಿವೆ. ಮೊರೊಕ್ಕೊದಲ್ಲಿ ನಡೆದ ಚುನಾವಣೆಗಳಲ್ಲಿ ಇಸ್ಲಾಮಿಕ್ ಪಕ್ಷವಾದ 'ಸ್ವಾತಂತ್ರ್ಯ ಮತ್ತು ನ್ಯಾಯ ಪಕ್ಷ' (Freedom and Justice Party) ಮೊದಲ ಸ್ಥಾನದಲ್ಲಿದ್ದು ಅದರ ನಾಯಕ ಅಬ್ದೆಲಿಲಾ ಬೆಂಕಿರಾನ್ ಅವರನ್ನು ಪ್ರಧಾನಿಯಾಗಿ ನೇಮಿಸಲಾಗಿದೆ. ಅವರು ಒಂದು ಸಮ್ಮಿಶ್ರ ಸರ್ಕಾರವನ್ನು ರಚಿಸಲಿದ್ದಾರೆ. ಜುಲೈನಲ್ಲಿ ನಡೆದ ಜನಮತಸಂಗ್ರಹದ ನಿರ್ಧಾರದಿಂದಾಗಿ ಪ್ರಧಾನಿ ಹಿಂದಿನಂತೆ ಆಲಂಕಾರಿಕ ಹುದ್ದೆ ಆಗಿರದೆ, ಸರ್ಕಾರ ರಚಿಸಿ ಆಳುವ ನಿಜವಾದ ಅಧಿಕಾರವನ್ನು ಹೊಂದಿದೆ. ಮಾತ್ರವಲ್ಲ ರಾಜ ಬಹುಮತ ಇರುವ ಪಕ್ಷ ಅಥವಾ ಪಕ್ಷಗಳ ಕೂಟವನ್ನು ಪ್ರಧಾನಿಯಾಗಿ ನೇಮಿಸಲೇಬೇಕು. ಮೊರೊಕ್ಕೊದಲ್ಲಿ ಬೇರೆ ದೇಶಗಳಂತೆ ಸರ್ವಾಧಿಕಾರಿ ಅಥವಾ ರಾಜನನ್ನು ಉರುಳಿಸಿಲ್ಲ. 'ಅರಬ್ ವಸಂತ'ದ ಶಕ್ತಿಯನ್ನು ಬೇಗನೇ ಗ್ರಹಿಸಿದ ರಾಜ ಚುನಾವಣೆಗೆ ಅನುವು ಮಾಡಿಕೊಟ್ಟ.

ಇದಕ್ಕಿಂತ ಮೊದಲು ಟುನಿಶಿಯಾದ ಚುನಾವಣೆಗಳಲ್ಲೂ ಎನ್ನಾಹ್ದಾ ಎಂಬ ಇಸ್ಲಾಮಿಕ್ ಪಕ್ಷ ಶೇ. 41 ಮತ ಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿ, ಸರ್ಕಾರ ರಚಿಸಿದೆ. ಟುನಿಶಿಯಾದ ಜನತೆ ಸರ್ವಾಧಿಕಾರಿ ಬೆನ್ ಅಲಿಯನ್ನು ಭಾರೀ ದಂಗೆಗಳ ಮೂಲಕ ಓಡಿಸಿ 'ಅರಬ್ ವಸಂತ' ಆರಂಭಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇದೇ ಟುನಿಶಿಯಾ ಅರಬ್ ಜಗತ್ತಿನಲ್ಲಿ ಮಂದಗಾಮಿ ಇಸ್ಲಾಮಿಕ್ ಪಕ್ಷಗಳ ಜಯದ ಹೊಸ 'ಟ್ರೆಂಡ್' ಆರಂಭಿಸಿದಂತೆ ಕಾಣುತ್ತಿದೆ. ಈಜಿಪ್ಟಿನಲ್ಲಿ ಆರಂಭವಾದ ಚುನಾವಣೆಗಳಲ್ಲೂ ಮೊದಲ ಸುತ್ತಿನಲ್ಲಿ 'ಮುಸ್ಲಿಂ ಬ್ರದರ್ ಹುಡ್' ಸಂಘಟನೆಯ ರಾಜಕೀಯ ವಿಭಾಗವಾದ 'ಸ್ವಾತಂತ್ರ್ಯ ಮತ್ತು ನ್ಯಾಯ ಪಕ್ಷ' (Freedom and Justice Party) ಮೊದಲ ಸ್ಥಾನದಲ್ಲಿದೆ ಎಂದು ವರದಿಯಾಗಿದೆ. ಮುಂದೆ ಚುನಾವಣೆಗಳು ನಡೆದರೆ ಯೆಮೆನ್, ಸಿರಿಯಾ, ಜೋರ್ಡಾನ್ ಮುಂತಾದ ದೇಶಗಳಲ್ಲೂ ಮಂದಗಾಮಿ ಇಸ್ಲಾಮಿಕ್ ಪಕ್ಷಗಳ ಪ್ರಮುಖ ಸ್ಥಾನ ಇರುವ ಸರ್ಕಾರಗಳು ಅಧಿಕಾರಕ್ಕೆ ಬರುವ ಸಾಧ್ಯತೆಗಳು ಹೆಚ್ಚು ಎನ್ನಲಾಗಿದೆ.

ಸರ್ವಾಧಿಕಾರಗಳು 'ತೊಲಗಿ' – ಜನತೆಯ ಆದ್ಯತೆ

ಈಜಿಪ್ಟಿನ ಚುನಾವಣೆಗಳ ಮೊದಲು ಮುಬಾರಕ್ ಪದಚ್ಯುತಿ ನಂತರ ಬಂದ ಮಿಲಿಟರಿ ಸರ್ಕಾರ ಮುಬಾರಕ್ ಮಾದರಿಯ ದಮನಕಾರಿ ಸರ್ವಾಧಿಕಾರಿ ಧೋರಣೆ ಮುಂದುವರೆಸುವುದನ್ನು ವಿರೋಧಿಸಿ ತಾಹ್ರಿರ್ ಚೌಕದಲ್ಲಿ ಪುನಃ ಭಾರೀ ಪ್ರತಿಭಟನೆಗಳು ನಡೆದಿವೆ. ಈ ಪ್ರತಿಭಟನೆ ಮಟ್ಟ ಹಾಕಲು ಸರ್ಕಾರ ನಡೆಸಿದ ಪ್ರಯತ್ನಗಳಿಂದ ಭಾರೀ ಸಾವು–ನೋವುಗಳು ಸಂಭವಿಸಿವೆ. ಮೊದಲ ಐದು ದಿನಗಳಲ್ಲೇ 38 ಜನ ಸತ್ತು, ಸಾವಿರಾರು ಜನ ಗಾಯಗೊಂಡರು. ಆದರೂ ತಾಹ್ರಿರ್ ಚೌಕ ಖಾಲಿ ಮಾಡಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಚೌಕದಿಂದ ಜನ ಹಿಮ್ಮೆಟ್ಟಲಿಲ್ಲ. ಬದಲಾಗಿ ಸರ್ಕಾರ ದಮನಕಾರಿ ನೀತಿ ಸಡಿಲಿಸುವ ಇನ್ನಷ್ಟು ಕ್ರಮಗಳನ್ನು ಘೋಷಿಸಬೇಕಾಯಿತು. ಚುನಾವಣೆಯ ನಂತರ ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರ ಪ್ರತಿಭಟನಾಕಾರರ ಮುಖ್ಯ ಬೇಡಿಕೆ ಆಗಿತ್ತು. ದಮನದ ನಂತರ ಮಿಲಿಟರಿ ಸರ್ಕಾರದ ಪ್ರತಿನಿಧಿಗಳು ಪ್ರತಿಭಟನಾಕಾರರನ್ನು ಸಮಾಧಾನಪಡಿಸಲು ಬಂದಾಗಲೆಲ್ಲ 'ತೊಲಗಿ..ತೊಲಗಿ' ಎಂಬ ಘೋಷಣೆಗಳು ಕೇಳಿ ಬಂದವು.

ಈಜಿಪ್ಟಿನ ಚುನಾವಣೆಗಳಲ್ಲಿ 'ಸ್ವಾತಂತ್ರ್ಯ ಮತ್ತು ನ್ಯಾಯ ಪಕ್ಷ' ಮೊದಲ ಸ್ಥಾನದಲ್ಲಿದ್ದು ಸಲಾಫಿಸ್ಟ್ ಪಕ್ಷ ಎಂಬ ತೀವ್ರಗಾಮಿ ಪಕ್ಷ ಎರಡನೇ ಸ್ಥಾನದಲ್ಲಿದೆ. ಕೆಲವು ಕಡೆ ಎಡ ಮತ್ತು ಜಾತ್ಯತೀತವಾದಿ ಪಕ್ಷಗಳು ಗೆದ್ದಿವೆ. ಇದು ಮೊದಲ ಹಂತವಾಗಿದ್ದು, ಜನವರಿ ವರೆಗೆ ಹಲವು ಹಂತಗಳ ಚುನಾವಣೆ ನಡೆಯಲಿದೆ. ಆದರೆ 'ಸ್ವಾತಂತ್ರ್ಯ ಮತ್ತು ನ್ಯಾಯ ಪಕ್ಷ' ಈಜಿಪ್ಟಿನ ಮುಂದಿನ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂಬುದು ಹೆಚ್ಚು ಕಡಿಮೆ ಖಚಿತವಾಗಿದೆ. ಇದು ಪ್ರಜಾಪ್ರಭುತ್ವ ಚಳುವಳಿಯಲ್ಲಿ, ಜಾತ್ಯತೀತರಲ್ಲಿ, ಅಲ್ಪಸಂಖ್ಯಾತರಲ್ಲಿ, ಪ್ರಗತಿಪರರಲ್ಲಿ ಎಡಪಂಥೀಯರಲ್ಲಿ, ಮಹಿಳೆ ಹಕ್ಕುಗಳ ಬೆಂಬಲಿಗರಲ್ಲಿ ಆತಂಕ ತಂದಿದೆ. ಪ್ರಜಾಪ್ರಭುತ್ವದ ಬದಲು, ಶರೀಯತ್ ಆಧಾರಿತ ಇರಾನಿಯನ್ ಮಾದರಿಯ ಇಸ್ಲಾಮಿಕ್ ಸರ್ವಾಧಿಕಾರ ಸ್ಥಾಪಿತವಾಗುವುದೇ ಎಂಬುದು ಅವರ ಆತಂಕಕ್ಕೆ ಕಾರಣ. ಚುನಾವಣೆಯ ನಂತರ ಸರ್ಕಾರ ರಚನೆಗೆ ಸಲಾಫಿಸ್ಟ್ ತೀವ್ರಗಾಮಿಗಳ ಬೆಂಬಲ ಅಗತ್ಯವಾದರೆ ಈ ಆತಂಕ ನಿರಾಧಾರವೇನಲ್ಲ. ಸಲಾಫಿಸ್ಟ್ ತೀವ್ರಗಾಮಿಗಳು ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಹಕ್ಕುಗಳ ಮೇಲೆ ಈಗಾಗಲೇ ಹಲವು ಬಾರಿ ತೀವ್ರ ಹಲ್ಲೆ ನಡೆಸಿದ್ದಾರೆ.

ಟರ್ಕಿಶ್ ಮಾದರಿ

ಈ ಆತಂಕ ನಿವಾರಿಸಲು 'ಸ್ವಾತಂತ್ರ್ಯ ಮತ್ತು ನ್ಯಾಯ ಪಕ್ಷ' ದ ವಕ್ತಾರರು, ನಮ್ಮದು ಇರಾನಿಯನ್ ಮಾದರಿಯಲ್ಲ ಟರ್ಕಿಶ್ ಮಾದರಿ ಎಂದು ಸಮಜಾಯಿಷಿ ಕೊಟ್ಟಿದ್ದಾರೆ. ಶರೀಯತ್ ಜಾರಿ ಮಾಡುತ್ತೇವೆ ಎಂದು ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಗಾಬರಿಯಾಗಬೇಕಾಗಿಲ್ಲ. ಎಲ್ಲಾ ಜನವಿಭಾಗಗಳಿಗೂ ಹಕ್ಕುಗಳಿರುವ ನ್ಯಾಯ ಒದಗಿಸುವ, ಹಲವು ರಾಜಕೀಯ ಅಭಿಪ್ರಾಯಗಳಿಗೆ ಮನ್ನಣೆ ಇರುವ ಬಹುಪಕ್ಷೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ. ಹಿಂಸಾಚಾರಕ್ಕೆ ಸ್ಥಾನ ಇಲ್ಲ. ಎಡ ಮತ್ತು



ಜಾತ್ಯತೀತ ಶಕ್ತಿಗಳ ಜತೆ ಸಂವಾದ ಮತ್ತು ಸಮ್ಮಿಶ್ರ ಸರ್ಕಾರಕ್ಕೂ ನಾವು ಸಿದ್ಧ ಎಂದಿದ್ದಾರೆ.

ಇದು ಚುನಾವಣೆಯ ಮೊದಲಿನ ಬರಿಯ ಹುಸಿ ಭರವಸೆ ಎಂದು ಕೊಳ್ಳಬೇಕಾಗಿಲ್ಲ. ಕಳೆದ ಕೆಲವು ದಶಕಗಳ ಇಸ್ಲಾಮಿಕ್ ರಾಜಕೀಯದ ವಿಕಾಸವನ್ನು ಒಟ್ಟಾರೆಯಾಗಿ ನೋಡಿದರೆ, ಹೆಚ್ಚಿನ ಅರಬ್ ದೇಶಗಳ ಇಸ್ಲಾಮಿಕ್ ಪಕ್ಷಗಳು ಟರ್ಕಿಶ್ ಮಾದರಿಯನ್ನು ಅಂಗೀಕರಿಸಿವೆ. ಇರಾನಿ ಮಾದರಿಯಾಗಲಿ ಮತ್ತು ಅಲ್ಜೀರಿಯಾ, ಲೆಬನಾನ್–ಪ್ಯಾಲೆಸ್ಟೈನುಗಳಲ್ಲಿ ಅನುಸರಿಸಿದ ತೀವ್ರಗಾಮಿ ಹಿಂಸಾತ್ಮಕ ಮಾದರಿಯನ್ನು ಎಚ್ಚೆತ್ತ ಅರಬ್ ಜನತೆ ಒಪ್ಪಿಕೊಳ್ಳುವುದಿಲ್ಲ. ಜನತೆ ಯಾವುದೇ ರೂಪದಲ್ಲಿ ಸರ್ವಾಧಿಕಾರ ಸಹಿಸುವುದಿಲ್ಲ. ಅಂತರ್‍ರಾಷ್ಟ್ರೀಯವಾಗಿಯೂ ಈ ಮಾದರಿಗಳು ಕಾರ್ಯಸಾಧ್ಯವಲ್ಲ. 2002 ರಿಂದ ಸಫಲವಾಗಿ ಜಾರಿಯಾಗಿರುವ ಟರ್ಕಿಶ್ ಮಾದರಿ ಒಂದೇ ಕಾರ್ಯಸಾಧ್ಯ ಮಾದರಿ ಎಂದು ಮನಗಂಡಿವೆ.

ಅರಬ್ ಜನತೆಯ ತೀರ್ಪಿನ ಅರ್ಥ ಏನು ?

ಹಲವು ದಶಕಗಳಿಂದ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದಲ್ಲಿ ಎಡ–ಜಾತ್ಯತೀತ ಮತ್ತು ಇಸ್ಲಾಮಿಕ್ ರಾಜಕೀಯ ಶಕ್ತಿಗಳು ಪೈಪೋಟಿಯಲ್ಲಿವೆ. 1950 ರಿಂದ 1970 ರ ದಶಕದ ವರೆಗೆ ಎಡ–ಜಾತ್ಯತೀತ ರಾಜಕೀಯ ಶಕ್ತಿಗಳು ಪ್ರಧಾನವಾಗಿದ್ದು ಅಧಿಕಾರ ವಹಿಸಿದ್ದವು. 1980 ರ ದಶಕದಿಂದ ಈಚೆಗೆ ಈ ಸರ್ಕಾರಗಳು–ರಾಜಕೀಯ ಪಕ್ಷಗಳು ತಮ್ಮ ಸಾಮ್ರಾಜ್ಯಶಾಹಿ–ವಿರೋಧಿ ಪ್ರಗತಿಪರ ಪಾತ್ರ ಬಿಟ್ಟುಕೊಟ್ಟು ಸರ್ವಾಧಿಕಾರದ ಹಾದಿ ಹಿಡಿದವು. ಇದು ಈಜಿಪ್ಟ, ಸಿರಿಯಾ, ಇರಾಕ್, ಯೆಮೆನ್, ಲಿಬ್ಯಾ ಮುಂತಾದ ದೇಶಗಳಲ್ಲಿ ನಡೆಯಿತು. ಈ ನಡುವೆ ನೈಜ ಎಡ–ಜಾತ್ಯತೀತ (ಅಧಿಕಾರಕ್ಕೆ ಬಂದ ಅಥವಾ ವಿರೋಧ ಪಕ್ಷವಾಗಿದ್ದ) ಶಕ್ತಿಗಳನ್ನು ಸಾಮ್ರಾಜ್ಯಶಾಹಿ ಬಗ್ಗು ಬಡಿಯಿತು ಅಥವಾ ತೀರಾ ದುರ್ಬಲಗೊಳಿಸಿತು. ಸೋವಿಯೆಟ್ ಒಕ್ಕೂಟದ ವಿರುದ್ಧ ಇಸ್ಲಾಮಿಕ್ ಶಕ್ತಿಗಳ ಒಂದು ವಿಭಾಗವನ್ನು (ಅಲ್ ಖೈದಾ ದಂತಹ) ಜೆಹಾದಿ ಮೂಲಭೂತವಾದದತ್ತ ತಿರುಗಿಸಿತು. ಈ ಜೆಹಾದಿಗಳನ್ನು ಜಾತ್ಯತೀತ ಪ್ರಗತಿಪರ ಮತ್ತು ಸರ್ವಾಧಿಕಾರ ಎರಡೂ ಮಾದರಿಯ ಸರ್ಕಾರಗಳನ್ನು, ಎಡ–ಜಾತ್ಯತೀತ ಚಳುವಳಿಗಳನ್ನು ನಿಯಂತ್ರಣದಲ್ಲಿಡಲು ಬಳಸಿತು. 2001 ಸೆಪ್ಟೆಂಬರ್ ನಂತರ ಇದೇ ಜೆಹಾದಿಗಳ 'ಭೂತ' ಬಳಸಿ ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳನ್ನು ಬಗ್ಗು ಬಡಿಯಲು ಬಳಸಿಕೊಳ್ಳುತ್ತಿದೆ. ಹಲವು ಅರಬ್ (ಅದರಲ್ಲೂ ಹೆಚ್ಚಾಗಿ ಜಾತ್ಯತೀತ) ಸರ್ವಾಧಿಕಾರಿಗಳೂ ಎಲ್ಲಾ ವಿರೋಧಿ ಶಕ್ತಿಗಳನ್ನು 'ಜೆಹಾದಿ' ಎಂಬ ಬಣ್ಣ ಹೊಡೆದು ಅಪಪ್ರಚಾರ ನಡೆಸಿವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಜನತೆ ಮಂದಗಾಮಿ ಇಸ್ಲಾಮಿಕ್ ಪಕ್ಷಗಳನ್ನು ಬೆಂಬಲಿಸಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ಇದರರ್ಥ ಅವರು ಇಸ್ಲಾಮಿಕ್ ಮೂಲಭೂತವಾದವನ್ನು ಅಥವಾ ಜೆಹಾದಿ ಹಿಂಸಾಚಾರವನ್ನು ಬೆಂಬಲಿಸುತ್ತಾರೆ ಎಂದಾಗಲಿ, ಇರಾನ್ ಮಾದರಿಯ ಇಸ್ಲಾಮಿಕ್ ಪ್ರಭುತ್ವ ಬಯಸುತ್ತಾರೆ ಎಂದಾಗಲಿ ಖಂಡಿತ ಅಲ್ಲ. ಸಾಮ್ರಾಜ್ಯಶಾಹಿಯ ಬಂಟರೂ ಆಗಿರುವ ಸರ್ವಾಧಿಕಾಗಳನ್ನು ತೊಲಗಿಸುವುದು ಅವರ ಪ್ರಮುಖ ಆದ್ಯತೆ. ಇದಕ್ಕೆ ತಕ್ಷಣಕ್ಕೆ ಕಾರ್ಯಸಾಧ್ಯ ರಾಜಕೀಯ ಶಕ್ತಿ ಮಂದಗಾಮಿ ಇಸ್ಲಾಮಿಕ್ ಪಕ್ಷಗಳು ಎಂದು ನಿರ್ಧರಿಸಿದ್ದಾರೆ. ಈ ಶಕ್ತಿಗಳು ಅಧಿಕಾರಕ್ಕೆ ಬಂದ ಮೇಲೆ ಬಣ್ಣ ಬದಲಾಯಿಸಿ ಸರ್ವಾದಿಕಾರ ನಡೆಸಲು ಅಥವಾ ಸಾಮ್ರಾಜ್ಯಶಾಹಿ ಜತೆ ರಾಜಿ ಮಾಡಿಕೊಳ್ಳುವುದನ್ನು ಎಚ್ಚೆತ್ತ ಜನತೆ ಬಿಡುವುದಿಲ್ಲ ಎಂಬುದು ತಾಹ್ರಿರ್ ಚೌಕದ ಎರಡನೇ ಸುತ್ತಿನ ದಂಗೆಯಿಂದ ಸ್ಪಷ್ಟವಾಗಿದೆ. ○

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಯ್ಯಾರೆಡ್ಡಿ ಸಂದರ್ಶನ....

ಪುಟ 10 ರಿಂದ

0 ರಷ್ಟು ಜನರು ಸಣ್ಣ ಮತ್ತು ಅತಿ ಸಣ್ಣ ರೈತರು. ಶೇ. 70 ಜನರ ಕೈಯಲ್ಲಿರುವ ಭೂಮಿಯು ಕಡಿಮೆ. ಶೇ. 25 ರಷ್ಟು ಭೂಮಿಯೂ ಅವರ ಕೈಯಲ್ಲಿ ಇಲ್ಲ. ಇವತ್ತಿನ ಕೃಷಿ ಬಿಕ್ಕಟ್ಟಿನ ಮೂಲ ಪ್ರಶ್ನೆ ಭೂಮಿ. ಭೂಮಿ ಯಾರು ದುಡಿಮೆ ಮಾಡುವರೋ ಅವರ ಕೈಯಲ್ಲಿ ಇಲ್ಲ. ಇಂದು ನೈಸ್ ಕಂಪನಿಯಂತಹ ಕಂಪನಿಗಳು, ಮಠಗಳು, ಶಿಕ್ಷಣ ಸಂಸ್ಥೆಗಳ ಒಡೆತನದಲ್ಲಿ ನೂರಾರು, ಸಾವಿರಾರು ಎಕರೆ ಭೂಮಿ ಕೃಷಿಗೆ ಬಳಕೆಯಾಗದೆ ವ್ಯರ್ಥವಾಗಿದೆ. ಕಾನೂನುಬದ್ದವಾಗಿ ಅಲ್ಲದೇ ಅಕ್ರಮವಾಗಿಯೂ ದೊಡ್ಡ ಪ್ರಮಾಣದ ಭೂಮಿಯನ್ನು ವಶದಲ್ಲಿ ಇಟ್ಟುಕೊಳ್ಳಲಾಗಿದೆ. ನೈಸ್ ಕಂಪನಿಗೆ ಅಗತ್ಯ ಮೀರಿ ಸಾವಿರಾರು ಎಕರೆ ಭೂಮಿಯನ್ನು ಕೊಡಲಾಗಿದೆ. ಇದಲ್ಲದೇ ನೈಸ್ ರಸ್ತೆ ಇರುವ ಸುತ್ತ ಮುತ್ತ ನೈಸ್ ಕಂಪನಿಯು ಸುಮಾರು 0,000 ಸಾವಿರ ಎಕರೆ ಭೂಮಿಯನ್ನು ಅಕ್ರಮವಾಗಿ ಬೇನಾಮಿಯಾಗಿ ಖರೀದಿ ಮಾಡಿದೆಯೆಂಬ ಮಾಹಿತಿಗಳಿವೆ. ಅಂದರೆ ನೈಸ್ ಕಂಪನಿಯ ಹಿಡಿತದಲ್ಲೇ ಸುಮಾರು 50 ಸಾವಿರ ಎಕರೆಗಿಂತ ಹೆಚ್ಚು ಭೂಮಿ ಕೇಂದ್ರೀಕರಣವಾಗಿದ್ದು ನೈಸ್ ಮಾಲಿಕ ಖೇಣಿ ಕರ್ನಾಟಕ ರಾಜ್ಯದ ನಂ.1 ಬಂಡವಾಳಶಾಹಿ ಭೂ ಮಾಲಿಕನಾಗಿದ್ದಾನೆ. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಭೂ ಮಾಲಕರ ಕೈಲಿ ಭೂಮಿ ಕೇಂದ್ರೀಕರಣಗೊಂಡಿದೆ. ರೈತರ ಕೈಲಿ ತುಂಡು ಭೂಮಿ ಇದೆ.

ಸಣ್ಣ ರೈತರು ತುಂಡು ತುಂಡು ಭೂಮಿ ಇಟ್ಟುಕೊಳ್ಳುವುದು ಅನುಕೂಲಕರ ಅಲ್ಲ... ಅವರ ಬಳಿ ತಂತ್ರಗ್ನಾನ ಇಲ್ಲ... ನೈಪುಣ್ಯತೆ ಇಲ್ಲ... ಮಾರುಕಟ್ಟೆ ಗೊತ್ತಿಲ್ಲ. ...ಆ ಕಾರಣದಿಂದಲೇ ಬಡವರಾಗಿ ಉಳಿದಿದ್ದಾರೆ. ಒಡೆತನದಲ್ಲಿರುವವರಿಗೆ ಬಂಡವಾಳ ಕೊಟ್ಟು, ಆಧುನಿಕ ತಂತ್ರಗ್ನಾನ ಕೊಟ್ಟು ಅಭಿವೃದ್ಧಿಯಲ್ಲಿ ಪಾಲು ಕೊಡಲಾಗುವುದು. ಅದಕ್ಕಾಗಿ ಗುತ್ತಿಗೆ ಕೃಷಿ ...ಬೆಳೆದವರಿಗೆ ಪಾಲು ಸಿಗುತ್ತದೆ.. ಅನುಪಯುಕ್ತ ಭೂಮಿ ಪ್ರಯೋಜನಕ್ಕೆ ಆಗುವಂತೆ, ಲಾಭ ತರುವಂತೆ ಮಾಡುತ್ತೇವೆ.....ಎಂಬ ವಾದಗಳನ್ನು ಮುಂದೆ ಇಡಲಾಗುತ್ತಿದೆ.

ಕಾಂಟ್ರಾಕ್ಟ್ ಫಾರ್ಮಿಂಗ್– ಗುತ್ತಿಗೆ ಕೃಷಿ ಅನ್ನುವಾಗ ಅದು ಲಕ್ಷ ಕೋಟಿ ಆಸ್ತಿಯ ದೈತ್ಯ ಕಂಪನಿಗಳು ಹಾಗೂ ಸಾಮಾನ್ಯ ರೈತರ ನಡುವೆ ಆಗುವ ಒಪ್ಪಂದ ಎನ್ನುವುದನ್ನು ಗಮನಿಸಬೇಕು. ಮತ್ತು ಇದು ಅಸಮಾನರ ನಡುವಿನ ಒಪ್ಪಂದ ಎನ್ನುವುದನ್ನು ಗಮನಿಸ ಬೇಕು. ದುರ್ಬಲರು ಮತ್ತು ಬಲಾಢ್ಯರ ನಡುವೆ ವೈರುಧ್ಯ ಬಂದು ದುರ್ಬಲರಿಗೆ ಅನ್ಯಾಯವಾದರೂ ನಮ್ಮ ರೈತರು ಸಂಕಷ್ಟಕ್ಕೆ ಸಿಲುಕಿದರೂ ನಮ್ಮ ಆಳುವ ಸರ್ಕಾರಗಳು ಬಲಾಢ್ಯರ ಪರವಹಿಸುವ ಪ್ರವೃತ್ತಿಯನ್ನೇ ತೋರಿಸುತ್ತ ಬಂದಿವೆ ಎಂಬುದನ್ನು ನಾವು ಇಲ್ಲಿ ಮರೆಯಬಾರದು.

ರಾಜ್ಯದಲ್ಲಿ ಈಗಲೂ ಬೀಜಗಳ ಉತ್ಪಾದನೆ ಮತ್ತು ಔಷಧ ಉತ್ಪಾದನೆಯಲ್ಲಿ ಗುತ್ತಿಗೆ ಕೃಷಿ ಇದೆ.

ಹತ್ತಿ ಬೀಜ ಉತ್ಪಾದನೆಯಲ್ಲಿ ಏನಾಗುತ್ತಿದೆ ಗಮನಿಸೋಣ. ಬಿತ್ತನೆಗೆ ಬಳಸುವ ಹತ್ತಿಯ ಬೀಜದ ಬೆಲೆ ಕೆ.ಜಿ.ಗೆ ಹತ್ತು ಸಾವಿರದಷ್ಟಿದೆ. ರೈತರೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವ ಕಂಪನಿಗೆ ಬೇಕಾಗಿದ್ದಾಗ, ಅನುಕೂಲವಿದ್ದಾಗ ಉತ್ಪನ್ನವನ್ನು ಅದು ಕೊಂಡುಕೊಳ್ಳುತ್ತದೆ. ಆದರೆ ಬೆಲೆ ಕುಸಿಯುವ ಬೀತಿ ಇತ್ಯಾದಿ ಆತಂಕಗಳಿದ್ದಾಗ ಅಂದರೆ ಕಂಪನಿಗೆ ಉತ್ಪನ್ನ ಬೇಡವಾದಾಗ ಗುಣಮಟ್ಟದ ಕೊರತೆ ಅಥವಾ ಇತ್ಯಾದಿ ನೆಪ ಇತ್ಯಾದಿ ಕಾರಣ ಹೇಳಿ ಉತ್ಪನ್ನ ಕೊಳ್ಳುವುದನ್ನು ನಿರಾಕರಿಸಲಾಗುತ್ತದೆ. ತೊಂದರೆ ಬಂದಾಗ ರೈತರ ಮೇಲೆ ಹಾಕುವುದು. ಲಾಭ ಬಂದರೆ ತಾವು ದೋಚಿಕೊಳ್ಳುವುದು ಇಂತಹದ್ದು ನಡೆಯುತ್ತದೆ. ಬದ್ದತೆ ಪೂರೈಸಲಾಗದ ರೈತ ಭೂಮಿ ಮಾರಿಕೊಳ್ಳ ಬೇಕಾದ ಪರಿಸ್ಥಿತಿ ಬರುತ್ತದೆ.

ಉದ್ಯೋಗ ನಾಶ

ಕೃಷಿರಂಗದಲ್ಲಿ ಬಹುರಾಷ್ಟ್ರೀಯ ಕಂಪನಿಗಳು, ಕಾರ್ಪೊರೇಟ್ ಕಂಪನಿಗಳು ಪ್ರಾಬಲ್ಯ ಸಾಧಿಸುವವುದು, ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಮೇಲೆ ಈ ಶಕ್ತಿಗಳು ಹಿಡಿತ ಸಾಧಿಸಿವುದು ಆದರೆ ಕೃಷಿರಂಗದಲ್ಲೂ ವ್ಯಾಪಾರ, ವಾಣೀಜ್ಯ ಕ್ಷೇತ್ರ ಈಗ ಇರುವ ಅಪಾರ ಪ್ರಮಾಣದ ಉದ್ಯೋಗ ನಾಶವಾಗುವುದು ಎಂದೇ ಅರ್ಥ. ಕಂಪನಿ ಕೃಷಿ ಎಂದರೆ ಭಾರಿ ಯಂತ್ರೋಪಕರಣಗಳ ಬಳಕೆ ಎಂದರ್ಥ. ಅಲ್ಲಿ ಮನುಷ್ಯ ಶ್ರಮ ಶಕ್ತಿಯನ್ನು ತೊಡಗಿಸಲು ಸೀಮಿತವಾದ ಅವಕಾಶ. ಇದರಿಂದ ಉದ್ಯೋಗ ನಾಶವಾಗುತ್ತದೆ. ಅದೇ ರೀತಿಯಲ್ಲಿ ಬೃಹತ್ ಮಾಲುಗಳು, ದೊಡ್ಡ ಕಂಪನಿಗಳ ವ್ಯಾಪಾರ ವಹಿವಾಟು ಹೆಚ್ಚುವುದು ಎಂದರೆ ಕಡಿಮೆ ಉದ್ಯೋಗಿಗಳನ್ನು ಬಳಸಿ ದೊಡ್ಡ ವಹಿವಾಟು ನಡೆಸುವುದು ಎಂದು ಅರ್ಥ. ಈ ಲೆಕ್ಕದಲ್ಲೂ ಉದ್ಯೋಗ ನಾಶ. ಸಣ್ಣ ವ್ಯಾಪಾರಿಗಳು ಬೀದಿಗೆ ಬೀಳುವ ಪ್ರಸಂಗಗಳು ಬರುತ್ತವೆ.

ಇಲ್ಲಿ ಸರ್ಕಾರ ಮರೆ ಮಾಚುತ್ತಿರುವ ಮತ್ತೊಂದು ಅಂಶವಿದೆ. ಬಹುರಾಷ್ಟ್ರೀಯ ಕಂಪನಿಗಳು, ಕಾರ್ಪೊರೇಟ್ ಸಂಸ್ಥೆಗಳು ಕೃಷಿಗೆ ಬಂದಿರುವ ಕಡೆ ಭೂಮಿಯ ಫಲವತ್ತತೆ ಕಾಪಾಡದೇ ದುರ್ಬಳಕೆ ಮಾಡಿಕೊಂಡು ಅತಿ ಕಡಿಮೆ ಅವಧಿಯಲ್ಲಿ ಫಲವತ್ತತೆ ನಾಶ ಮಾಡಿ ಹೋಗುವ ಪ್ರವೃತ್ತಿಗಳಿವೆ. ಅಂದರೆ ನಮ್ಮ ಕೃಷಿಯು ಹೆಚ್ಚು ಹೆಚ್ಚು ಸುಸ್ಥಿರ ಕೃಷಿಯ ಕಡೆ ಹೋಗುವ ಬದಲಿಗೆ ಇಂತಹ ಕೃಷಿ ಭೂಮಿಯ ನಾಶದಂತಹ ಪರಿಸರ ವಿರೋಧಿ ದಾರಿಗೆ ಹೋದಂತಾಗುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸುರಪುರ, ಶಾಪುರ, ಹೊಸಪೇಟೆ ಮುಂತಾದ ಕೃಷ್ಣ, ತುಂಗಭದ್ರ ನದಿಗಳ ನೀರಾವರಿ ಪ್ರದೇಶದಲ್ಲಿ ರೈತರು ಭೂಮಿಯನ್ನು ಆಂಧ್ರದವರಿಗೆ ಗುತ್ತಿಗೆಗೆ ಕೊಡುತ್ತಾರೆ. ಆಂಧ್ರದ ಶ್ರೀಮಂತರು ಇಲ್ಲಿ ಬಂದು 5–10 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಇಲ್ಲಿನ ಭೂಮಿ ಬರಡು ಮಾಡಿ ಹೋಗುವುದು ನಡೆಯುತ್ತಿದೆ.

ಜನಶಕ್ತಿ: ಕೃಷಿಯಲ್ಲಿ ವಿದೇಶಿ, ದೇಶಿ ಖಾಸಗಿ ಬಂಡವಾಳ ಹೂಡಿಕೆಯಾಗುವುದರಿಂದ ರೈತರಿಗೆ ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ಉತ್ತಮ ಬೆಲೆಯ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಾದವಿದೆಯಲ್ಲ, ಆ ಬಗ್ಗೆ.....?

ಬಯ್ಯಾರೆಡ್ಡಿ: ಕೃಷಿ ಮೇಲಿನ ಹಿಡಿತ ಬಂಡವಾಳಗಾರರ ಕೈಗೆ ಸಿಕ್ಕರೆ ಕೃಷಿ ಮತ್ತು ಮಾರುಕಟ್ಟೆಗಳ ಮೇಲೆ ಬಹುರಾಷ್ಟ್ರಿಯ ಕಂಪನಿಗಳ ಹಿಡಿತ ಬಂದರೆ ಯಾವ ಉತ್ಪನ್ನಗಳನ್ನು ಯಾವಾಗ ಸಂಗ್ರಹ ಮಾಡಬೇಕು. ಯಾವಾಗ ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು ಎಂಬುದರ ನಿಯಂತ್ರಣ ಅವೇ ಬಲಾಢ್ಯ ಶಕ್ತಿಗಳ ಕೈಲಿರುತ್ತದೆ. ಹೀಗಾಗಿ ಕೃಷಿ ಉತ್ಪನ್ನಗಳ ಬೆಲೆಗಳನ್ನು ಈ ಕಂಪನಿಗಳೇ ನಿಯಂತ್ರಿಸುತ್ತವೆ. ಬೆಲೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಏರಿಳಿತಗೊಳಿಸಲಾಗುತ್ತದೆ. ಇದರಿಂದ ಮಾರುಕಟ್ಟೆ ಮೇಲೆ ಏಕಸ್ವಾಮ್ಯ ಸ್ಥಾಪನೆಯಾಗುತ್ತದೆ. ಶೇ. 100 ರಷ್ಟು ವಿದೇಶಿ ನೇರ ಬಂಡವಾಳ(ಎಫ್.ಡಿ.ಐ.)ಕ್ಕೆ ಅವಕಾಶ ನೀಡಲಾಗಿರುವ ಕೆನಡಾ, ಇತ್ಯಾದಿ ದೇಶಗಳ ಅನುಭವವೂ ಅದೇ ಆಗಿದೆ. ಜನ ಸಾಮಾನ್ಯರಿಗೆ ಲಾಭ ಸಿಗುವುದಿಲ್ಲ. ಇಡೀ ವ್ಯವಸ್ಥೆಯನ್ನು ಬಲಾಢ್ಯ ಕಂಪನಿಗಳೇ ನಿಯಂತ್ರಿಸುತ್ತವೆ. ಇಡೀ ಆಟವನ್ನು ಅವರೇ ಆಡುತ್ತಾರೆ. ಲಾಭ ಆಗುವುದು ಅವರಿಗೆ. ಅಕ್ರಮ ದಾಸ್ತಾನು ಮಾಡುವುದು, ಕೃತಕ ಅಭಾವ ಸೃಷ್ಟಿಸಿ ತಮಗೆ ಬೇಕಾದಾಗ ಬೆಲೆಗಳನ್ನು ಏರಿಸಿಕೊಳ್ಳುವುದು ಈ ಎಲ್ಲವನ್ನು ಬಹುರಾಷ್ಟ್ರೀಯ ಕಂಪನಿಗಳು ಸುಲಭವಾಗಿ ಮಾಡುತ್ತವೆ. ಅದನ್ನು ತಡೆಯುವ ಶಕ್ತಿ ಬಡ ರೈತರಿಗೆ ಇರುವುದಿಲ್ಲ. ಸರ್ಕಾರ ರೈತರ ಪರ ವಹಿಸುವುದಿಲ್ಲ.

ನಮ್ಮಲ್ಲಿ ಹೆಚ್ಚಿಗೆ ಅಂದರೆ ನಮ್ಮ ಕೃಷಿ ರಂಗದ ಶೇ.10–15 ರಷ್ಟು ಜನರಿಗೆ ಮಾತ್ರ ಲಾಭ ಆಗುತ್ತದೆ. ಈ ಕೆಲವೇ ಜನರಿಗೆ ಲಾಭ ಆಗುವುದನ್ನು ಎಲ್ಲರಿಗೂ ಲಾಭ ಆಗುತ್ತದೆ ಎಂದು ಹೇಳುವುದು ಮೋಸ ಮತ್ತು ತುಂಬಾ ಅಪಾಯಕಾರಿ. ಕೃಷಿರಂಗದ ಬಿಕ್ಕಟ್ಟು ತೀವ್ರವಾಗಿದೆ. ಅದು ಬಗೆ ಹರಿಯಬೇಕಾದರೆ ಭೂ ಹೀನರಿಗೆ ಭೂಮಿ ಹಂಚುವ ಭೂ ಸುಧಾರಣೆಯ ಆಧಾರದಲ್ಲಿ ಸರ್ಕಾರ ಕೃಷಿಗೆ ಅಗತ್ಯ ಬೆಂಬಲ ನೀಡುವುದು, ಸೂಕ್ತ ಸಾಲ ಸೌಲಭ್ಯ, ಮಾರುಕಟ್ಟೆ ಒದಗಿಸುವುದು, ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚುವುದು ಅಂದರೆ ಸರ್ಕಾರ ಹೆಚ್ಚು ಬಂಡವಾಳ ಹೂಡುವುದು ಇಂತಹ ಪರ್ಯಾಯ ನೀತಿಗಳಿಂದ ಮಾತ್ರ ಸಾಧ್ಯ.

ಕಾಂಗ್ರೆಸ್ ಮುಖಂಡ, ಕೇಂದ್ರ ಸಚಿವ ಎಂ. ವೀರಪ್ಪ ಮೊಯಿಲಿ ಈ ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಸಂಘಟಿಸಿದ್ದಕ್ಕೆ ಬಿಜೆಪಿ ಸರ್ಕಾರವನ್ನು ಅಭಿನಂದಿಸಿದ್ದಾರೆ. ಅಂದರೆ ಈ ನೀತಿಗಳ ವಿಷಯದಲ್ಲಿ ಕಾಂಗ್ರೆಸ್ ಬಿಜೆಪಿ ಎರಡೂ ಒಂದೇ. ಇದನ್ನು ರೈತರು ಜನತೆ ಅರ್ಥ ಮಾಡಿಕೊಳ್ಳಬೇಕು.

ಖಾಸಗಿ ಬಂಡವಾಳದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಶೈತ್ಯಾಗಾರ(ಕೋಲ್ಡ್ ಸ್ಟೋರೇಜ್)ಗಳ ಸ್ಥಾಪನೆ ಆಗುತ್ತದೆ. ಅದರಿಂದ ಕೃಷಿಗೆ ಅನುಕೂಲ ಎಂಬ ವಾದಗಳಿವೆ. ಖಾಸಗಿ ಬಂಡವಾಳ ಬರಲೇ ಬಾರದು ಎಂದು ಹೇಳಲಾಗದು. ಪ್ರಾಂತ ರೈತ ಸಂಘ, ಎಡಪಕ್ಷಗಳು ಹಾಗೆ ಹೇಳುತ್ತಿಲ್ಲ. ಆದರೆ ಖಾಸಗಿ ಬಂಡವಾಳಕ್ಕೆ ಸಂಪೂರ್ಣ ಹಿಡಿತವನ್ನು ಕೊಡುವಂತಹ ಪರಿಸ್ಥಿತಿ ಬರಬಾರದು. ಆದರೆ ರಾಜ್ಯ ಸರ್ಕಾರ ಆಯೋಜಿಸಿದ ಮತ್ತು ಕೇಂದ್ರ ಸರ್ಕಾರ ಬೆಂಬಲಿಸಿದ ಈ ವಿಶ್ವ ಹೂಡಿಕೆದಾರರ ಸಮಾವೇಶ ನಮ್ಮ ಕೃಷಿರಂಗವನ್ನು ಅಂತಹ ಪರಿಸ್ಥಿತಿಯ ಕಡೆಗೆ ದೂಡಲಿದೆ. ಆದರೆ ರೈತರು, ಕೂಲಿಕಾರರು ರಾಜ್ಯದ ಜನತೆ, ದುಡಿಯುವ ಜನತೆ ಇಂತಹ ಅಪಾಯಕಾರಿ ನೀತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸಲಿದ್ದಾರೆ. ಇದರಲ್ಲಿ ಯಾವುದೇ ಅನುಮಾನವಿಲ್ಲ.

ಯುಪಿಎ ದರ್ಬಾರ್

ಪುಟ 13 ರಿಂದ

ಸಲ್ಲಿಸಲ್ಪಟ್ಟಿವೆ, ಇವುಗಳಲ್ಲಿ ತಿರಸ್ಕರಿಸಲ್ಪಟ್ಟ ದಾವೆಗಳ ಸಂಖ್ಯೆ ಅತ್ಯಲ್ಪ.

ಈ ನಡುವೆ ಯೂನಿಯನ್ ಕಾರ್ಬೈಡನ್ನು ಈಗ ವಹಿಸಿಕೊಂಡಿರುವ ಡೌ ಕೆಮಿಕಲ್ಸ್ ಈ ದುರಂತ ಪೀಡಿತರಿಗೆ ಹೆಚ್ಚಿನ ಪರಿಹಾರವನ್ನು ಕೊಡುವುದಿಲ್ಲ ಎಂದು ಹೇಳಿದೆ. ದೇಶಾದ್ಯಂತ ನಡೆದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಈ ವರ್ಷದ ಆರಂಭದಲ್ಲಿ (ಫೆಬ್ರುವರಿ) ಸುಪ್ರಿಂ ಕೋರ್ಟ್ 21 ವರ್ಷಗಳ ಹಿಂದೆ ಪರಿಹಾರಕ್ಕೆ ಸಂಬಂಧಪಟ್ಟಂತೆ ನೀಡಿದ ತೀರ್ಪನ್ನು ಮರುಪರಿಶೀಲನೆಗೆ ಎತ್ತಿಕೊಂಡಿತು. ಸಾರ್ವಜನಿಕ ಒತ್ತಡದಿಂದಾಗಿ ಯುಪಿಎ ಸರಕಾರ ಪರಿಹಾರದ ಮೊತ್ತವನ್ನು 750 ಕೋಟಿ ರೂ.ಗಳಿಂದ 7700 ಕೋಟಿ ರೂ.ಗೇರಿಸಬೇಕೆಂದು ಅರ್ಜಿ ಹಾಕಿತು. ಈ ಬಗ್ಗೆ ಸುಪ್ರಿಂ ಕೋರ್ಟ್ ಕಳಿಸಿದ ನೋಟೀಸಿಗೆ ಡೌ ಕೆಮಿಕಲ್ಸ್ ಈಗ ಉತ್ತರಿಸಿದ್ದು 1989ರಲ್ಲಿಯೇ ಈ ಬಗ್ಗೆ ಇತ್ಯರ್ಥವಾಗಿರುವುದರಿಂದ ತಾನು ಹೆಚ್ಚಿನ ಪರಿಹಾರ ಕೊಡುವುದಿಲ್ಲ ಎಂದು ಖಡಾಖಂಡಿತ ವಾಗಿ ಹೇಳಿದೆ. ಅಲ್ಲದೆ ಭೋಪಾಲ್ ಸ್ಥಾವರ ವನ್ನು ಯೂನಿಯನ್ ಕಾರ್ಬೈಡ್ ನಡೆಸುತ್ತಿರಲಿಲ್ಲ, ಭಾರತೀಯರೇ ನಡೆಸುತ್ತಿದ್ದರು ಎಂದಿದೆ. ಈಗಾಗಲೇ ಕೊಟ್ಟಿರುವ ಪರಿಹಾರ ಭಾರತದ ಕಾನೂನಿನ ಪ್ರಕಾರ ಮೂರು ಪಟ್ಟು ಹೆಚ್ಚು ಎಂದೂ ಅದು ಹೇಳಿದೆ. ಈ ಬಗ್ಗೆ ಯುಪಿಎ–2 ಸರಕಾರದ ಪ್ರತಿಕ್ರಿಯೆ ಇನ್ನೂ ಬಂದಿಲ್ಲ.

ಅತ್ತ ಲಂಡನ್ ಒಲಿಂಪಿಕ್ ಕ್ರೀಡಾಕೂಟಕ್ಕೆ ಇದೇ ಡೌ ಕೆಮಿಕಲ್ಸ್ ನ ಪ್ರಾಯೋಜನೆಗೆ ದೇಶ–ವಿದೇಶಗಳಲ್ಲಿ ಬಹಳಷ್ಟು ವಿರೋಧ ಬಂದಿದೆ. ಆದರೆ ಕ್ರೀಡಾಕೂಟದ ಸಂಘಟಕರು ಇದನ್ನು ರದ್ದು ಮಾಡುವುದು ಸಾಧ್ಯವಿಲ್ಲ ಎಂದಿದ್ದಾರೆ. ಸಾಧ್ಯವಿಲ್ಲವಾದರೆ ಭಾರತ ಈ ಕ್ರೀಡಾಕೂಟವನ್ನು ಬಹಿಷ್ಕರಿಸಬೇಕು ಎಂಬ ಒತ್ತಾಯವೂ ಈ ದುರಂತದ 27ನೇ ವಾರ್ಷಿಕದ ಸಂದರ್ಭದಲ್ಲಿ, ಡೌ ಕೆಮಿಕಲ್ಸ್‌ನ ಭಂಡ ನಿರಾಕರಣೆಯ ಹಿನ್ನೆಲೆಯಲ್ಲಿ ಬಂದಿದೆ. ಯಥಾಪ್ರಕಾರ ಯುಪಿಎ–2 ಸರಕಾರದ ಮುಖ್ಯಸ್ಥರದ್ದು ದಿವ್ಯ ಮೌನ.

ಭಗತ್‌ಸಿಂಗ್ ಮಕ್ಕಳ ಕೂಟದಿಂದ ಸಂಭ್ರಮದ ಮಕ್ಕಳ ದಿನಾಚರಣೆ

ನವೆಂಬರ್ 14 ಜವಹರಲಾಲ್ ನೆಹರು ಹುಟ್ಟಿದ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವ ಸಂಪ್ರದಾಯ ಇಂದು ಕೇವಲ ಶಾಲೆಗಳಿಗೆ ಮಾತ್ರವೇ ಸೀಮಿತವಾಗಿದೆ. ಶಾಲೆಗಳಲ್ಲೂ ಕೂಡ ಕಾರ್ಯಕ್ರಮ ಸಾಂಕೇತಿಕವಾಗಿ ನಡೆಯುತ್ತಿವೆ.

ಇದಕ್ಕೆ ಅಪವಾದವೆಂಬಂತೆ ಬೆಂಗಳೂರಿನ ಹೊಸೂರು ರಸ್ತೆ ಚಿಕ್ಕಬೇಗೂರು ಗೇಟ್ ಪ್ರದೇಶದಲ್ಲಿ ನಡೆಸಿದ ಮಕ್ಕಳ ದಿನಾಚರಣೆ ಕಾರ್ಯಕ್ರಮ ಜನ-ಮನ ಸೆಳೆದಿದೆ. ಪೋಷಕರಿಂದ ಉತ್ತಮ ಬೆಂಬಲವೂ ದೊರಕಿದೆ. ಈ ವಿಶಿಷ್ಠ ಪ್ರಯತ್ನಕ್ಕೆ ಕಾರಣ 'ಭಗತ್‌ಸಿಂಗ್ ಮಕ್ಕಳ ಕೂಟ' ಎಂಬ ಮಕ್ಕಳದೇ ಆದ ಒಂದು ಸಂಘ. ಈ ಸಂಘದ ನೇತೃತ್ವದಲ್ಲೇ ಕಾರ್ಯಕ್ರಮ ನಡೆದಿರುವುದು ವಿಶೇಷ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಪ್ರೀತಿಯಿಂದ ಕಂಡಲ್ಲಿ ಅವರಿಂದ ಅಸಾಧ್ಯವಾದುದನ್ನು ನಿರೀಕ್ಷಿಸಬಹುದು ಎಂಬುದಕ್ಕೆ ಈ ಕಾರ್ಯಕ್ರಮ ಸ್ಪಷ್ಟ ಉದಾಹರಣೆ. ಕಾರ್ಯಕ್ರಮಕ್ಕೆ ನಿಧಿ ಸಂಗ್ರಹ, ಕಾರ್ಯಕ್ರಮ ಹೇಗಿರಬೇಕೆಂಬ ಪಟ್ಟಿ ತಯಾರಿಸುವುದು, ಪ್ರತಿದಿನ ಸಂಜೆ ಮನೆ-ಮನೆ ಪ್ರಚಾರ ನಡೆಸುವುದು, ಕಾರ್ಯಕ್ರಮದಲ್ಲಿ ಸ್ಪರ್ಧೆಗಳಿಗೆ ಹೆಸರು ನೊಂದಾಯಿಸಿಕೊಳ್ಳುವುದು, ಕಾರ್ಯಕ್ರಮ ನಡೆಯುವ ಸ್ಥಳವನ್ನು ಸ್ವಚ್ಛಗೊಳಿಸುವುದು, ಬಂಟಿಂಗ್ಸ್ ಕಟ್ಟುವುದು ಎಲ್ಲವನ್ನೂ ಮಕ್ಕಳೇ ಮಾಡಿದ್ದಾರೆ. ಇವರಿಗೆ ಬೆಂಬಲವಾಗಿ ನಿಂತಿದ್ದು ಇಲ್ಲಿನ ಡಿವೈಎಫ್‌ಐ ಗೆಳೆಯರು.



ನವೆಂಬರ್ 14 ರಂದು ಸಂಜೆ 4ಗಂಟೆಗೆ ಪ್ರಾರಂಭಗೊಂಡ ಕಾರ್ಯಕ್ರಮ, ರಾತ್ರಿ 10ರವರೆಗೆ ನಡೆಯಿತು. ಮಕ್ಕಳಿಗಾಗಿ ಪ್ರತಿಭಾ ಪ್ರದರ್ಶನ ಸ್ಪರ್ಧೆ, ಚಿತ್ರ ಬರೆಯುವ ಸ್ಪರ್ಧೆ ಮತ್ತು ಮತ್ತು ಭಗತ್‌ಸಿಂಗ್ ಜೀವನ ಚಿತ್ರ ಕುರಿತ ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಯಿತು. ಈ ಮೂರೂ ಸ್ಪರ್ಧೆಗಳಲ್ಲಿ ಸುಮಾರು 100 ಕ್ಕೂ ಹೆಚ್ಚು ಮಕ್ಕಳು ಉತ್ಸುಕತೆಯಿಂದ ಪಾಲ್ಗೊಂಡಿದ್ದರು. ಪ್ರತಿಭಾ ಪ್ರದರ್ಶನ ಸ್ಪರ್ಧೆಯಲ್ಲಿ ಮಕ್ಕಳು ನೀಡಿದ ಪ್ರದರ್ಶನ ಮಕ್ಕಳಲ್ಲಿರುವ ಅಸಾಧಾರಣ ಪ್ರತಿಭೆಗಳನ್ನು ತೆರೆದಿಟ್ಟದ್ದವು. ಹಾಡು, ಡಾನ್ಸ್, ಭಾಷಣ, ಕರಾಟೆ, ಮ್ಯೂಸಿಕ್, ಮ್ಯಾಜಿಕ್, ವೇಷಭೂಷಣ ಜೊತೆಗೆ ಅರುಣ್‌ಕುಮಾರ್ ಎಂಬ ಹುಡುಗ ಮಕ್ಕಳು ಹಣ ಉಳಿತಾಯ ಮಾಡಲು 'ಮಕ್ಕಳ ಎಟಿಎಮ್' ತಯಾರಿಸಿ ಅದನ್ನು ಸಭಿಕರಿಗೆ ಪರಿಚಯಿಸಿದಾಗ ನೆರೆದವರಿಂದ ಹರ್ಷೋದ್ಗಾರ, ಹೀಗೆ ಮಕ್ಕಳು ತಮಗಿರುವ ಪ್ರತಿಭೆಯನ್ನು ವಿಶಾಲವಾದ ವೇದಿಕೆಯಲ್ಲಿ ಪ್ರದರ್ಶಿಸಿದರು. ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರತಿ ಸ್ಪರ್ಧೆಗೆ ತಲಾ 4 ಬಹುಮಾನಗಳಂತೆ ಬಹುಮಾನ ವಿತರಿಸಲಾಯಿತು. ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ 100 ಮಕ್ಕಳಿಗೂ ಪದಕ



ಪ್ರಶಂಸಾ ಪತ್ರ ಹಾಗೂ ನೋಟ್ ಪುಸ್ತಕನ್ನು ನೀಡಲಾಯಿತು. ಇದಾದ ನಂತರ ಹುಲಿಕಲ್ ನಟರಾಜ್‌ರವರಿಂದ 'ಪವಾಡ ರಹಸ್ಯ ಬಯಲು' ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಉಪನಿರ್ದೇಶಕರಾದ ಜಯಕುಮಾರ್, ನೆಹರು ಅವರ ಜೀವನ ಕುರಿತು ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಲಿಂಗರಾಜು ಭಗತ್‌ಸಿಂಗ್ ಜೀವನ ಕುರಿತು ಮಾತನಾಡಿದರು. ಕೆ.ಸಿ.ಪ್ರತಾಪ್ ಮತ್ತು ಎನ್.ದಯಾನಂದ ಕಾರ್ಯಕ್ರಮ ನಿರೂಪಿಸಿದರು.

ವರದಿ : ಲಿಂಗರಾಜು

'ಬೀದಿಗೆ ಬಂದ ಭ್ರಷ್ಟಾಚಾರ' ಬರಗೂರರ ಕಿರುಹೊತ್ತಿಗೆ ಬಿಡುಗಡೆ

ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆಯು ನಗರದ 'ಚಾವಡಿ, ಕನ್ನಡ ಭವನ'ದಲ್ಲಿ 3 ಡಿಸೆಂಬರ್ ರಂದು 'ನಾಡೋಜ ಬರಗೂರು ರಾಮಚಂದ್ರಪ್ಪ'ನವರ ' ಬೀದಿಗೆ ಬಂದ ಭ್ರಷ್ಟಾಚಾರ' ಕಿರು ಹೊತ್ತಿಗೆ ಬಿಡುಗಡೆ ಸಮಾರಂಭವನ್ನು ಆಯೋಜಿಸಿತ್ತು.

ಭಾರತೀಯರು, ರಾಜ-ಮಹಾರಾಜರ, ನಿರಂಕುಶತ್ವದ, ವಿದೇಶೀ ಆಳ್ವಿಕೆಯನ್ನು ಕಂಡುಂಡು ರೋಸಿ ಕಾನೂನಿನ ಚೌಕಟ್ಟಿನಲ್ಲಿ ವೈಯಕ್ತಿಕ ಸ್ವಾತಂತ್ರ್ಯದ ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಂಡಿದ್ದರು. ಸ್ವಾತಂತ್ರ್ಯದ 60 ವರ್ಷಗಳ ನಂತರ ಭ್ರಷ್ಟಾಚಾರದ ಇನ್ನೊಂದಿಷ್ಟು ಕರಾಳ ಮುಖಗಳು ಪ್ರಾರಂಭವಾಗಿವೆ. ಜನತಾಸೇವೆಗಾಗಿ ಇರಬೇಕಾದ ಪ್ರತಿನಿಧಿಗಳು ಪ್ರಭುಗಳೋಪಾದಿಯಲ್ಲಿ ಮೆರೆಯುತ್ತಿದ್ದಾರೆ. ಪ್ರಜೆಗಳು, ಪ್ರಜೆಗಳಿಗಾಗಿ, ಪ್ರಜೆಗಳಿಂದ ನಡೆಯಬೇಕಾದ ಸರ್ಕಾರ ಇಂದು ಕೆಲವರು, ಕೆಲವರಿಗಾಗಿ, ಕೆಲವರಿಂದ, ನಡೆವ ಸರ್ಕಾರವಾಗಿದೆ. ಚುನಾವಣಾ ಕಾನೂನುಗಳು ಬದಲಾಗಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅರಸೊತ್ತಿಗೆ ಮತ್ತು ವಂಶಪಾರಂಪರ್ಯ ಪದ್ಧತಿಯ ಪರಿಕಲ್ಪನೆ ಹೊಸ ರೀತಿಯಲ್ಲಿ ಪ್ರಕಟವಾಗುತ್ತಿದೆ. ಭ್ರಷ್ಟಾಚಾರ ಸಂಸ್ಕೃತಿ ಎನ್ನುವ ರೀತಿಯಲ್ಲಿ ಬೆಳೆಯುತ್ತಿದೆ. ಅದರ ನಿರ್ಮೂಲನೆಗೆ ಎಲ್ಲರೂ ಕಂಕಣ ಬದ್ಧರಾಗಬೇಕು ಎಂದು ಕಿರು ಹೊತ್ತಿಗೆಯನ್ನು ಬಿಡುಗಡೆಗೊಳಿಸುತ್ತಾ ನಿವೃತ್ತ ನ್ಯಾಯಮೂರ್ತಿ ಲೋಕಾಯುಕ್ತ ಎನ್. ಸಂತೋಷ ಹೆಗಡೆಯವರು ಹೇಳಿದರು.

ಅತಿಥಿಗಳಾದ ಮರುಳಸಿದ್ಧಪ್ಪನವರು ಮಾತನಾಡಿ ವಿಧಾನ ಸಭೆ, ದೇವಸ್ಥಾನ ಮತ್ತು ಮಠಗಳ ಒಳಗಿದ್ದ ಭ್ರಷ್ಟಾಚಾರ ಬೀದಿಗೆ ಬಂದದ್ದರಿಂದ ಚರ್ಚೆಯ ವಿಷಯವಾಗಿದೆ. ಚುನಾವಣೆಯಿಂದ ಚುನಾವಣೆಗೆ ಪ್ರತಿನಿಧಿಗಳ ಮೌಲ್ಯ ಹೆಚ್ಚುವುದರ ಬದಲು ಭ್ರಷ್ಟವಾಗುತ್ತಿದೆ.



ವರದಿ : ಛಾಯಾ ಐ.ಕೆ

ಲಜ್ಜೆ, ಸಜ್ಜನಿಕೆ ಮತ್ತು ಪಾರದರ್ಶಕತೆ ಇದ್ದವನು ನಾಯಕ ಎಂಬ ಭಾವನೆ ಹಿಂದೆ ಇತ್ತು ಇಂದು ಎಲ್ಲ ಬಿಟ್ಟವನು ನಾಯಕನಾಗಿದ್ದಾನೆ. ಯಾವ ಕ್ಷೇತ್ರವೂ ಭ್ರಷ್ಟಾಚಾರದಿಂದ ಹೊರತಾಗಿಲ್ಲ. ವ್ಯವಸ್ಥೆಯೇ ಸೇರಿ ನಡೆಸುವ ಭ್ರಷ್ಟಾಚಾರ ಉದಾರೀಕರಣ. ಭ್ರಷ್ಟಾಚಾರದಷ್ಟೇ ಘೋರವಾದದ್ದು ಜಾತಿವಾದ ಮತ್ತು ಕೋಮುವಾದವಾಗಿದೆ.ಭ್ರಷ್ಟಾಚಾರವನ್ನು ಕಿತ್ತೊಗೆಯಲು ಮೂಲ ಸಾಮಾಜಿಕ ಚಳುವಳಿ ಆರಂಭವಾಗಿ ಅರಿವು ಮೂಡಿಸಲು ಸಾಧ್ಯವಾಗಬೇಕು ಎಂದರು.

ಇನ್ನೋರ್ವ ಅತಿಥಿಗಳಾದ ಸಿದ್ಧನಗೌಡ ಪಾಟೀಲರು ಭ್ರಷ್ಟಾಚಾರ ಕೇವಲ ಚಟುವಟಿಕೆಯಾಗಿರದೇ ಸಂಸ್ಕೃತಿಯಾಗಿ ಬದಲಾಗಿದೆ. ಇದರ ಮೂಲೋತ್ಪಾಟನೆಗೆ ಚಳುವಳಿ ರಾಜಕಾರಣ ಬರಬೇಕು. ಭ್ರಷ್ಟಾಚಾರಿಗಳಿಗೆ ಕೊಡುವ ಗೌರವ ಕಡಿಮೆಯಾಗಬೇಕು. ಎಲ್ಲ ಮಾಧ್ಯಮಗಳ ಮೂಲಕ ಭ್ರಷ್ಟಾಚಾರ ವಿರೋಧಿ ಸಾಂಸ್ಕೃತಿಕ ಜಾಥಾ

ಪುಟ 2 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH